ಸಂಪುಟ: 04 ಸಂಚಿಕೆ: 110 ಪುಟಗಳು: 08 ಬುಧವಾರ 03 ಜುಲೈ 2024
www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**
ಮನಸ್ಸನ್ನು ಶಕ್ತಿಯುತವೂ, ಶಿಸ್ತುಬದ್ಧವೂ ಆಗಿ ಸುವುದರಲ್ಲಿಯೇ ಜ್ಞಾನದ ಮೌಲ್ಯವಿರುವಂಥದ್ದು.

ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಹಿಂದೂಗಳು ಯಾರೂ ಹಿಂಸಕರಲ್ಲ ರಾಹುಲ್ ವಿರುದ್ಧ ಮುತಾಲಿಕ್ ಕಿಡಿ

• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್ ಮುಖಂಡ ಹಾಗೂ ವಿಪಕ್ಷದ ನಾಯಕ ರಾಹುಲ್ ಗಾಂಧಿ ನೀಡಿದ ಹಿಂದೂಗಳ ವಿರುದ್ಧದ ಹೇಳಿಕೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ. ಇದೀಗ ಶ್ರೀರಾಮ ಸೇನೆಯ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ರಾಹುಲ್ ಗಾಂಧಿ ವಿರುದ್ಧ ಕಿಡಿಕಾರಿದ್ದಾರೆ. ಗರ್ವದಿಂದ ಹೇಳುತ್ತಿದ್ದೇನೆ ನಾನೊಬ್ಬ ಹಿಂದೂ,. ಈ ದೇಶದಲ್ಲಿ ಕೋಟ್ಯಾಂತರ ಜನ ಹಿಂದೂ ಎಂದು ಹೇಳಿಕೊಳ್ಳಲು ಅತ್ಯಂತ ಹೆಮ್ಮೆ ಇದೆ. ನಾನು ಸುಳ್ಳು ಹೇಳೋದಿಲ್ಲ, ಮೋಸ ಮಾಡುವುದಿಲ್ಲ. ನಾವ್ಯಾರೂ ಹಿಂಸಕರಲ್ಲ ಎಂದು ವಿಡಿಯೋ ಮೂಲಕ ಮುತಾಲಿಕ್ ರಾಹುಲ್ ಹೇಳಿಕೆ ವಿರುದ್ಧ ಆಕ್ರೋಶ ಹೊರ ಹಾಕಿದ್ದಾರೆ. ನೀವು ಕೋಟಿ ಕೋಟಿ ಹಿಂದೂಗಳಿಗೆ ಅವಮಾನ ಮಾಡಿದ್ದೀರಿ. ಹಿಂದೂ ಧರ್ಮ ಯಾವತ್ತೂ ಹಿಂಸಾಚಾರ ಬೋಧಿಸಿಲ್ಲ. ಸರ್ವೇ ಜನ ಸುಕಿನೋ ಭವಂತು, ಎಲ್ಲಾರೂ ಸಂತೋಷದಿಂದಿರಿ ಎಂದು ಹೇಳಿದ ಏಕೈಕ ಧರ್ಮ ಹಿಂದೂ. ಹಿಂದೂಗಳು ಸಹಿಷ್ಣುತೆ ಎಂದಿದ್ದಾರೆ.

## ಹಿಂದೂ ಧರ್ಮ ಯಾವತ್ತೂ ದ್ವೇಷ, ಭಯವನ್ನು ಹರಡುವುದಿಲ್ಲ

• ಉದಯವಾಹಿನಿ, ಬೆಂಗಳೂರು

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಿಂದೂ ಧರ್ಮ ಯಾವತ್ತೂ ದ್ವೇಷ ಮತ್ತು ಭಯವನ್ನು ಹರಡುವುದಿಲ್ಲ ಎಂದು ಹೇಳಿದ್ದಾರೆ. ಹಿಂದುತ್ವದ ಹೆಸರಿನಲ್ಲಿ ಬಿಜೆಪಿ ವ್ಯವಸ್ಥಿತವಾಗಿ ಈ ಕೆಲಸ ಮಾಡುತ್ತಿದೆ ಮತ್ತು ಸಂವಿಧಾನವನ್ನು ತಿರುಚುವ ಪ್ರಯತ್ನ ಮಾಡುತ್ತಿದೆ ಎಂದು ಹೇಳಿದ್ದಾರೆ ಅಂತ ಮಾಜಿ ಪರಿಷತ್ ಸದಸ್ಯ ಹಾಗೂ ಕೆಪಿಸಿಸಿ ಮಾಧ್ಯಮ ಹಾಗೂ ಸಂವಹನ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಸ್ಪಷ್ಟಪಡಿಸಿದ್ದಾರೆ. ಇಂದು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವಂತ ಅವರು, ಕಾಂಗ್ರೆಸ್ ಪಕ್ಷದ ನಾಯಕರು ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕರೂ ಆದ ರಾಹುಲ್ ಗಾಂಧಿ ರವರು ಕೇಂದ್ರದ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಾಯದ ಸಂದರ್ಭದಲ್ಲಿ ಅತ್ಯಂತ ಸಮರ್ಥವಾಗಿ ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ ಎಂದಿದ್ದಾರೆ.

## ಅವರಿಗೆ ಇವರಿಗೆ ಕೊಡಿ ಎನ್ನುವುದಕ್ಕೆ ಸಿಎಂ ಹುದ್ದೆ ಕಡಲೆಪುರಿನಾ

• ಉದಯವಾಹಿನಿ, ಬೆಂಗಳೂರು

ಅವರಿಗೆ ಕೊಡಿ ಇವರಿಗೆ ಕೊಡಿ ಎನ್ನುವುದಕ್ಕೆ ಸಿಎಂ ಹುದ್ದೆ ಅದೇನು ಕಡಲೆಪುರಿನಾ ಅದು ನನ್ನ ಕೈಯ್ಯಲ್ಲೂ ಇಲ್ಲ, ಧರ್ಮಗುರುಗಳ ಕೈಯ್ಯಲ್ಲೂ ಇಲ್ಲ. ಶಾಸಕರ ಬೆಂಬಲ ಕ್ರೋಢಿಕರಿಸಿಯೇ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾರೆ ಎಂದು ಸಮಾಜ ಕಲ್ಯಾಣ ಸಚಿವ ಹೆಚ್‌ಸಿ ಮಹಾದೇವಪ್ಪ ಹೇಳಿದ್ದಾರೆ.

ಸಿಎಂ, ಡಿಸಿಎಂ, ಅಧ್ಯಕ್ಷ ಹುದ್ದೆಯ ಬಗ್ಗೆ ಯಾರೂ ಬಹಿರಂಗ ಹೇಳಿಕೆ ನೀಡಬಾರದು. ಈ ರೀತಿ ಹೇಳಿಕೆ ನೀಡಿದವರಿಗೆ ನೋಟಿಸ್ ನೀಡಲಾಗುವುದು ಎಂದು ಡಿಸಿಎಂ ಡಿಕೆ ಶಿವಕುಮಾರ್ ಎಚ್ಚರಿಕೆ ನೀಡಿದ ಮರು ದಿನವೇ ಸಿಎಂ ಆಪ್ತ ಮಹಾದೇವಪ್ಪ ಈಗ ಬಹಿರಂಗವಾಗಿಯೇ ಸಿದ್ದರಾಮಯ್ಯ ಪರ ಬ್ಯಾಟಿಂಗ್ ಮಾಡಿದ್ದಾರೆ. ವಿಶೇಷ ಏನೆಂದರೆ ಈ ಮೊದಲು ಮಳವಳ್ಳಿಯ ಶಾಸಕ ನರೇಂದ್ರಸ್ವಾಮಿ ಅವರು ಸಿದ್ದರಾಮಯ್ಯ ಅವರನ್ನು ಸಿಎಂ ಮಾಡಿದ್ದು ಶಾಸಕರು ಎಂದು ಹೇಳಿಕೆ ನೀಡಿ ಸಿಎಂ ಪರ ಬ್ಯಾಟಿಂಗ್ ಮಾಡಿದ್ದರು. ಈಗ ಮಹಾದೇವಪ್ಪನವರು ಸಿಎಂ ವಿಚಾರ ಪ್ರಸ್ತಾಪಿಸುವ ಮೂಲಕ ಡಿಕೆ ಶಿವಕುಮಾರ್ ಆದೇಶಕ್ಕೂ ಡೋಂಟ್ ಕೇರ್ ಅಂದಿದ್ದಾರೆ.

## ದರ್ಶನ್‌ಗೆ ಜೈಲಿನಲ್ಲಿ ಯಾವುದೇ ವಿಶೇಷ ಸತ್ಕಾರ ಕೊಡ್ತಿಲ್ಲ

• ಉದಯವಾಹಿನಿ, ಬೆಂಗಳೂರು

ನಟ ದರ್ಶನ್ ಗೆ ಜೈಲಿನಲ್ಲಿ ವಿಶೇಷ ಸೌಲಭ್ಯ ಕೊಡ್ತಿರುವ ಆರೋಪ ವಿಚಾರ ಬಗ್ಗೆ ಡಾ.ಜಿ.ಪರಮೇಶ್ವರ್ ಅವರು ಪ್ರತಿಕ್ರಿಯೆ ನೀಡಿದ್ದಾರೆ. ದರ್ಶನ್ ಗೆ ಜೈಲಿನಲ್ಲಿ ಯಾವುದೇ ವಿಶೇಷ ಸತ್ಕಾರ ಕೊಡ್ತಿಲ್ಲ ಇದರ ಬಗ್ಗೆ ಆವತ್ತೇ ಹೇಳಿದೀನಿ ಈಗಲೂ ಹೇಳುತ್ತಿದ್ದೇನೆ ಎಂದು ಖಾರವಾಗಿ ಉತ್ತರಿಸಿದರು. ನಟ ದರ್ಶನ್ ಗೆ ಜೈಲಿನಲ್ಲಿ ಯಾವುದೇ ವಿಶೇಷ ಸತ್ಕಾರ ಕೊಡ್ತಿಲ್ಲ ಬಿರಿಯಾನಿ ಅವೆಲ್ಲ ಏನೂ ಕೊಡ್ತಿಲ್ಲ ಜೈಲಿನ ಒಳಗೂ ಬಿರಿಯಾನಿ ಕೊಡ್ತಿಲ್ಲ ಬೇಕಾದರೆ ಬನ್ನಿ ನನ್ನ ಜತೆ, ಕರೆದುಕೊಂಡು ಹೋಗಿ ತೋರಿಸ್ತೇನೆ ಎಂದು ಮಾಧ್ಯಮದೆದುರು ಗರಂ ಆಗಿ ನುಡಿದರು. ಕಾಂಗ್ರೆಸ್ ಪದಾಧಿಕಾರಿಗಳ ಸಭೆಯಲ್ಲಿ ಚುನಾವಣೆ ಸೋಲು ಬಗ್ಗೆ ಸತ್ಯಶೋಧನ ಸಮಿತಿ ರಚನೆ ಮಾಡುವ ವಿಚಾರ ಬಗ್ಗೆಯೂ ಮಾತನಾಡಿದರು.



# ಮುಡಾ ಹಗರಣ ಹಸ್ತಕ್ಷೇಪ

## ಆರ್.ಅಶೋಕ್ ಆರೋಪ



**ಮುಡಾ ಹಗರಣ ಸಿದ್ದು ಕಾರಣ..**



1 ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ಭಾರೀ ಭ್ರಷ್ಟಾಚಾರ..

2 ಅಸಲಿ ದಾಖಲೆಗಳನ್ನು ತಿದ್ದಿ, 5 ಸಾವಿರ ಕೋಟಿ ಭ್ರಷ್ಟಾಚಾರ ಎಂದ ಎಚ್. ವಿಶ್ವನಾಥ್

3 ಸಿದ್ದರಾಮಯ್ಯವರೇ ನಮ್ಮ ಪ್ರಶ್ನೆಗಳಿಗೆ ಉತ್ತರಿಸಿ ಎಂದ ಆರ್.ಅಶೋಕ್

### ಏನಿದು ಆರೋಪ...

1997ರಲ್ಲಿ ಮುಡಾದಿಂದ 3.16 ಎಕರೆ ಜಮೀನು ಸ್ವಾಧೀನ ಮಾಡಿಕೊಳ್ಳಲಾಗಿತ್ತು. ಈ ಭೂಮಿಗೆ ಪರಿಹಾರವನ್ನೂ ಸಿಎಂ ಪತ್ನಿ ಪಡೆದಿದ್ದರಂತೆ, ಆದರೆ 2021ರಲ್ಲಿ ತಾವು ಕೊಟ್ಟಿದ್ದ ಭೂಮಿಗೆ ಬದಲಿ ನಿವೇಶನ ಪಡೆದುಕೊಂಡಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. 2020ರಲ್ಲೇ ಶೇಕಡಾ 50:50 ಬದಲಿ ನಿವೇಶನಕ್ಕೆ ಬ್ರೇಕ್ ಬಿದ್ದಿತ್ತು, ಬದಲಿ ನಿವೇಶನ ಕೊಡಬಾರದೆಂದು ಅಂದಿನ ಸರ್ಕಾರ ಆದೇಶಿಸಿತ್ತು. ಆದರೆ 2021ರಲ್ಲಿ ಸಿಎಂ ಪತ್ನಿ ಪಾರ್ವತಿ ಹೆಸರಿಗೆ ನಿವೇಶನ ಮಂಜೂರು ಮಾಡಲಾಗಿದೆ. ಇದು ಕಾನೂನು ಬಾಹಿರ ಹಂಚಿಕೆ ಅಂತ ವಿಪಕ್ಷಗಳ ಆರೋಪ ಮಾಡಿದೆ.

- ಸಿಎಂ ಕುಟುಂಬಕ್ಕೆ ಸುತ್ತಿಕೊಳ್ಳಿದೆ ಮೂಡಾ ಸಂಕಷ್ಟ;
- ಪರಿಹಾರದ ಜೊತೆ ಸೈಟ್ ಕೊಟ್ಟಿದ್ದೇ ಈಗ ಕಂಟಕ!

• ಉದಯವಾಹಿನಿ, ಬೆಂಗಳೂರು

ವಾಲೀಕಿ ಅಭಿವೃದ್ಧಿ ನಿಗಮದ 187 ಕೋಟಿ ರೂ.ದಲಿತರ ಹಣ ಗುಳುಂ ಮಾಡಿರುವ ಸಿದ್ದಸ್ತರು ಈಗ ಮೈಸೂರಿನ ಮುಡಾದಲ್ಲಿ 4,000 ಕೋಟಿ ಗುಳುಂ ಮಾಡುವ ಮೂಲಕ ಮತ್ತೊಮೆ ತಮ ಕೈ ಚಳಕ ಪ್ರದರ್ಶನ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಿಧಾನಸಭೆಯ ನಾಯಕ ಆರ್.ಅಶೋಕ್ ಗಂಭೀರ ಆರೋಪ ಮಾಡಿದ್ದಾರೆ. ಈ ಕುರಿತು ತಮ್ಮ ಸಾಮಾಜಿಕ ಜಾಲತಾಣ ಸಾಲು ಸಾಲು ಪೋಸ್ಟ್ ಮಾಡಿರುವ ಅಶೋಕ್ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರೇ 4,000 ಕೋಟಿ ಗುಳುಂ ಮಾಡಿರುವ ಹಗರಣಕ್ಕೆ ಈ ಪ್ರಶ್ನೆಗಳಿಗೆ ನಿಮ ಬಳಿ ಉತ್ತರವಿದೆಯೇ. ಎಂದು ಪ್ರಶ್ನೆ ಮಾಡಿದ್ದಾರೆ.

ಗೋಲಾಲ್ ಸಿಎಂ ಸಿದ್ದರಾಮಯ್ಯನವರೇ, ತಮ ಧರ್ಮ ಪತ್ನಿ ಅವರ ಹೆಸರಿನಲ್ಲೂ ನಿಯಮ ಬಾಹಿರವಾಗಿ ನಿವೇಶನ ವರ್ಗಾವಣೆ ಆಗಿರುವ ಸುದ್ದಿ ಹೊರಬಂದಿದೆಯಲ್ಲ ಇದನ್ನು ಹೇಗೆ ಸಮರ್ಥನೆ ಮಾಡಿಕೊಳ್ಳುತ್ತೀರಿ.

ಆರೋಪ ಕೇಳಿಬಂದಿರುವ ಮುಡಾ ಅಧಿಕಾರಿಗಳನ್ನು ಅಮಾನತು ಮಾಡದೆ, ಕೇವಲ ವರ್ಗಾವಣೆ ಮಾಡಿ ಕೈ ತೊಳೆದುಕೊಂಡಿದ್ದೀರಲ್ಲ, ಯಾರನ್ನು ರಕ್ಷಣೆ ಮಾಡಲು ಹೊರಟಿದ್ದೀರಿ. ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ. 4,000 ಕೋಟಿ ರೂ.ಮೌಲ್ಯದ ಈ ಬ್ರಹಾಂಡ ಭ್ರಷ್ಟಾಚಾರ ಪ್ರಕರಣವನ್ನು ಅಸಲಿಗೆ ಸಿಬಿಐಗೆ ವಹಿಸಬೇಕು ಅಥವಾ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ತನಿಖಾ ಆಯೋಗಕ್ಕೆ ನೀಡಬೇಕು. ಅದು ಬಿಟ್ಟು ತನಿಖೆಗೆ ಇಬ್ಬರು ಐಎಎಸ್ ಅಧಿಕಾರಿಗಳನ್ನು ನೇಮಿಸಿ ಪ್ರಕರಣವನ್ನು ಮುಚ್ಚಿಹಾಕಲು ಹೊರಟಿದ್ದೀರಲ್ಲ ಈ ಹಗರಣದಲ್ಲಿ ತಮ ಪಾಲೆಷ್ಟು ಎಂದು ಪ್ರಶ್ನೆಸಿದ್ದಾರೆ.

ಸಿಎಂ ಸಿದ್ದರಾಮಯ್ಯನವರು ತಮ್ಮ ಧರ್ಮ ಪತ್ನಿ ಹೆಸರಿನಲ್ಲಿ ನಿಯಮ ಬಾಹಿರವಾಗಿ ಮುಡಾ ನಿವೇಶನ ವರ್ಗಾವಣೆ ಮಾಡಿಕೊಂಡಿದ್ದಾರೆ ಎಂಬ ಆರೋಪಕ್ಕೆ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯೆ ನೀಡಿದ್ದಾರೆ.

50:50 ಅನು ಪಾತದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿದೆ ಇದು ಬಿಜೆಪಿಯವರ ಕಾಲದಲ್ಲಿ ಆಗಿದ್ದು. 1 ಎಕರೆ 15 ಗುಂಟೆ ಜಮೀನು ನನ್ನ ಹೆಂಡತಿ ಹೆಸರಿನಲ್ಲಿದೆ. ಈ ಜಮೀನನ್ನು ಪತ್ನಿಯ ಸೋದರ ಬಾಮೈದ ತೆಗೆದುಕೊಂಡು ಅರಿಶಿನ-ಕುಂಕಮ ರೀತಿಯಲ್ಲಿ ಉಡುಗೊರೆಯಾಗಿ ನನ್ನ ಪತ್ನಿಗೆ ಕೊಟ್ಟಿದ್ದಾನೆ. ನಾನು ಅಧಿಕಾರದಲ್ಲಿದ್ದಾಗ ಜಮೀನು ಖರೀದಿಸಿದ್ದಲ್ಲ ಎಂದರು. ಕಾನೂನು ಪ್ರಕಾರ 50:50 ಜಮೀನು ಅನುಪಾತದಲ್ಲಿ ಜಮೀನು ಕೊಡುವುದಾಗಿ ಮುಡಾ ಹೇಳಿದೆ. ಆದರೆ ಮುಡಾದವರು ಜಮೀನನ್ನು ಸೈಟ್ ಮಾಡಿ ಹಂಚಿಬಿಟ್ಟರು. ಹಂಚಿದ ಮೇಲೆ ನಮಗೆ ಜಮೀನು ಇಲ್ಲದೆ ಹಾಗೆ ಆಯ್ತು. ಅದಕ್ಕೆ ಮುಡಾದವರು ನಿಮಗೆ 50:50 ಅನುಪಾತದಲ್ಲಿ ಜಮೀನು ಕೊಡುತ್ತೇವೆ ಅಂದರು. ಅದಕ್ಕೆ ಬೇರೆ ಕಡೆ ಜಮೀನು ಕೊಟ್ಟರು, ಇದು ತಪ್ಪಾ, ಕಾನೂನಿನ ಪ್ರಕಾರವೇ ನಮಗೆ ಜಮೀನು ಹಂಚಿದ್ದಾರೆ ಎಂದರು.

### ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ

ಸಿಎಂ ಸಿದ್ದರಾಮಯ್ಯ ಅವರು, ಇದು ಬಿಜೆಪಿಯವರ ಕಾಲದಲ್ಲಿ ಆಗಿದೆ. ನನ್ನ ಹೆಂಡತಿಗೆ ಹಿಂದೆ ಸೈಟ್ ಹಂಚಲಾಗಿತ್ತು. 1 ಎಕರೆ 15 ಗುಂಟೆ ನನ್ನ ಹೆಂಡತಿ ಹೆಸರಲ್ಲಿರುವ ಜಮೀನು, ನನ್ನ ಬಾಮೈದ ತಗೊಂಡಿದ್ದ ಅದನ್ನು ನನ್ನ ಹೆಂಡತಿಗೆ ಕೊಟ್ಟಿದ್ದಾನೆ. ನಾನು ಅಧಿಕಾರದಲ್ಲಿ ಇದ್ದಾಗ ತಗೊಂಡಿಲ್ಲ. ಕಾನೂನು ಪ್ರಕಾರ ನಮಗೆ 50:50ಕೊಡೋದಾಗಿ ಮೂಡಾದವರು ಹೇಳಿದ್ದರು. ಮಲ್ಲಿಕಾರ್ಜುನ್ ಎಂಬ ನನ್ನ ಬಾಮೈದ ಹರಿಶನ ಕುಂಕಮ ರೀತಿಯಲ್ಲಿ ಗಿಫ್ಟ್ ಕೊಟ್ಟು ಬಿಟ್ಟ, ಆದರೆ ಅದನ್ನು ಮೂಡದವರು ನಮ್ಮ ಜಮೀನನ್ನು ಸೈಟ್ ಮಾಡಿ ಹಂಚಿಬಿಟ್ಟರು. ಹಂಚಿದ ಮೇಲೆ ನಮಗೆ ಜಮೀನು ಇಲ್ಲದೆ ಹಾಗೇ ಆಗೋಯ್ತು, ಮೂಡದವರು ನಿಮಗೆ 50-50 ಕೊಡ್ತೀವಿ ಎಂದಿದ್ದರು. ಅದಕ್ಕೆ ಬೇರೆ ಕಡೆ ಜಮೀನು ಕೊಟ್ಟಿದ್ದಾರೆ, ಇದು ತಪ್ಪಾ.. ಕಾನೂನಿನ ಪ್ರಕಾರವೇ ಜಮೀನು ನಮಗೆ ಹಂಚಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

### 2021ರಲ್ಲಿ ನಿವೇಶನ ಹಂಚಿಕೆ

1997ರ ಆಗಸ್ಟ್ 20 ರಂದು ಮೈಸೂರು ತಾಲ್ಲೂಕು ಕೆಸರೆ ಗ್ರಾಮದ ಸರ್ವೆ ನಂ.464ರಲ್ಲಿನ ಸಿಎಂ ಪತ್ನಿ ಪಾರ್ವತಮ್ಮ ಅವರ 3.16 ಎಕರೆ ಭೂಮಿಯನ್ನು ದೇವನೂರು ಮೂರನೇ ಹಂತ ಬಡಾವಣೆ ಅಭಿವೃದ್ಧಿಗೆ ನೋಟಿಫೈ ಮಾಡಲಾಗಿತ್ತು. ಈ ಭೂಮಿಗೆ ಪರಿಹಾರವಾಗಿ 2021ರ ಅಕ್ಟೋಬರ್ 29 ರಂದು 50:50 ಅನುಪಾತದಲ್ಲಿ ಅಭಿವೃದ್ಧಿಪಡಿಸಿದ 38,284 ಚದರ ಅಡಿ ಅಳತೆಯ ನಿವೇಶನವನ್ನು ಸಿಎಂ ಪತ್ನಿ ಪಾರ್ವತಿ ಅವರಿಗೆ ಮುಡಾದಿಂದ ಹಂಚಿಕೆ ಮಾಡಲಾಗಿತ್ತು.

### ಮುಡಾ ಹಗರಣ ಸಿಬಿಐಗೆ ವಹಿಸಿ

ಮುಡಾ ಕಚೇರಿಯಲ್ಲಿ ನಡೆದಿರುವ ಹಗರಣವನ್ನು ಸಿಬಿಐಗೆ ವಹಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆಗ್ರಹಿಸಿದ್ದಾರೆ. ಬಿಜೆಪಿ ಕಚೇರಿಗೆ ಆಗಮಿಸಿದ ವೇಳೆ, ಮುಡಾ ಕಚೇರಿಯಲ್ಲಿ ನಡೆದಿದೆ ಎನ್ನಲಾದ ಬ್ರಹ್ಮಾಂಡ ಭ್ರಷ್ಟಾಚಾರ ವಿಚಾರವಾಗಿ ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿ, ಸಿಎಂ ಸಿದ್ದರಾಮಯ್ಯನವರ ಮೂಗಿನಡಿ ಎರಡೂವರೆ ಸಾವಿರ ಕೋಟಿಯಷ್ಟು ಸರ್ಕಾರಿ ಆಸ್ತಿ ದುರುಪಯೋಗವಾಗಿದೆ ಎಂಬ ವಿಚಾರ ಕೇಳಿ ದಿಗ್ಭ್ರಮೆಯಾಯಿತು ಎಂದರು. ಬಡವರಿಗೆ, ದಲಿತರಿಗೆ ಕೊಡಲು ಇವರ ಬಳಿ ನಿವೇಶನಗಳಿಲ್ಲ. ಕಳ್ಳ-ಕಾಕರಿಗೆ ಬೇನಾಮಿಯಾಗಿ ಕೊಡಲು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕು. ತಪ್ಪಿತಸ್ಥರ ತಲೆದಂಡವಾಗಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ರೂಪಿಸುತ್ತೇವೆ ಎಂದು ಎಚ್ಚರಿಸಿದರು.

## ಸದನದಲ್ಲಿ ಹೇಗೆ ಇರಬೇಕು ಎಂದು ಪ್ರಧಾನಿಯಿಂದ ಕ್ಲಾಸ್: ಹೆಚ್ ಡಿಕೆ

• ಉದಯವಾಹಿನಿ, ನವದೆಹಲಿ

ಪ್ರಧಾನಿ ನರೇಂದ್ರ ಮೋದಿ ಮೂರನೇ ಅವಧಿಗೆ ಅಧಿಕಾರ ವಹಿಸಿಕೊಂಡ ನಂತರ ಸಂಸತ್ತಿನ ಮೊದಲ ಅಧಿವೇಶನದಲ್ಲಿ ಆಡಳಿತ ಪಕ್ಷದ ಸಂಸದರನ್ನು ಒಗ್ಗೂಡಿಸಿ ದೆಹಲಿಯಲ್ಲಿ ಇಂದು ಮಹತ್ವದ ಸಭೆ ನಡೆಸಲಾಗಿದೆ. ಈ ಬಗ್ಗೆ ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ಮಾತನಾಡಿದ್ದು, ಎಲ್ಲಾ ಸಂಸದರಿಗೆ ಸದನದಲ್ಲಿ ಹಾಜರಾಗಲು ಮತ್ತು ಬಹಳಷ್ಟು ವಿಷಯಗಳನ್ನು ಕಲಿಯಲು ಪ್ರಧಾನಿ ಸಲಹೆ ನೀಡಿದರು ಎಂದರು.

ಈ ವೇಳೆ ಸದನದಲ್ಲಿ ಯಾವ ರೀತಿ ವರ್ತಿಸಬೇಕು ಮತ್ತು ಯಾವ ರೀತಿ ಆಡಳಿತ ನಡೆಸಬೇಕು ಎಂದು ಪ್ರಧಾನಿ ಮೋದಿ ಎಲ್ಲಾ ಸದಸ್ಯರಿಗೆ ಸಲಹೆಯನ್ನು ನೀಡಿದ್ದಾರೆ ಎಂದು ಹೆಚ್ ಡಿಕೆ ತಿಳಿಸಿದರು. ಬಿಜೆಪಿ ಜೊತೆಗಿನ ಮೈತ್ರಿಯೊಂದಿಗೆ ರಾಜ್ಯದಲ್ಲಿ ಚುನಾವಣೆ ಎದುರಿಸಿದ್ದ ಜೆಡಿಎಸ್ ಮೂರು ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಎರಡು ಕಡೆ ಜಯ ಗಳಿಸಿತ್ತು . ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೆ ಬಂದ ಬೆನ್ನಲ್ಲೇ ಎಚ್‌ಡಿಕೆಗೆ ಸಚಿವ ಸ್ಥಾನವನ್ನೂ ಸಹ ನೀಡಲಾಗಿತ್ತು.

ಮುಂಬರುವ ಚುನಾವಣೆಗಳಲ್ಲಿಯೂ ಸಹ ಬಿಜೆಪಿ ಜೊತೆ ಮೈತ್ರಿ ಮುಂದುವರೆಯುವುದಾಗಿ ಹೇಳಿರುವ ಎಚ್ ಡಿಕೆ, ಇದಕ್ಕೆ ಪೂರ್ವಭಾವಿಯಾಗಿ ಲೋಕಸಭೆಯಲ್ಲಿಯೂ ಸಹ ಬಿಜೆಪಿ ಪರ ಬ್ಯಾಟಿಂಗ್ ಆರಂಭಿಸಿದ್ದಾರೆ



## ‘ಫ್ರೀ’ ಬಸ್ ಕೊಟ್ಟಿದ್ದಕ್ಕೆ ನಮ್ಮ ಮೆಟ್ರೋಗೆ ಜನನೇ ಬರ್ತಿಲ್ಲ

### ಬಸ್ ಫ್ರೀ ಮಾಡಿದ್ದೀರಿ ನಮ್ಮ ಮೆಟ್ರೋಗೆ ಜನಾನೇ ಬರ್ತಿಲ್ಲ: ಮೋದಿ ಭೇಟಿ ಪ್ರಸ್ತಾಪ

• ಉದಯವಾಹಿನಿ, ರಾಮನಗರ

ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಬೈರಾಪಟ್ಟಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಮಾತನಾಡಿ, ಜಿಲ್ಲೆಯಲ್ಲಿ ವಿದ್ಯುತ್ 93 ಪರ್ಸೆಂಟ್ ಪೂರೈಕೆ ಆಗುತ್ತಿದೆ. ಸ್ತ್ರೀಯರಿಗೆ ಬಸ್ ವ್ಯವಸ್ಥೆ ಅನುಕೂಲವಾಗಿದೆ ಎಂದು ತಿಳಿಸಿದರು. ಮೊನ್ನೆ ಪ್ರಧಾನಿ ಮೋದಿ ಭೇಟಿ ವೇಳೆ ಮೆಟ್ರೋ ಬಗ್ಗೆ ಮಾತನಾಡಿದ್ದೇನೆ.

ಬಸ್ ಫ್ರೀ ಮಾಡಿದ್ದೀರಿ ನಮ್ಮ ಮೆಟ್ರೋಗೆ ಜನಾನೇ ಬರ್ತಿಲ್ಲ ಅಂದರು. ಬೆಂಗಳೂರಿನಲ್ಲಿ ಮೆಟ್ರೋಗೆ ಜನ ಬರ್ತಿಲ್ಲ ಅಂತ ಮೋದಿ ಹೇಳಿದರು ಗ್ರಾಮಂತರ ಪ್ರದೇಶದಲ್ಲಿ ಮೆಟ್ರೋ ರೈಲು ಇಲ್ಲ ಎಂದು ಮೋದಿ ಬೇಟಿ ಬಗ್ಗೆ ಭಾಷಣದಲ್ಲಿ ಡಿಕೆ ಶಿವಕುಮಾರ್ ಪ್ರಸ್ತಾಪಿಸಿದ್ದಾರೆ.

ಚನ್ನಪಟ್ಟಣ ಕ್ಷೇತ್ರದ ಜನರಿಗೆ ನನ್ನ ಮನೆ ಬಾಗಿಲು ತೆರೆದೆ ಇರುತ್ತದೆ. ಯಾವಾಗ ಬೇಕಾದರೂ ನೀವು ನನ್ನ ಭೇಟಿಯಾಗಬಹುದು.ಆದರೂ ತಲೆ ಕೆಡಿಸಬೇಡಿ ಚಿಂತೆ ಇಲ್ಲ.

ನಾವೇನ್ ಮಾತು ಕೊಟ್ಟಿದ್ದೀವಿ ಅದನ್ನು ನಾವು ಉಳಿಸಿಕೊಂಡಿದ್ದೀವಿ. ಎಲೆಕ್ಷನ್ ಟೈಮಲ್ಲಿ ನಾವು ಮಾತು ಕೊಟ್ಟಿದ್ದೇವೆ ಐದು ಗ್ಯಾರಂಟಿಗಳ ಮಾತು ಕೊಟ್ಟಿದ್ದೇವೆ. ಐದು ಗ್ಯಾರಂಟಿಗಳು ನಿಮಗೆ ತಲುಪುತ್ತೇವೆ ತಾನೆ ಫ್ರೀ ಆಗಿ ಕರೆಂಟ್ ಬರುತ್ತಿದೆ ತಾನೇ 2000 ಬರುತ್ತಿದೆಯಾ ಈ ತಿಂಗಳ ಬಂದಿಲ್ಲ ಅಷ್ಟೇ ಆದರೆ ಹಿಂದಿನ ತಿಂಗಳಿನಿಂದಲ್ಲ ಬಂದಿದೆ ಎಂದರು.



# ರಾಹುಲ್ ಗಾಂಧಿ, ಹಿಂದೂಗಳ ಕ್ಷಮೆ ಕೇಳಬೇಕು

## ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಪ್ರಯತ್ನಿಸಿದ ನಾಯಕ ರಾಹುಲ್ ಗಾಂಧಿಯವರು ಸಂಪೂರ್ಣ ವಿಫಲ

**ರಾಗಾ ವಿರುದ್ಧ ಬಿವೈವಿ ಕಿಡಿ**

• ಉದಯವಾಹಿನಿ, ಬೆಂಗಳೂರು

ರಾಹುಲ್ ಗಾಂಧಿಯವರು ಹಿಂದೂಗಳ ಕ್ಷಮೆ ಕೇಳಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ. ವೈ. ವಿಜಯೇಂದ್ರ ಅವರು ಆಗ್ರಹಿಸಿದರು. ನಗರದ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಂಗಳವಾರ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದಲ್ಲಿ ಮಾನ್ಯ ನರೇಂದ್ರ ಮೋದಿಯವರ ನೇತೃತ್ವದ ಬಿ ಜೆಪಿ ಈ ದೇಶವನ್ನು ಮುನ್ನಡೆಸುತ್ತಿದೆ. ಮತ್ತೊಂದು ಕಡೆ ಸತತ 3 ಬಾರಿ ಹೇಗಾದರೂ ಮಾಡಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಪ್ರಯತ್ನಿಸಿ ಕಾಂಗ್ರೆಸ್ ಪಕ್ಷ, ಅದರ ನಾಯಕ ರಾಹುಲ್ ಗಾಂಧಿಯವರು ಸಂಪೂರ್ಣವಾಗಿ ವಿಫಲವಾಗಿದ್ದಾರೆ. ವಿಪಕ್ಷ ನಾಯಕನ ಸ್ಥಾನ ಜವಾಬ್ದಾರಿ ಅವರಿಗೆ ಮೊದಲ ಬಾರಿಗೆ ಲಭಿಸಿದೆ. ನಿನ್ನೆ ಸಂಸತ್ತಿನಲ್ಲಿ ರಾಹುಲ್ ಗಾಂಧಿಯವರು ವಿಪಕ್ಷ ನಾಯಕನಾಗಿ ಮಾಡಿದ ಚೊಚ್ಚಲ ಭಾಷಣ ಸುಳ್ಳು, ನಿರಾಶೆ, ಆಧಾರರಹಿತ ಆರೋಪಗಳಿಂದ ಕೂಡಿತ್ತು ಎಂದು ಆಕ್ಷೇಪಿಸಿದರು.

ಸದನದಲ್ಲಿ ರಾಹುಲ್ ಗಾಂಧಿಯವರ ನಡವಳಿಕೆ ಸಂಸತ್ತಿನ ನಿಯಮಗಳಿಗೆ ಧಕ್ಕೆ ತರುವಂತಿತ್ತು ಎಂದು ಟೀಕಿಸಿದರು. ಅವರು ಲೋಕಸಭಾ ಚುನಾವಣೆ ಸಂದರ್ಭದಲ್ಲೂ ಸುಳ್ಳನ್ನೇ ಹತ್ತಾರು ಬಾರಿ ಹೇಳಿಕೊಂಡು ದೇಶಾದ್ಯಂತ ಪ್ರವಾಸ ಮಾಡಿದ್ದರು. ಈಗ ವಿಪಕ್ಷ ನಾಯಕನಾಗಿ ಹಳೇ ಚಾಳಿ ಮುಂದುವರೆಸಿದ್ದಾರೆ; ಸಂಸದರೂ ಆದ ಅವರು ತಮ್ಮ ಸ್ಥಾನದ ಘನತೆ ಎತ್ತಿ ಹಿಡಿಯುವ ಬದಲಾಗಿ ಆ ಸ್ಥಾನಕ್ಕೆ ಧಕ್ಕೆ ತರುವ ಕೆಲಸ ಮಾಡಿದ್ದಾರೆ ಎಂದು ವಿಶ್ಲೇಷಿಸಿದರು.

ನಿನ್ನೆ ಅವರು ತಮ್ಮ ಭಾಷಣದಲ್ಲಿ ಹಿಂದೂಗಳು ಹಿಂಸಾಚಾರ ಮತ್ತು ದ್ವೇಷದಲ್ಲಿ ಹಗಲಿರುಳು ನಿರತರು ಎಂಬ ಮಾತನ್ನು ಉಲ್ಲೇಖಿಸಿದ್ದಾರೆ. ಈ ಮಾತನ್ನು ಹೇಳುವ ಮೂಲಕ ವಿಪಕ್ಷ ನಾಯಕ ರಾಹುಲ್ ಗಾಂಧಿಯವರು ಈ ದೇಶದ ಅಸಂಖ್ಯಾತ ಹಿಂದೂಗಳಿಗೆ ಅವಮಾನ ಮಾಡಿದ್ದಾರೆ. ಹಿಂದೂಗಳ ತೇಜೋವಧೆ ಮಾಡಿದ್ದಾರೆ. ಅಷ್ಟೇ ಸಾಲದೆಂದು ಅಗ್ನಿವೀರ್, ರೈತರ ಬಗ್ಗೆ, ಅಯೋಧ್ಯೆ ವಿಚಾರ ಮಾತ್ರವಲ್ಲದೆ, ಮೈಕ್ರೋಫೋನ್ ಬಗ್ಗೆ ಮಾತನಾಡಿದ್ದಾರೆ. ಇವೆಲ್ಲ ವಿಚಾರಗಳಲ್ಲಿ ಸುಳ್ಳು ಹೇಳಿಕೆ ನೀಡಿದ್ದಲ್ಲದೆ, ಹಿಂದೂಗಳ ತೇಜೋವಧೆ ಮಾಡಿದ್ದು ಅಕ್ಷಮ್ಯ ಅಪರಾಧ ಎಂದು ಖಂಡಿಸಿದರು.

### ಕರ್ನಾಟಕದಲ್ಲೂ ಇದೇ ಮಾದರಿಯಲ್ಲಿ ಅವಹೇಳನ..

ಕರ್ನಾಟಕದಲ್ಲೂ ಇದೇ ಮಾದರಿಯಲ್ಲಿ ಹಿಂದೂಗಳ ತೇಜೋವಧೆ ಮಾಡಿದ್ದರು. ಇಂದಿನ ಕಾಂಗ್ರೆಸ್ ಪಕ್ಷದ ಕಾರ್ಯಾಧ್ಯಕ್ಷ, ಸಚಿವ ಸತೀಶ್ ಜಾರಕಿಹೊಳಿ ಅವರು ಹಿಂದೂ ಪದವನ್ನು ಅವಹೇಳನಕಾರಿಯಾಗಿ ಬಳಸಿದ್ದರು. ಜಾರ್ಜ್ ಪೊನ್ನಯ್ಯ ಅವರು ಭಾರತದ ಭೂಮಿಯನ್ನು ಎಷ್ಟು ಅಶುದ್ಧವೆಂದು ಪರಿಗಣಿಸುತ್ತಾರೆಂದರೆ ಅದನ್ನು ಮುಟ್ಟುವುದನ್ನು ತಪ್ಪಿಸಲು ಶೂಗಳನ್ನು ಧರಿಸುವುದಾಗಿ ಉದ್ಧಟತನದ ಮಾತನಾಡಿದ್ದರು ಎಂದು ಟೀಕಿಸಿದರು.



ಲೋಕಸಭಾ ಚುನಾವಣೆ ಬರುವ ಮುನ್ನ ಅವರು ವಿದೇಶಗಳಲ್ಲಿ ಪ್ರವಾಸ ಮಾಡಿ ಭಾರತದಲ್ಲಿ ಪ್ರಜಾಪ್ರಭುತ್ವ ಇಲ್ಲ ಎಂದು ಆರೋಪಿಸಿದ್ದರು. ಇದೀಗ ಸದನದಲ್ಲಿ ಹಿಂದೂಗಳಿಗೆ ಅವಮಾನ ಮಾಡಿದ್ದು ಅಕ್ಷಮ್ಯ ಅಪರಾಧ. 99 ಸ್ಥಾನಗಳನ್ನು ಗೆದ್ದಿರುವ ಕಾಂಗ್ರೆಸ್ ಪಕ್ಷವು ಕೇಂದ್ರದಲ್ಲಿ ಅಧಿಕಾರಕ್ಕೇನೂ ಬಂದಿಲ್ಲ. 100ರ ಗಡಿಯನ್ನು ದಾಟಲು ಆಗದ ಕಾಂಗ್ರೆಸ್ ಪಕ್ಷ, ಆ ಪಕ್ಷದ ನಾಯಕ ರಾಹುಲ್ ಗಾಂಧಿ, ವಿಪಕ್ಷ ನಾಯಕನಾಗಿ ಮನಸೋಇಚ್ಛೆ ಮಾತನಾಡಲು ಸದನವನ್ನು ಬಳಸಿದ್ದು ಖಂಡನೀಯ ಎಂದು ತಿಳಿಸಿದರು.

**ಹಿಂದೂಗಳ ತೇಜೋವಧೆ ಮಾಡಲು..**

ಹಿಂದೂಗಳ ತೇಜೋವಧೆ ಮಾಡಲು ಸದನವನ್ನು ಬಳಸಿದ ರಾಹುಲ್ ಗಾಂಧಿಯವರು, 1984ರ ಸಿಕ್ಖ್ ಹತ್ಯಾಕಾಂಡಕ್ಕೆ ಕಾರಣಕರ್ತರ್ಯಾರು ಕಾಂಗ್ರೆಸ್ ಮುಖಂಡರಲ್ಲವೇ ಎಂಬ ಪ್ರಶ್ನೆಗೆ ಉತ್ತರ ಹೇಳಬೇಕು. ತುರ್ತು ಪರಿಸ್ಥಿತಿಯನ್ನು ದೇಶದ ಮೇಲೆ ಹೇರಿ ದೇಶದ ಮುಗ್ಧ ಜನರ ಮೇಲೆ ದಬ್ಬಾಳಿಕೆ ಮಾಡಿದ್ದು ಇದೇ ಕಾಂಗ್ರೆಸ್ ಪಕ್ಷ ಎಂಬುದನ್ನೂ ಅವರು ಗಮನಿಸಿ ಉತ್ತರ ಕೊಡಲಿ ಎಂದು ಆಗ್ರಹಿಸಿದರು. ಇಂತ ಕಾಂಗ್ರೆಸ್ ಪಕ್ಷವು ದೇಶದ ಉದ್ಧಾರ ಮಾಡುವುದಾಗಿ ಜನರ ಮುಂದೆ ಅನೇಕ ವಿಚಾರಗಳನ್ನು ಮುಂದಿಟ್ಟಿತ್ತು. ಈಗ ಹಿಂದೂಗಳ ತೇಜೋವಧೆ ಮಾಡಿದ್ದು, ಯಾರೂ ಇದನ್ನು ಕ್ಷಮಿಸಲು ಸಾಧ್ಯವಿಲ್ಲ ಎಂದು ಎಚ್ಚರಿಸಿದರು.

### ಸಾಕಷ್ಟು ಜನರಿಗೆ ತೊಂದರೆ

ವಿಪಕ್ಷ ನಾಯಕರಾದ ಅವರು ಸುಳ್ಳು ಹೇಳಿ ಅಗ್ನಿ ವೀರರಿಗೂ ಅಪಮಾನ ಮಾಡಿದ್ದಾರೆ. ಅಗ್ನಿವೀರರು ಹುತಾತ್ಮರಾದರೆ ಕೇಂದ್ರವು ಪರಿಹಾರ ಕೊಡುವುದಿಲ್ಲ ಎಂದಿದ್ದಾರೆ. ಅಗ್ನಿ ವೀರರು ಪ್ರಾಣ ಕಳಕೊಂಡಾಗ ಒಂದು ಕೋಟಿ ರೂ. ಪರಿಹಾರ ಕೊಡುವುದಾಗಿ ರಾಜನಾಥ್ ಸಿಂಗ್ ಅವರು ಹೇಳಿದ್ದಾರೆ. ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರ ನಿರ್ಮಾಣವಾಗಿದ್ದು, ಸಾಕಷ್ಟು ಜನರಿಗೆ ತೊಂದರೆ ಆಗಿದೆ; ಜನರಿಗೆ ಪರಿಹಾರ ಕೊಟ್ಟಿಲ್ಲ ಎಂದು ಸುಳ್ಳು ಮಾಹಿತಿ ಕೊಟ್ಟಿದ್ದಾರೆ. ನಮ್ಮ ಉತ್ತರ ಪ್ರದೇಶ ಸರಕಾರ ನಿನ್ನೆ ಅಂಕಿಅಂಶಗಳನ್ನು ನೀಡಿದೆ. 4,215 ಅಂಗಡಿ ಮಾಲೀಕರಿಗೆ 1,253 ಕೋಟಿ ಮೊತ್ತ ನೀಡಿದ್ದಾಗಿ ತಿಳಿಸಿದೆ ಎಂದರು.

2010ರಲ್ಲಿ ಆಗಿನ ಗೃಹ ಸಚಿವ ಚಿದಂಬರಂ ಅವರು ಸಹ ಹಿಂದೂಗಳು ಭಯೋತ್ಪಾದಕರು ಎಂದು ಉದ್ಧಟತನದಿಂದ ಹೇಳಿದ್ದರು. 2013ರಲ್ಲಿ ಸುಶೀಲ್‌ಕುಮಾರ್ ಶಿಂಧೆ ಅವರೂ ಇದೇ ಧಾಟಿಯಲ್ಲಿ ಮಾತನಾಡಿದ್ದರು. ಸ್ವತಃ ರಾಹುಲ್ ಗಾಂಧಿಯವರು 2021ರಲ್ಲಿ ಹಿಂದುತ್ವ ಬೆಂಬಲಿಸುವವರನ್ನು ದೇಶದಿಂದ ಹೊಡೆದೋಡಿಸಿ ಎಂದು ತಿಳಿಸಿದ್ದರು. ನಿನ್ನೆಯ ಅವರ ಮಾತಿನ ಧಾಟಿಯಿಂದ ಇವರ ಉದ್ದೇಶವನ್ನು ರಾಹುಲ್ ಗಾಂಧಿಯವರೇ ಬಿಚ್ಚಿಟ್ಟಿದ್ದಾರೆ ಎಂದು ತಿಳಿಸಿದರು. ಮೋದಿಜೀ ಅವರ ಸರಕಾರ ದೇಶದ ರೈತರನ್ನು ಭಯೋತ್ಪಾದಕರ ಪಟ್ಟಿಗೆ ಸೇರಿಸಿದೆ ಎಂದು ಆರೋಪಿಸಿದ್ದು, ಇದು ಸರಿಯಲ್ಲ. ಪುರಾವೆ ಕೇಳಿದಾಗ ಅವರು ಬಾಯಿ ಮುಚ್ಚಿಕೂತಿದ್ದನ್ನು ಗಮನಿಸಿದ್ದೀರಿ ಎಂದು ನುಡಿದರು.

ಇದಿಷ್ಟೇ ಅಲ್ಲ; ಸ್ಪೀಕರ್ ಹುದ್ದೆಗೂ ಅವಮಾನ ಮಾಡಿದ್ದಾರೆ. ರಾಹುಲ್ ಗಾಂಧಿಯವರ ಬೇಜವಾಬ್ದಾರಿ ನಡವಳಿಕೆ ಅಕ್ಷಮ್ಯ ಅಪರಾಧ ಎಂದು ಆಕ್ಷೇಪಿಸಿದರು. ತಕ್ಷಣ ಅವರು ದೇಶದ ಜನರ ಕ್ಷಮೆ ಕೇಳಬೇಕೆಂದು ಒತ್ತಾಯಿಸಿದರು. ರಾಹುಲ್ ಅವರು ಪ್ರಬುದ್ಧತೆಯಿಂದ ನಡೆದುಕೊಳ್ಳುವಂತೆ ಹಿರಿಯ ಕಾಂಗ್ರೆಸ್ಸಿಗರು ಮಾರ್ಗದರ್ಶನ ಮಾಡಬೇಕೆಂದು ಸಲಹೆ ನೀಡಿದರು. ಹರತಾಳು ಹಾಲಪ್ಪ, ಎನ್.ರವಿಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ, ಎಸ್.ಹರೀಶ್ ಅವರು ಭಾಗವಹಿಸಿದ್ದರು.

**ಈ ದಿನದ ದರ** ಪೆಟ್ರೋಲ್: 102.86 ₹/L | ಡೀಸೆಲ್ : 88.94 ₹/L | ಬಂಗಾರ: ₹7,238/Gram(24ct) ₹6,635/Gram(22ct) | ಬೆಳ್ಳಿ: ₹91.00/Gram

ಅಂತರಾಳದಿಂದ..
EDITORIAL

# ಮಕ್ಕಳಿಗೆ ಪೌಷ್ಟಿಕ ಆಹಾರ ತುರ್ತು ಕ್ರಮದ ಅಗತ್ಯ ಇದೆ


ಉದಯವಾಹಿನಿ ಚಿತ್ರ

ಮಕ್ಕಳ ಪೌಷ್ಟಿಕತೆ ಕುರಿತು ಯುನಿಸೆಫ್ ಇತ್ತೀಚೆಗೆ ವರದಿಯೊಂದನ್ನು ಬಿಡುಗಡೆ ಮಾಡಿದೆ. ಜಗತ್ತಿನಾದ್ಯಂತ ಮತ್ತು ಭಾರತದ ಮಕ್ಕಳ ಮೇಲೆ ಅಪೌಷ್ಟಿಕತೆಯು ಬೀರಬಹುದಾದ ಪರಿಣಾಮವು ಕಳವಳ ಮೂಡಿಸುವಂತಿದೆ. ಮಕ್ಕಳ ಪೌಷ್ಟಿಕತೆ ವರದಿ 2024ರ ಪ್ರಕಾರ, ಜಗತ್ತಿನಲ್ಲಿ ಐದು ವರ್ಷದ ಒಳಗಿನ 18.1 ಕೋಟಿ ಮಕ್ಕಳು ತೀವ್ರವಾದ ಆಹಾರ ಕೊರತೆಯನ್ನು ಎದುರಿಸುತ್ತಿದ್ದಾರೆ. ಭಾರತ, ಚೀನಾ, ಅಫ್ಘಾನಿಸ್ತಾನ, ಪಾಕಿಸ್ತಾನ ಸೇರಿದಂತೆ 20 ದೇಶಗಳ ಪಾಲು ಇದರಲ್ಲಿ ಶೇಕಡ 65ರಷ್ಟಿದೆ ಎಂಬುದು ಆತಂಕಕಾರಿ ವಿಚಾರ.ಆಫ್ರಿಕಾ ಖಂಡದ ಕೆಲವು ದೇಶಗಳಲ್ಲಿಯೂ ಮಕ್ಕಳ ಆಹಾರ ಕೊರತೆಯು ಕಳವಳ ಮೂಡಿಸುವ ಪ್ರಮಾಣದಲ್ಲಿ ಇದೆ.

ಮೂವರಲ್ಲಿ ಇಬ್ಬರು ಮಕ್ಕಳು ಆಹಾರದ ಕೊರತೆಯಿಂದ ಬಳಲುತ್ತಿದ್ದಾರೆ. ನಾಲ್ಕರಲ್ಲಿ ಒಂದು ಮಗು ತೀವ್ರ ಪ್ರಮಾಣದ ಆಹಾರದ ಕೊರತೆ ಎದುರಿಸುತ್ತಿದೆ. ಭಾರತದ ಮಕ್ಕಳ ಪೈಕಿ ಶೇ 40ರಷ್ಟು ಮಕ್ಕಳಿಗೆ ಆಹಾರದ ಕೊರತೆ ಇದೆ. ಕುಟುಂಬದಲ್ಲಿನ ಬಡತನವೇ ಅಪೌಷ್ಟಿಕತೆಗೆ ಮುಖ್ಯ ಕಾರಣ, ಪೌಷ್ಟಿಕಾಂಶಗಳು ಇಲ್ಲದ ಆಹಾರ ಸೇವನೆಯೊಂದೇ ಅಪೌಷ್ಟಿಕತೆಗೆ ಕಾರಣ ಅಲ್ಲ. ಬೇಕಾದಷ್ಟು ಪ್ರಮಾಣದಲ್ಲಿ ಆಹಾರ ಸೇವಿಸದಿರುವುದು, ಆಹಾರ ಸೇವನೆಯ ವಾತಾವರಣ ಕೂಡ ಈಗಿನ ಪರಿಸ್ಥಿತಿಗೆ ಕಾರಣವಾಗಿದೆ. ಐದು ವರ್ಷದವರೆಗಿನ ಮಕ್ಕಳಿಗೆ ಪೌಷ್ಟಿಕಾಂಶಯುಕ್ತ ಮತ್ತು ಸಮತೋಲಿತ ಆಹಾರ ಸಿಗದಿರುವುದು ಮತ್ತು ಸೇವಿಸದಿರುವುದನ್ನು ಮಕ್ಕಳಿಗೆ ಆಹಾರದ ಕೊರತೆ ಎಂದು ಯುನಿಸೆಫ್ ವ್ಯಾಖ್ಯಾನಿಸಿದೆ.

ಮಕ್ಕಳ ಪೌಷ್ಟಿಕತೆ ಪರಿಸ್ಥಿತಿಯನ್ನು ನಿರ್ಧರಿಸುವ ಅಂಶಗಳಲ್ಲಿ ಕುಟುಂಬದ ಆದಾಯವೊಂದೇ ಮುಖ್ಯ ಅಲ್ಲ ಎಂಬುದು ವರದಿಯಲ್ಲಿ ಇರುವ ಒಂದು ಮುಖ್ಯ ಅಂಶ. ಆಹಾರದ ತೀವ್ರ ಕೊರತೆ ಎದುರಿಸುತ್ತಿರುವ ಮಕ್ಕಳ ಪೈಕಿ ಅರ್ಧದಷ್ಟು ಮಕ್ಕಳು ತುಲನಾತ್ಮಕವಾಗಿ ಉತ್ತಮ ವರಮಾನ ಹೊಂದಿರುವ ಕುಟುಂಬಗಳಲ್ಲಿಯೇ ಇದ್ದಾರೆ. ಬಾಧಿತರಾದ ಶೇ 46ರಷ್ಟು ಮಕ್ಕಳು ಬಡ ಕುಟುಂಬಗಳಲ್ಲಿ ಇರುವವರು, ಆದರೆ, ಶೇ 54ರಷ್ಟು ಮಕ್ಕಳು ಬಡತನ ರೇಖೆಗಿಂತ ಮೇಲೆ ಇರುವ ಕುಟುಂಬಗಳಲ್ಲಿ ಇರುವವರು. ಆಹಾರ ಸೇವನೆಯಲ್ಲಿ ಅಸಮರ್ಪಕತೆ, ಆಹಾರ ಸೇವನೆಯ ವಾತಾವರಣದಲ್ಲಿನ ಮಾಲಿನ್ಯ ಮತ್ತು ಅಗ್ಗದ ಅನಾರೋಗ್ಯಕರ ಆಹಾರ ಸೇವನೆ ಕೂಡ ಮಕ್ಕಳಲ್ಲಿ ಅಪೌಷ್ಟಿಕತೆಗೆ ಕಾರಣ, ಸಂಘರ್ಷಗಳು, ಹವಾಮಾನ. ಬಿಕ್ಕಟ್ಟು, ಆರ್ಥಿಕ ಅಸಮಾನತೆಗಳು ಈ ಪರಿಸ್ಥಿತಿಯು ಮತ್ತಷ್ಟು ಶೋಚನೀಯಗೊಳ್ಳುವಂತೆ ಮಾಡಿವೆ. ಆಹಾರದ ಅತಿ ಹೆಚ್ಚಿನ ದರ ಕೂಡ ಹಲವರಿಗೆ ಪೌಷ್ಟಿಕ ಆಹಾರ ದೊರಕದಂತೆ ಮಾಡಿದೆ.

ಪ್ರತಿ ದಿನವೂ ಎರಡು ಬಗೆಯ ಆಹಾರಗಳನ್ನು ಮಾತ್ರ ತೆಗೆದುಕೊಳ್ಳುವ ಮಕ್ಕಳಲ್ಲಿ ತೀವ್ರ ಅಪೌಷ್ಟಿಕತೆ ಉಂಟಾಗುವ ಸಾಧ್ಯತೆ ಶೇ 50ರಷ್ಟು ಹೆಚ್ಚು ಎಂಬುದರತ್ತ ವರದಿಯು ಗಮನ ಸೆಳೆದಿದೆ. ಎರಡು ಬಗೆಯ ಆಹಾರ ಎಂದರೆ ಪ್ರತಿ ದಿನವೂ ಹಾಲು ಮತ್ತು ಅನ್ನವನ್ನು ಮಾತ್ರ ತೆಗೆದುಕೊಳ್ಳುವುದು. ಎಂಟು ಬಗೆಯ ಪ್ರಮುಖ ಆಹಾರಗಳಲ್ಲಿ ಐದು ಬಗೆಯ ಆಹಾರಗಳನ್ನಾದರೂ ತೆಗೆದುಕೊಳ್ಳಬೇಕು. ಅವುಗಳೆಂದರೆ, ಎದೆಹಾಲು, ಹಾಲಿನ ಉತ್ಪನ್ನಗಳು, ಮೊಟ್ಟೆ, ಮಾಂಸ ಮತ್ತು ಮೀನು, ಧಾನ್ಯಗಳು ಮತ್ತು ಬೀಜಗಳು, ವಿಟಮಿನ್ ಎ ಸಮೃದ್ಧವಾಗಿರುವ ಹಣ್ಣುಗಳು ಮತ್ತು ತರಕಾರಿಗಳು, ಕಾಳು ಮತ್ತು ಗಡ್ಡೆಗಳು, ಈ ಮಾರ್ಗಸೂಚಿಯು ಜನರಿಗೆ ತಲುಪುವಂತೆ ಮಾಡಬೇಕಿದೆ.

ಹೀಗೆ ಜನರಿಗೆ ತಲುಪಿದರೆ ಮಾತ್ರ ಕುಟುಂಬಗಳಿಗೆ ವೈವಿಧ್ಯಮಯ ಮತ್ತು ಸಮತೋಲಿತ ಆಹಾರದ ಮಹತ್ವ ಅರ್ಥವಾಗುತ್ತದೆ. ಭಾರತದ ಮುಂದೆ ಎರಡು ಸವಾಲುಗಳಿವೆ. ಮಕ್ಕಳಿಗೆ ಪೌಷ್ಟಿಕ ಆಹಾರದ ಖಾತರಿಗಾಗಿ ಕುಟುಂಬದ ಬಡತನದ ಸಮಸ್ಯೆಯನ್ನು ಬಗೆಹರಿಸಬೇಕಿದೆ. ಬೇಕಾದಷ್ಟು ಪೌಷ್ಟಿಕತೆಯನ್ನು ಒದಗಿಸಬೇಕಿದ್ದರೆ ಮೂಲಭೂತವಾದ ಆಹಾರವಷ್ಟೇ ಸಾಲುವುದಿಲ್ಲ. ಮಹಿಳೆಯರು, ಹಸುಳೆಯರು ಮತ್ತು ಮಕ್ಕಳಿಗಾಗಿ ಹಲವಾರು ಯೋಜನೆಗಳನ್ನು ಸರ್ಕಾರ ರೂಪಿಸಿದ್ದರೂ ಅವು ಅಗತ್ಯ ಇರುವವರಿಗೆ ಪೌಷ್ಟಿಕತೆಯನ್ನು ಒದಗಿಸುವಲ್ಲಿ ಯಶಸ್ವಿಯಾಗಿಲ್ಲ. ಉತ್ತಮ ಸ್ಥಿತಿಯಲ್ಲಿರುವ ಕುಟುಂಬಗಳು ಮಕ್ಕಳಿಗೆ ಪೌಷ್ಟಿಕಾಂಶಯುಕ್ತ ಆಹಾರ ನೀಡುವಂತೆ ಜಾಗೃತಿ ಮೂಡಿಸುವುದು ಮತ್ತೊಂದು ಸವಾಲಾಗಿದೆ. ಹಲವು ಕುಟುಂಬಗಳಲ್ಲಿ ಪೌಷ್ಟಿಕತೆ ಕೊರತೆಯ ಮುಖ್ಯ ಕಾರಣ ಸಂಪನ್ಮೂಲದ ಕೊರತೆ ಅಲ್ಲ, ಬದಲಿಗೆ ಜಾಗೃತಿ ಇಲ್ಲದಿರುವುದಾಗಿದೆ. ಹಾಗಾಗಿ ಜಾಗೃತಿ ಮೂಡಿಸುವುದು ಕೂಡ ಬಹಳ ಮುಖ್ಯವಾದ ಕೆಲಸವಾಗಿದೆ.

# ಮಹಾಭಾರತ

## ಸೌಪ್ತಿಕಪರ್ವ



• ಹಿಂದಿನ ಸಂಚಿಕೆಯಿಂದ

ಕೃಪ ಕೃತವರ್ಮ ಅಶ್ವತ್ಥಾಮ ಈ ಮೂವರೂ ದುರ್ಯೋಧನನನ್ನು ಇದ್ದಲ್ಲಿಯೇ ಬಿಟ್ಟು, ದಕ್ಷಿಣದ ಕಡೆಗೆ ಹೊರಟರು. ತಮ್ಮ ಮುಂದಿರುವ ಕಾರ್ಯಭಾರವೇ ಅವರ ಮನಸ್ಸನ್ನು ತುಂಬಿಕೊಂಡಿತ್ತು. ದಿನವೆಲ್ಲಾ ಬಾಣಗಳಿಂದಾದ ಗಾಯಗಳಿಂದ ತುಂಬ ಆಯಾಸಗೊಂಡಿದ್ದ ಅವರು ಪಾಂಡವ ಪಾಳೆಯದ ಸಮೀಪದ ಒಂದು ಜಾಗಕ್ಕೆ ಬಂದು ಸೇರಿದರು. ಅದು ರಣರಂಗದ ಸಮೀಪದ ಒಂದು ಅರಣ್ಯವಾಗಿತ್ತು, ಅಲ್ಲಿ ದೊರಕಿದ ನೀರನ್ನು ಕುಡಿದು ಬಾಯಾರಿಸಿಕೊಂಡು, ಮರಗಳ ಅಡಿಯಲ್ಲಿ ಮಲಗಿದರು. ತುಂಬ ಬಳಲಿದ್ದ ಕೃಪ ಕೃತವರ್ಮರಿಗೆ ತಲೆಯನ್ನು ನೆಲದ ಮೇಲಿಟ್ಟೊಡನೆಯೇ ಗಾಢವಾದ ನಿದ್ರೆ ಬಂದಿತು. ಅಶ್ವತ್ಥಾಮನಿಗೆ ನಿದ್ರೆ ಬರಲಿಲ್ಲ. ಅವನು ಕಣ್ಣುಬಿಟ್ಟುಕೊಂಡು ಎಲ್ಲಾಕಡೆಗೂ ನೋಡುತ್ತಿದ್ದನು. ತನ್ನ ತಂದೆಯ ಸಾವಿಗಾಗಿ ಹಾಗೂ ದುರ್ಯೋಧನನ ಸಾವಿಗಾಗಿ ಹೇಗೆ ಸೇಡು ತೀರಿಸಿಕೊಳ್ಳಬೇಕು ಎಂಬುದೇ ಅವನ ಮನಸ್ಸನ್ನು ತುಂಬಿಕೊಂಡಿತ್ತು. ಸುತ್ತಲೂ ನೋಡುತ್ತಿದ್ದ ಅವನಿಗೆ ಮೇಲಿದ್ದ ಮರದ ಕಾಗೆಗಳಿದ್ದುದು ಗೋಚರವಾಯಿತು. ಅವುಗಳೆಲ್ಲ ಗಾಢನಿದ್ರೆಯಲ್ಲಿದ್ದವು. ಇದ್ದಕ್ಕಿದ್ದಂತೆ ಭೀಕರವಾಗಿ ಕಾಣಿಸುತ್ತಿದ್ದ ಒಂದು ಗೂಬೆ ಸ್ವಲ್ಪವೂ ಶಬ್ದವಾಗದಂತೆ ಅಲ್ಲಿಗೆ ಬಂದಿತು.

ತಕ್ಷಣವೇ ಅದು ನಿದ್ರಿಸುತ್ತಿದ್ದ ಕಾಗೆಗಳನ್ನು ಕೊಲ್ಲುವ ಕಾಯಕದಲ್ಲಿ ತೊಡಗಿತು. ಕ್ಷಣಮಾತ್ರದಲ್ಲಿ ಎಲ್ಲಾಕಾಗೆಗಳನ್ನೂ ಕೊಂದುಹಾಕಿದ ಅದು, ಸುಖವಾಗಿ ತಾನು ಎಲ್ಲಿಂದ ಬಂದಿತೋ ಅಲ್ಲಿಗೆ ಹೊರಟುಹೋಯಿತು. ಈ ಗೂಬೆ ಅಶ್ವತ್ಥಾಮನ ಮನಸ್ಸಿನಲ್ಲಿ ಒಂದು ಹೊಸ ಯೋಚನೆ ಬರುವುದಕ್ಕೆ ಕಾರಣವಾಯಿತು. ಹೌದು, ಇದೇ ಸರಿಯಾದದ್ದು: ಈಗ ನಾನು ಪಾಂಡವ ಪಾಳಯಕ್ಕೆ ಹೋಗಿ ಅಲ್ಲಿದ್ದವರನ್ನೆಲ್ಲ ಕೊಲ್ಲುವೆನು. ಯುದ್ಧ ಮುಗಿದಿರುವುದರಿಂದ, ಬಹು ದಿನಗಳ ನಂತರ ಇಂದು ಅವರೆಲ್ಲ ಶಾಂತವಾಗಿ ನಿದ್ರಿಸುತ್ತಿರುವರು. ಅವರ ಮೇಲೆರಗಿ ತಾನು ತನ್ನ ಸೇಡನ್ನು ತೀರಿಸಿಕೊಳ್ಳುವೆನು. ಈ ಯೋಚನೆಯಿಂದ ಅಶ್ವತ್ಥಾಮನು ಎಷ್ಟು ಉದ್ರಿಕ್ತನಾದನೆಂದರೆ, ಅವನಿಗೆ ಕುಳಿತಲ್ಲಿ ಕುಳ್ಳಿರಲಾಗಲಿಲ್ಲ. ಉಳಿದವರನ್ನೂ ಗಡಬಡಿಸಿ ಎಬ್ಬಿಸಿ, ತನ್ನ ಮನಸ್ಸಿನ ಯೋಚನೆಯನ್ನು ತಿಳಿಸಿದನು. ಅವರು ಬಹುವಾಗಿ ಹೆದರಿದರು. ಕೃಪನು, ''ಅಶ್ವತ್ಥಾಮ, ಪಾಂಡವರನ್ನು ಕೊಲ್ಲುವ ನಿನ್ನ ಈ ಯೋಚನೆ ಸರಿಯಲ್ಲ. ದುರ್ಯೋಧನನೂ ಏನು ಆದರ್ಶ ರಾಜನಾಗಿರಲಿಲ್ಲ; ಅವನು ಬಹು ಕ್ರೂರಿ, ಕಪಟಿ; ಇಷ್ಟೆಲ್ಲ ವರ್ಷಗಳು ಅವರನ್ನು ಕೆಟ್ಟದಾಗಿ ನಡೆಸಿಕೊಂಡವನು; ಅದಕ್ಕಾಗಿ ಅವರು ಅವನನ್ನು ಕೊಲ್ಲಬೇಕಾಯಿತು. ದುಯೋಧನ ತೊಡೆ ಮುರಿದಿದ್ದು ಭೀಮ ನಮ್ಮೆಲ್ಲರ ಮುಂದೆಯೇ ಮಾಡಿದ್ದ ಪ್ರತಿಜ್ಞೆಯಂತೆ. ಅದು ಅನ್ಯಾಯದ ಯುದ್ಧವಾಗಿತ್ತು ಎಂಬುದನ್ನು ಒಪ್ಪುತ್ತೇನೆ; ಆದರೆ ವಿಧಿಯ ಮೇಲೆ ನಾನು ತೀರ್ಮಾನ ಕೊಡಲಾರೆ. ನೀನು ರಾಜನ ಹಾಗೂ ನಿನ್ನ ತಂದೆಯ ಸಾವಿನ ಸೇಡನ್ನು ತೀರಿಸಿಕೊಳ್ಳುವೆನೆಂದು ಪ್ರತಿಜ್ಞೆ ಮಾಡಿರುವೆ; ಸರಿಯೇ.

ಮುಂದುವರಿಯುವುದು...

# ಷಡ್ಯಂತ್ರ..!



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ



ಷಡ್ಯಂತ್ರ ಎಂಬ ಪದವನ್ನು ನಾವು ಹಲವಾರು ಸಂದರ್ಭದಲ್ಲಿ ಬಳಸಿರುತ್ತೇವೆ ಅಥವಾ ಕೇಳಿರುತ್ತೇವೆ ಆದರೇ ಈ ಷಡ್ಯಂತ್ರ ಪದದ ನಿಜವಾದ ಅರ್ಥ ವ್ಯಾಪ್ತಿ ಹಾಗೂ ಪದ ಬಳಕೆಯ ವೈಚಾರಿಕ ಹಿನ್ನೆಲೆಗಳ ಅರಿವು ಬಹಳ ಜನರಿಗೆ ಇರುವುದಿಲ್ಲ

ಆದುದರಿಂದ ಷಡ್ಯಂತ್ರದ ಬಗ್ಗೆ ಲಭ್ಯವಿರುವ ಒಂದಿಷ್ಟು ಮಾಹಿತಿಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ ಪುರಾಣಗಳು ಹಾಗೂ ಇತಿಹಾಸದ ಪುಟಗಳಲ್ಲಿ ಹಲವು ರಾಜ ಮಹರಾಜರುಗಳು ಹಾಗೂ ಇಂದಿನ ರಾಜಕಾರಣಿಗಳು ಹಾಗೂ ಜನ ಸಾಮಾನ್ಯರೂ ಸಹಾ ತಮ್ಮ ವಿರೋಧಿ ಗಳನ್ನು ಮಣಿಸಲು ಅವರ ವಿರುದ್ದ ಷಡ್ಯಂತ್ರವನ್ನು ಪ್ರಯೋಗಿಸುತ್ತಾರೆ ಆದರೇ ಈ ಷಡ್ಯಂತ್ರವು ನಿಜವಾಗಿಯೂ ವಿರೋಧಿ ಯ ಮೇಲೆ ಪ್ರಯೋಗವಾದಲ್ಲಿ ಅವನು ಅದರಿಂದ ಪಾರಾಗುವುದು ಕಷ್ಟಸಾಧ್ಯ ಏಕೆಂದರೇ ಈ ಷಡ್ಯಂತ್ರ ವೆಂಬುದು ಬಹಳ ಪರಿಣಾಮಕಾರಿಯಾದ ಒಂದು ಅಸ್ತ್ರ ಅಥವಾ ಪ್ರಯೋಗವಾಗಿದೆ ಹೆಸರೇ ಸೂಚಿಸುವಂತೆ ಷಡ್ಯಂತ್ರವೆಂದರೇ ಆರು ರೀತಿಯಲ್ಲಿ ಅಥವಾ ಆರು ದಿಕ್ಕುಗಳಲ್ಲಿ ಶತೃವನ್ನು ಬಂದಿಸುವ ನಿಷ್ಕ್ರಿಯಗೊಳಿಸುವ ಅಥವಾ ಸೋಲಿಸುವ ಒಂದು ಪ್ರಯೋಗವಾಗಿದೆ ಇವುಗಳಲ್ಲಿ ಯಾವುದಾದರೂ ಎರಡು ಮೂರು ದಿಕ್ಕುಗಳ ಅಥವಾ ರೀತಿಯ ಪ್ರಭಾವವು ಎದುರಾಳಿಯಮೇಲೆ ಬಿದ್ದರೂ ಸಹಾ ಅವನ ವಿನಾಶ ಅಥವಾ ಸೋಲು ನಿಶ್ಚಿತ

**ಪೌರಾಣಿಕ ಹಿನ್ನೆಲೆ :** ಅರವತ್ತನಾಲ್ಕು ಕೋಟಿ ಯೋಗಿನಿ ದೇವತೆಗಳ ಒಡತಿ ಲಲಿತೆಯ ಮೇಲೆ ರಾಕ್ಷಸನೊಬ್ಬ ಮೊಲಬಾರಿಗೆ ಷಡ್ಯಂತ್ರವನ್ನು ಬಳಸಿ ಲಲಿತೆಯ ಯೋಗಿನಿಯರನ್ನು ನಿಷ್ಕ್ರಿಯಗೊಳಿಸಿದ್ದ ಹಾಗೂ ಇದನ್ನರಿತ ಲಲಿತೆಯು ವಿಘ್ನೇಶ್ವರನ ಸಹಕಾರದಿಂದ ರಾಕ್ಷಸ ಹೂಡಿದ್ದ ಷಡ್ಯಂತ್ರದಿಂದ ಪಾರಾಗಿ ರಾಕ್ಷಸನನ್ನು ಸಂಹಾರ ಮಾಡಿದ ರೋಚಕ ಕಥೆಯೊಂದು ಲಲಿತ ಪುರಾಣದಲ್ಲಿ ಹೇಳಲ್ಪಟ್ಟಿದೆ ಇಷ್ಟು ರೀತಿಯಲ್ಲಿ ಎದುರಾಳಿಯ ಶಕ್ತಿಯನ್ನು ಕುಗ್ಗಿಸುವ ಅಸ್ತ್ರವೇ ಈ ಷಡ್ಯಂತ್ರ ಜನಸಾಮಾನ್ಯರು ಈ ಪದವನ್ನು ಒಂದು ಸಾದಾರಣ ಕುತಂತ್ರವೆಂದಷ್ಟೇ ಭಾವಿಸಿದ್ದಾರೆ ಆದರೇ ಷಡ್ಯಂತ್ರದ ನಿಜ ಅರ್ಥವು ಬಹಳ ವಿಶಾಲವಾಗಿದೆ ನಿಮ್ಮ ಮೇಲೆ ಯಾರಾದರೂ ಷಡ್ಯಂತ್ರ ಪ್ರಯೋಗಿಸಿದ್ದಾರೆಯೇ ಅದರಲ್ಲಿ ಯಾವ ರೀತಿಯ ಪರಿಣಾಮವನ್ನು ಎದುರಿಸುತ್ತಿದ್ದೀರಿ ಇದನ್ನು ತಕ್ಷಣವೇ ಗುರುತಿಸಿಕೊಂಡು ಪಾರಾಗದಿದ್ದಲ್ಲಿ ಷಡ್ಯಂತ್ರದ ಆರೂ ದಿಕ್ಕುಗಳು ಕ್ರಿಯಾಶೀಲವಾಗುವ ಸಾಧ್ಯತೆಗಳಿರುತ್ತವೆ.

## ಷಡ್ಯಂತ್ರ ಪ್ರಯೋಗದ ಭೀಕರ ಪರಿಣಾಮ

ಮೊದಲೇ ಹೇಳಿದಂತೆ ಈ ಯಂತ್ರವು ಅಥವಾ ತಂತ್ರಜ್ಞಾನ ವು ಎದುರಾಳಿಯನ್ನು ಆರು ರೀತಿಯಲ್ಲಿ ಭಾದಿಸುತ್ತದೆ ಅವು ಯಾವುವೆಂದರೇ

- ಮರಣ : ಎದುರಾಳಿಯ ಮರಣವೇ ಸಂಭವಿಸಬಹುದು ಎದುರಾಳಿಯೇ ಮರಣ ಹೊಂದಿದಾಗ ಗೆಲುವು ಷಡ್ಯಂತ್ರ ಪ್ರಯೋಗಿಸಿದವನಿಗೇ ಲಭಿಸುವುದು
- ಮೋಹನ: ಎದುರಾಳಿಯು ಹಲವು ರೀತಿಯ ಮಾನಸಿಕ ತೊಳಲಾಟಗಳಿಗೆ ಸಿಕ್ಕಿ ತನ್ನ ಹೋರಾಟವನ್ನು ಕೈ ಬಿಡುವುವಂತೆ ಮಾಡುವುದು
- ಉಚ್ಚಾಟನ : ಎದುರಾಳಿಯು ತನ್ನ ಸ್ತಾನದಿಂದ ಅನಿವಾರ್ಯ ಕಾರಣಗಳಿಂದ ಗಡಿಪಾರಾಗ ಬಹುದು ಅಥವಾ ಜಾಗ ಕಾಲಿ ಮಾಡವಂತೆ ಮಾಡುವುದು
- ವಿದ್ವೇಷಣ :ಎದುರಾಳಿಯ ಸಂಬಂದಗಳಲ್ಲಿ ಒಡಕು ಮೂಡುವಂತೆ ಮಾಡುವುದು ಎದುರಾಳಿಯ ಸಾಮರ್ಥ್ಯವನ್ನು ಹೆಚಿಸುವಂತಹ ಬಂದು ಬಳಗ ಸ್ನೇಹಿತರು ಸೈನಿಕರು ಸಹಪಾಟಿಗಳು ಕುಟುಂಬದ ಸದಸ್ಯರೊಂದಿಗೆ ಮನಃಸ್ತಾಪ ಮೂಡುವಂತೆ ಮಾಡಿ ಎದುರಾಳಿಯನ್ನು ಒಂಟಿಯಾಗಿಸುವುದು
- ಆಕರ್ಷಣ :ಎದುರಾಳಿ ತನ್ನ ಹೋರಾಟವನ್ನು ಬಿಟ್ಟು ಬೇರೊಂದು ವಿಷಯದ ಕಡೆಗೆ ಮನಸು ಬದಲಿಸುವಂತೆ ಅಥವಾ ಬೇರೊಂದು ವಿಷಯದ ಮೋಹಕ್ಕೆ ಸಿಕ್ಕಿಸುವುದು ಇಲ್ಲಿ ಮಾದಕ ವಸ್ತು ಹೆಣ್ಣು ಮುಂತಾದವುಗಳ ಕಡೆ ಎದುರಾಳಿಯ ಮನಸ್ಸು ತಿರುಗಿಸುವುದು
- ಸ್ಥಂಭನ : ಎದುರಾಳಿಯ ಸಂಪನ್ಮೂಲಗಳನ್ನು ನಿಲ್ಲಿಸುವುದು ಹೋರಾಟಕ್ಕೆ ಅಗತ್ಯವಿರುವ ಸಂಪತ್ತು ಹಣ ಶಸ್ತ್ರಾಸ್ತ್ರಗಳು ಮುಂತಾದವುಗಳು ದೊರೆಯದಂತೆ ಮಾಡುವುದು

# ಸೀರೀಸ್ 4 ಹೋಮ್ ಲಿಫ್ಟ್‌ಗಳ ಬಿಡುಗಡೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಆಧುನಿಕ ತಂತ್ರಜ್ಞಾನಗಳನ್ನು ಜನರಿಗೆ ಒದಗಿಸುವಲ್ಲಿ ಮುಂಚೂಣಿಯಲ್ಲಿರುವ ಭಾರತದ ಅತಿದೊಡ್ಡ ಹೋಮ್ ಎಲಿವೇಟರ್ ಬ್ರ್ಯಾಂಡ್ ಆಗಿರುವ ನಿಬವ್ ಲಿಫ್ಟ್ ಬೆಂಗಳೂರಿನಲ್ಲಿ ತನ್ನ ಅತ್ಯಾಧುನಿಕ ನಿಬವ್ ಸೀರೀಸ್ 4 ಹೋಮ್ ಲಿಫ್ಟ್‌ಗಳನ್ನು ಬಿಡುಗಡೆ ಮಾಡಿದೆ. ಹೊಸ ಲಿಫ್ಟ್ ಎಐ ಆಧರಿತ ಕ್ಯಾಬಿನ್ ಡಿಸ್ ಪ್ಲೇ, ಅತ್ಯಾಕರ್ಷಕ ಎಲ್‌ಓಪಿ ಡಿಸ್ ಪ್ಲೇ ಮುಂತಾದ ವಿಶಿಷ್ಟ ಫೀಚರ್ ಗಳನ್ನು ಹೊಂದಿದೆ.



ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಲು ಮತ್ತು ಮೃದುವಾಗಿ ಲ್ಯಾಂಡ್ ಆಗಲು ಈ ಲಿಫ್ಟ್ ಲಿಡಾರ್ 2.0 ತಂತ್ರಜ್ಞಾನವನ್ನು ಬಳಸುತ್ತಾದೆ.

ಮೂಲಕ ಹೋಮ್ ಎಲಿವೇಟರ್ ವಿಭಾಗ ದಲ್ಲಿಯೇ ಈ ಸೌಲಭ್ಯಗಳನ್ನು ಹೊಂದಿರುವ ಮೊಟ್ಟಮೊದಲ ಉತ್ಪನ್ನ ಎಂಬ ಹೆಗ್ಗಳಿಕೆ ಗಳಿಸಿಕೊಂಡಿದೆ. ಮಿಡ್‌ನೈಟ್ ಬ್ಲ್ಯಾಕ್ ಆವೃತ್ತಿಯಲ್ಲಿ ಬಿಡುಗಡೆ ಮಾಡಲಾಗಿರುವ ನಿಬವ್ ಸೀರೀಸ್ 4 ಲಿಫ್ಟ್‌ಗಳು ಗಾಳಿಯನ್ನು ಆಧರಿಸಿ ಕೆಲಸ ಮಾಡುವ ಲಿಫ್ಟ್‌ಗಳಲ್ಲಿಯೇ ಅತಿ ಹೆಚ್ಚು ಸ್ಥಳ ಹೊಂದಿರುವ ಲಿಫ್ಟ್ ಆಗಿದೆ. ಈ ಹೊಸ ಲಿಫ್ಟ್ ಅನ್ನು ಆಂಬಿಯೆಂಟ್ ಲೈಟಿಂಗ್, ನ್ಯೂಜಿಲೆಂಡ್ ಉಣ್ಣೆಯ ಕಾರ್ಪೆಟ್‌ಗಳು, ಸ್ಟಾರ್‌ಲೈಟ್ ಸೀಲಿಂಗ್, ಲೆದರ್ ಫಿನಿಶ್ ಇಂಟೀರಿಯರ್ ಇತ್ಯಾದಿ ಅಂಶಗಳನ್ನು ಬಳಸಿಕೊಂಡು ಸೊಗಸಾಗಿ ವಿನ್ಯಾಸಗೊಳಿಸಲಾಗಿದೆ. ಬಿಲ್ಡರ್ ಮತ್ತು ಸಮಾಜ ಸೇವಕ ಶ್ರೀ ಪಿ ಎಂ ವಿಘ್ನೇಶ್ ಗೌಡ, ಸಮಾಜ ಸೇವಕ ಶ್ರೀ ಜಯರಾಮ ಗೌಡ ಅವರು ನಿಬವ್ ಹೋಮ್ ಲಿಫ್ಟ್‌ನ ಹಿರಿಯ ಆಡಳಿತ ಮಂಡಳಿ ಸದಸ್ಯರ ಸಮ್ಮುಖದಲ್ಲಿ ಬೆಂಗಳೂರಿನ ಎಕ್ಸ್‌ಪೀರಿಯನ್ಸ್ ಸೆಂಟರ್ ನಲ್ಲಿ ಹೊಸ ಉತ್ಪನ್ನವನ್ನು ಬಿಡುಗಡೆ ಮಾಡಿದರು. ನಿಬವ್ ಸೀರೀಸ್ 4 ಲಿಫ್ಟ್‌ಗಳು ಅತ್ಯುನ್ನತ ಸುರಕ್ಷಾ ಕ್ರಮಗಳನ್ನು ಹೊಂದಿದೆ. ತುರ್ತು ಪರಿಸ್ಥಿತಿಗಳಲ್ಲಿ ತ್ವರಿತ ಮತ್ತು ಸುರಕ್ಷಿತವಾಗಿ ಕಾರ್ಯನಿರ್ವಹಿಸುವ ರಾಪಿಡ್ ರೆಸ್ಕ್ಯೂ ಲ್ಯಾಚ್ ಸೌಕರ್ಯ ಒದಗಿಸುತ್ತಿದೆ. ಈ ಲಿಫ್ಟ್‌ಗಳು ಕಾರ್ಬನ್ ಸೀಲ್ ಮೋಟಾರ್ 2.0 ಒಳಗೊಂಡಿದ್ದು, ಅದರಿಂದ ಹೆಚ್ಚು ಬಾಳಿಕೆ ಬರುತ್ತದೆ ಮತ್ತು ದೀರ್ಘಾವಧಿವರೆಗೆ ಉತ್ತಮ ಕಾರ್ಯಕ್ಷಮತೆ ನೀಡುತ್ತದೆ. ಜೊತೆಗೆ ಜಿಎಸ್‌ಎಂ ಕನೆಕ್ಟಿವಿಟಿ ನೀಡಲಾಗಿದ್ದು, ಬಳಕೆದಾರರು ಹೆಚ್ಚು ಸುರಕ್ಷತೆ ಹೊಂದಿರುತ್ತಾರೆ. ನಿಬವ್ ಸೀರೀಸ್ 4 ಲಿಫ್ಟ್‌ಗಳು ಕ್ಯಾಬಿನ್ ಪಿಲ್ಲರ್‌ಗಳಲ್ಲಿ ಆಂಬಿಯೆಂಟ್ ಲೈಟಿಂಗ್ ಮತ್ತು ಆಕ್ಸೆಂಟ್ ಲೈಟಿಂಗ್ ಹೊಂದಿವೆ. ಫ್ಯಾನ್‌ಗಳು, ಡಿಜಿಟಲ್ ಅನಲಾಗ್ ಗಡಿಯಾರ ಇರುವ ಟಚ್ ಸ್ಕ್ರೀನ್ ಡಿಸ್ಪ್ಲೇ ಮತ್ತು ಹ್ಯಾಂಡ್ ಗೆಸ್ಚರ್ ಕಂಟ್ರೋಲ್‌ಗಳು ಇತ್ಯಾದಿ ಫೀಚರ್ ಗಳೂ ಲಭ್ಯವಿದೆ. ನಿಬವ್ ಸೀರೀಸ್ 4 ಲಿಫ್ಟ್‌ಗಳ ಆರಂಭಿಕ ಬೆಲೆ ರೂ.12.49 ಲಕ್ಷ. ರೂ.39,999/- ತಿಂಗಳಿಂದ ಪ್ರಾರಂಭವಾಗುವ ಝೀರೋ ಕಾಸ್ಟ್ ಇಎಂಐ ಕೂಡ ಲಭ್ಯವಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ +91 78248 12121. ಈ ಲಿಫ್ಟ್‌ಗಳನ್ನು ನೋಡಬಹುದು ಮತ್ತು ವಿಚಾರಿಸಬಹುದು- 632,2ನೇ ಮೈನ್, 2ನೇ ಕ್ರಾಸ್ ರಸ್ತೆ, ಆರ್ ಬಿ ಐ ಲೇಔಟ್, ಹಂತ 7, ಜೆ.ಪಿ. ನಗರ, ಬೆಂಗಳೂರು.

**ನಿಬವ್ ಲಿಫ್ಟ್‌ನ ಸಿಇಓ, ಸಂಸ್ಥಾಪಕ ಶ್ರೀ ವಿಮಲ್ ಬಾಬು, ನಮ್ಮ ಹೊಸ ನಿಬವ್ ಸೀರೀಸ್ 4 ಹೋಮ್ ಲಿಫ್ಟ್‌ಗಳನ್ನು ಸಂತೋಷದಿಂದ ಬಿಡುಗಡೆ ಮಾಡಿದ್ದೇವೆ. ಪ್ರತಿಯೊಬ್ಬ ಮನೆ ಮಾಲೀಕರು ಈ ಉತ್ಪನ್ನದ ಮೂಲಕ ಐಷಾರಾಮಿ ಅನುಭವ ಆರಾಮದಾಯಕತೆ ಹೊಂದಬಹುದು ಎಂದು ಹೇಳಿದರು.**

# ಭಾರತದ ಅತಿದೊಡ್ಡ ಖಾದ್ಯ ತೈಲ ಬ್ರ್ಯಾಂಡ್ ಸನ್‌ಪ್ಯೂರ್

• ಉದಯವಾಹಿನಿ, ಬೆಂಗಳೂರು

ದಕ್ಷಿಣ ಭಾರತದ ಅತಿದೊಡ್ಡ ಖಾದ್ಯ ತೈಲ ಬ್ರ್ಯಾಂಡ್, ಸನ್ಪುರೆ ತನ್ನ ಇತ್ತೀಚಿನ ಮಾರುಕಟ್ಟೆ ಪ್ರಚಾರವನ್ನು ಪ್ರಾರಂಭಿಸುವುದಾಗಿ ಘೋಷಿಸಿತು, ಅದರ ಪ್ರಮುಖ ಉತ್ಪನ್ನವಾದ ಸನ್‌ಪ್ಯೂರ್ ಸನ್ಫ್ಲವರ್ ಆಯಿಲ್ ಅನ್ನು ಕೇಂದ್ರೀಕರಿಸಿದೆ, ಇದು ಭಾರತದ ಏಕೈಕ ಭೌತಿಕವಾಗಿ ಸಂಸ್ಕರಿಸಿದ ಸೂರ್ಯಕಾಂತಿ ಎಣ್ಣೆಯಾಗಿದೆ. 30 ಇಯರ್ಸ್ ಆಫ್ ಪ್ಯೂರಿಟಿ ಮತ್ತು ಹೆಲ್ತ್ ಎಂಬ ಶೀರ್ಷಿಕೆಯ ಈ ಅಭಿಯಾನವು ಯುವ ದಂಪತಿಗಳು ಹಂಚಿಕೊಂಡ ಹರ್ಷಚಿತ್ತದಿಂದ ಬೆಳಗಿನ ಸಾರವನ್ನು ಸೆರೆಹಿಡಿಯುತ್ತದೆ, ಅವರ ದೈನಂದಿನ ಸಂತೋಷದಲ್ಲಿ ಉತ್ಪನ್ನದ ಪಾತ್ರವನ್ನು ಎತ್ತಿ ತೋರಿಸುತ್ತದೆ. ಸಾಂಪ್ರದಾಯಿಕ ಮತ್ತು ಡಿಜಿಟಲ್ ಮಾಧ್ಯಮದಾದ್ಯಂತ ವರ್ಷಪೂರ್ತಿ, ಬಹುಭಾಷಾ ಅಭಿಯಾನವು ನಮ್ಮ ದೈನಂದಿನ ಜೀವನದ ಗುಣಮಟ್ಟವನ್ನು ಹೆಚ್ಚಿಸಲು ವಿಶ್ವಾಸಾರ್ಹ ಬ್ಯಾಂಡ್ನಿಂದ ಶುದ್ಧ ಮತ್ತು ಆರೋಗ್ಯಕರ ಉತ್ಪನ್ನಗಳನ್ನು ಸಂಯೋಜಿಸುವ ಮೌಲ್ಯವನ್ನು ಒತ್ತಿಹೇಳುತ್ತದೆ.




ಬಿಸಿಲಿನ ಹಿನ್ನೆಲೆಯಲ್ಲಿ, ಮಾಸ್ಟರ್‌ಶೆಫ್ ಇಂಡಿಯಾ ಸೀಸನ್ 8 ರ ವಿಜೇತ ಮೊಹಮ್ಮದ್ ಆಶಿಕ್ ಮತ್ತು ಜನಪ್ರಿಯ ದೂರದರ್ಶನ ಮತ್ತು ಕನ್ನಡ ಚಲನಚಿತ್ರ ನಟಿ ಮೇಘಾ ಎಸ್. ಕಥಾಹಂದರವು ತನ್ನ ಪಾಕಶಾಲೆಯ ಉತ್ಸಾಹದಲ್ಲಿ ಆಳವಾಗಿ ಮುಳುಗಿರುವ ಪತಿಯೊಂದಿಗೆ ತೆರೆದುಕೊಳ್ಳುತ್ತದೆ, ಸನ್ಪ್ಯೂರ್ ಸನ್ಫ್ಲವರ್ನೊಂದಿಗೆ ರುಚಿಕರವಾದ ಭಕ್ಷ್ಯಗಳನ್ನು ಬೇಯಿಸುತ್ತದೆ. ತೈಲ. ಏತನ್ಮಧ್ಯೆ, ಅವನ ಹೆಂಡತಿ, ಸೊಗಸಾಗಿ ಧರಿಸಿ, ಅವನ ಗಮನವನ್ನು ಹುಡುಕುತ್ತಾಳೆ, ಅವನ ಪಾಕಶಾಲೆಯ ಅಭಿನಂದನೆಗಳನ್ನು ಅವಳ ನೋಟದ ಬಗ್ಗೆ ಅವಳ ಪ್ರಶ್ನೆಗಳಿಗೆ ಪ್ರತಿಕ್ರಿಯೆಯಾಗಿ ಅರ್ಥೈಸುತ್ತಾಳೆ. 30 ವರ್ಷಗಳ ಶುದ್ಧತೆ ಮತ್ತು ಆರೋಗ್ಯ ಅಭಿಯಾನ - ಕನ್ನಡ, ತಮಿಳು, ತೆಲುಗು, ಮರಾಠಿ, ಮಲಯಾಳಂ, ಹಿಂದಿಯಲ್ಲಿ - ದಿನನಿತ್ಯದ ವರ್ಧನೆಯಲ್ಲಿ ರಾಸಾಯನಿಕ ಮುಕ್ತ ಸೂರ್ಯಕಾಂತಿ ಎಣ್ಣೆಯ ಪಾತ್ರವನ್ನು ಒತ್ತಿಹೇಳುವ ಮೂಲಕ ಶಾಂತವಾದ ಪರಿಸರದ ಚಿತ್ರಣದ ಮೂಲಕ ವೀಕ್ಷಕರನ್ನು ಅನುರಣಿಸಲು ವಿನ್ಯಾಸಗೊಳಿಸಲಾಗಿದೆ. ಅಡುಗೆ ಅನುಭವಗಳು. ಪತಿ ತನ್ನ ಹೆಂಡತಿಗೆ ನೀಡಿದ ಕಾವ್ಯಾತ್ಮಕ ಭರವಸೆಗಳು, ಅವಳ ಮತ್ತು ಅವನ ನೆಚ್ಚಿನ ಅಡುಗೆ ಎಣ್ಣೆ ಇಬ್ಬರ ಮೇಲಿನ ಪ್ರೀತಿಯೊಂದಿಗೆ ಹೆಣೆದುಕೊಂಡಿವೆ, ದಂಪತಿಗಳು ಉತ್ಪನ್ನದ ವೈಶಿಷ್ಟ್ಯಗಳನ್ನು ಹೆಮ್ಮೆಯಿಂದ ಪ್ರದರ್ಶಿಸುವ ಆಕರ್ಷಕ ಕ್ಷಣದಲ್ಲಿ ಕೊನೆಗೊಳ್ಳುತ್ತದೆ- ಶುದ್ಧತೆ, ರಾಸಾಯನಿಕ ಮುಕ್ತ ದೈಹಿಕವಾಗಿ ಸಂಸ್ಕರಿಸಿದ ಉತ್ತಮ ಗುಣಮಟ್ಟ.

# ಹೊಸ ಎಕ್ಸ್‌ಪೀರಿಯನ್ಸ್ ಸೆಂಟರ್ ಉದ್ಘಾಟನೆ

• ಉದಯವಾಹಿನಿ, ಬೆಂಗಳೂರು



ಸ್ಪ್ರಿಂಗ್, ಕಾಯಿರ್, ಫೋಮ್‌ನಾದ್ಯಂತ ಗುಣಮಟ್ಟದ ಹಾಸಿಗೆಗಳ ಶ್ರೇಣಿಗೆ ಹೆಸರುವಾಸಿಯಾಗಿರುವ ಹಾಸಿಗೆ ಕಂಪನಿ ರೆಸ್ಟೊಲೆಕ್ಸ್ ಬೆಂಗಳೂರಿನ ಬಾಣಸ ವಾಡಿಯಲ್ಲಿ ತನ್ನ ಏಳನೇ ಎಕ್ಸ್ ಪೀರಿಯನ್ಸ್ ಸೆಂಟರ್ ಅನ್ನು ಉದ್ಘಾಟಿಸಿತು.

ಪ್ರತೀ ಗ್ರಾಹಕರು ಉತ್ಪನ್ನಗಳನ್ನು ನೋಡಿ ವಿವೇಚಯುಕ್ತ ನಿರ್ಧಾರ ತೆಗೆದುಕೊಳ್ಳಲು ನೆರವಾಗಲು ಈ ಎಕ್ಸ್ ಪೀರಿಯನ್ಸ್ ಸೆಂಟರ್ ಅನ್ನು ವೈಜ್ಞಾನಿಕವಾಗಿ ವಿನ್ಯಾಸಗೊಳಿಸಲಾಗಿದೆ. ಈ ಎಕ್ಸ್ ಪೀರಿಯನ್ಸ್ ಸೆಂಟರ್ ನಲ್ಲಿ ರೆಸ್ಟೊಲೆಕ್ಸ್ ನ ಎಲ್ಲಾ ಉತ್ಪನ್ನಗಳನ್ನು ಪ್ರದರ್ಶಿಸಲಾಗುತ್ತದೆ. ಅದರ ಜೊತೆಗೆ ಬೆಲೆ ಮತ್ತು ಸರ್ವೀಸ್ ಕುರಿತಾದ ಆಫರ್ ಗಳನ್ನು ಒದಗಿಸಲಾಗುತ್ತದೆ. 1750 ಚದರ ಅಡಿ ವಿಸ್ತೀರ್ಣದ ಈ ಎಕ್ಸ್ ಪೀರಿಯನ್ಸ್ ಸೆಂಟರ್ ಅನ್ನು ರೆಸ್ಟೊಲೆಕ್ಸ್ ನ ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್ ಕುರುವಿಲ್ಲ, ನಿರ್ದೇಶಕ ದವೀದ್ ಕುರುವಿಲ್ಲ, ರೆಸ್ಟೊಲೆಕ್ಸ್‌ನ ಸಿಇಒ ಸುರೇಶ್ ಬಾಬು ಮತ್ತು ರೆಸ್ಟೊಲೆಕ್ಸ್ ನ ಮಾರ್ಕೆಟಿಂಗ್ ಹೆಡ್ ಸೋನಾಕ್ಷಿ ದವೀದ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ದವೀದ್ ಕುರುವಿಲ್ಲಾ, ''ಕಳೆದ 40 ವರ್ಷಗಳಿಂದ ರೆಸ್ಟೊಲೆಕ್ಸ್ ಗ್ರಾಹಕ ಸ್ನೇಹಿ ನಿರ್ಧಾರಗಳನ್ನು ಕೈಗೊಳ್ಳುತ್ತಾ ಬಂದಿದೆ. ಈ ಹೊಸ ಎಕ್ಸ್ ಪೀರಿಯನ್ಸ್ ಸೆಂಟರ್ ಸೇರ್ಪಡೆಯು ನಮ್ಮ ಪಾಲುದಾರರ ಜೊತೆಗಿನ ಬದ್ಧತೆಯನ್ನು ಮತ್ತಷ್ಟು ಗಟ್ಟಿಗೊಳಿಸಲಿದೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

ರೆಸ್ಟೊಲೆಕ್ಸ್ ಗ್ರಾಹಕರ ಅಗತ್ಯಗಳಿಗೆ ತಕ್ಕಂತೆ 10 ವಿಭಾಗಗಳಲ್ಲಿ 28 ವೇರಿಯಂಟ್‌ಗಳ ಹಾಸಿಗೆಗಳನ್ನು ಅಭಿವೃದ್ಧಿಪಡಿಸಿದೆ.

**ರೆಸ್ಟೊಲೆಕ್ಸ್‌ನ ಸಿಇಓ ಸುರೇಶ್ ಬಾಬು, ಉತ್ತಮ ಹಾಸಿಗೆಗಾಗಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಪೂರೈಸಲು ನಾವು ನಮ್ಮ ಉಪಸ್ಥಿತಿಯನ್ನು ಹೆಚ್ಚು ಸ್ಥಳಗಳಿಗೆ ವಿಸ್ತರಿಸುತ್ತಿದ್ದೇವೆ. ನಮ್ಮ ಉತ್ಪನ್ನಗಳು ಎಲ್ಲಾ ಕಡೆ ಲಭ್ಯವಿರುವಂತೆ ನೋಡಿಕೊಳ್ಳುತ್ತಿದ್ದೇವೆ. ಆನ್ ಲೈನ್ ಖರೀದಿ ಹೆಚ್ಚಾಗಿರುವುದನ್ನು ಗಮನಿಸಿ, ನಮ್ಮ ಇ ಕಾಮರ್ಸ್ ವಿಭಾಗ ಮತ್ತು ಪೂರೈಕೆ ವಿಭಾಗವನ್ನು ಗಟ್ಟಿಗೊಳಿಸಿದ್ದೇವೆ ಎಂದು ಹೇಳಿದರು.**

# ಪ್ರೇಕ್ಷಕರ ಮನದಂಗಳದಲ್ಲಿ ಅಮೃತ ಮಂಥನ

• ಉದಯವಾಹಿನಿ, ಬೆಂಗಳೂರು

**ವಿದುಷಿ ಶಮಾ ಕೃಷ್ಣ ನೇತೃತ್ವದಲ್ಲಿ ನೃತ್ಯಾರ್ಣವ ಶ್ರದ್ಧಾ ನೃತ್ಯ ಸಂಸ್ಥೆ 14ನೇ ವಾರ್ಷಿಕೋತ್ಸವ ಸಂಪನ್ನ ಪ್ರೇಕ್ಷಕ ವರ್ಗದಿಂದ ಮೆಚ್ಚುಗೆ**

**ಕೌಸಲ್ಯಾ ರಾಮ**


ಉದಯವಾಹಿನಿ ಚಿತ್ರ

**ಬೆಂಗಳೂರು** ನಗರದ ಶ್ರದ್ಧಾ ನೃತ್ಯ ಸಂಸ್ಥೆ 14ನೇ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ' ಶ್ರದ್ಧಾ ನೃತ್ಯಾರ್ಣವ' ವಿಶೇಷ ನೃತ್ಯೋತ್ಸವ ಕಲಾ ರಸಿಕರ ಮನಸೂರೆಗೊಂಡಿತು.

ಮಲ್ಲೇಶ್ವರದ ವಯ್ಯಲಿಕಾವಲ್‌ನ ಚೌಡಯ್ಯ ಸ್ಮಾರಕ ಭವನದಲ್ಲಿ ಆಯೋಜಿದ್ದ ಕಾರ್ಯಕ್ರಮದಲ್ಲಿ ಸಂಸ್ಥೆಯ ಉತ್ಸಾಹಿ ಕಲಾವಿದರಿಂದ ನೃತ್ಯ ಸಮರ್ಪಣೆಯಾಗಿದ್ದು ವಿಶೇಷ. ಇದುವೇ 'ನೃತ್ಯಾರ್ಣವ' ದ ವಿಶೇಷ.

ದೇಶದ ಸುವಿಖ್ಯಾತ ರಚನೆಕಾರರ ಕೃತಿಗಳನ್ನು ಮೊದಲ ಹಂತದಲ್ಲಿ ನೃತ್ಯಾರ್ಣವಕ್ಕೆ ಸಮರ್ಥವಾಗಿ ಬಳಸಿಕೊಂಡು ಅದಕ್ಕೆ ತಕ್ಕಂತೆ ಚೇತೋಹಾರಿಯಾಗಿ ಯುವತಿಯರು ಹೆಜ್ಜೆ ಹಾಕಿದ್ದು ಗಮನ ಸೆಳೆಯಿತು. ಉತುಕ್ಕಾಡು ವೆಂಕಟಸುಬ್ಬಯ್ಯ ಅವರ ಆನಂದ ನರ್ತನ ಗಣಪತಿ, ತುಳಸೀ ದಾಸರ ಶ್ರೀ ರಾಮಚಂದ್ರ ಕೃಪಾಳು ಭಜಮನ, ಪದ್ಮಚರಣರ ಪ್ರದೋಷ ಸಮಯದಿ ಪರಶಿವ ತಾಂಡವ, ಪುರಂದರ ದಾಸರ ಭಾಗ್ಯದ ಲಕ್ಷ್ಮಿ ಬಾರಮ್ಮ - ಕೃತಿಗಳಿಗೆ ಸಂಸ್ಥೆಯ ಕಿರಿಯ ಕಲಾವಿದರು ನರ್ತಿಸಿ, ಪ್ರೇಕ್ಷಕ ವರ್ಗದಿಂದ ಸೈ ಎನಿಸಿಕೊಂಡಿದ್ದು ಗಮನಾರ್ಹ.

**ಕಲಾಭಿವ್ಯಕ್ತಿಗೆ ಹೊಸ ಆಯಾಮ:** ಅಮೃತಕ್ಕಾಗಿ ಸುರ- ಅಸುರರು ಮಂದರ ಪರ್ವತವನ್ನೇ ಕ್ಷೀರಸಾಗರದಲ್ಲಿ ಕಡೆದ 'ಅಮೃತ ಮಂಥನ' ನೃತ್ಯ ರೂಪಕ ಕಲಾಭಿವ್ಯಕ್ತಿಗೆ ಹೊಸ ಆಯಾಮವನ್ನೇ ನೀಡಿತು. ಪುರಾಣದ ಕಥೆಯಲ್ಲಿ ಅಡಗಿರುವ ಒಳಾರ್ಥಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟು ವರ್ಣಿಸುವ ಉದ್ದೇಶವನ್ನು ಕಲಾವಿದರು ತಮ್ಮ ಅಭಿನಯದ ಮೂಲಕ ಸಫಲ ಮಾಡಿದರು.

**ಮನದಲ್ಲೇ ಮಥನ:** ಮಾನವನ ಮನಸ್ಸೇ ಕ್ಷೀರ ಸಾಗರ, ಒಳ್ಳೆಯ ಮತ್ತು ಕೆಟ್ಟ ಚಿಂತನೆಗಳೇ ಸುರ- ಅಸುರರು. ಈ ಚಿಂತನೆಗಳ ನಿರಂತರ ಕಾದಾಟದ ನಡುವೆ ಪ್ರತಿಯೊಬ್ಬರ ಮನದೊಳಗೂ ಸಮುದ್ರ ಮಥನ ನಡೆಯುತ್ತದೆ. ಮಾನವನ ಮುಖ್ಯ ಗುರಿಯೇ ಮೋಕ್ಷ ಎಂಬ ಅಮೃತವನ್ನು ಸಿದ್ಧಿಸಿಕೊಳ್ಳುವುದು. ಧರ್ಮದ ಹಾದಿಯನ್ನು ಪಾಲಿಸುವ ಸುರರಿಗೇ ಈ ಮೋಕ್ಷ ಎಂಬುವ ಅಮೃತ ಸಿಗುತ್ತದೆ ಎನ್ನುವ ಸಂದೇಶವನ್ನು ಮನಮುಟ್ಟುವ ರೀತಿಯಲ್ಲಿ ಈ ನೃತ್ಯ ರೂಪಕ ಪ್ರೇಕ್ಷಕರಿಗೆ ಉಣಬಡಿಸಿತು.

ಸಂಸ್ಥೆ ನಿರ್ದೇಶಕಿ ಶಮಾ ಕೃಷ್ಣ ಹಾಗು ಹಿರಿಯ ಕಲಾವಿದರಿಂದ ಅಮೃತ ಮಂಥನ ಎಂಬುವ ರಸಪೂರ್ಣ ನೃತ್ಯ ನಾಟಕದ ಪ್ರಸ್ತುತಿ ವಿಶೇಷವಾಗಿ ಮೂಡಿಬಂತು. ಇದಕ್ಕೆ ಶತಾವಧಾನಿ ಡಾ. ಆರ್. ಗಣೇಶ್‌ರ ಸಾಹಿತ್ಯ, ಕಲಾವಿದ ಪ್ರವೀಣ್ ಡಿ. ರಾವ್ ಸಂಗೀತ ಮತ್ತು ವಿದುಷಿ ಶಮಾ ಕೃಷ್ಣ ಅವರ ನೃತ್ಯ ಸಂಯೋಜನೆ ಸಮರ್ಥವಾದ ನ್ಯಾಯ ಒದಗಿಸಿದ್ದು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. 'ಅಮೃತ ಮಥನ'ಕ್ಕೆ ಅಂದು ಸಾಕ್ಷಾತ್ ಶ್ರೀಹರಿಯೇ ಸೂತ್ರಧಾರನಾಗಿದ್ದ. ಇಂದು ಖ್ಯಾತ ಸಂಶೋಧಕಿ ಪ್ರೊ. ಕರುಣಾ ವಿಜಯೇಂದ್ರ, ಖ್ಯಾತ ನೃತ್ಯ ಪಟುಗಳಾದ ಶೇಷಾದ್ರಿ, ಅಯ್ಯಂಗಾರ್ ಮತ್ತು ನವ್ಯಾ ನಟರಾಜ ಅವರು ಕಲಾ ರಸದೌತಣಕ್ಕೆ ಸಾಕ್ಷಿಯಾಗಿದ್ದು ಬಹು ವಿಶೇಷ.

**ನನ್ನ ಕನಸು, ಕಲ್ಪನೆಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಹಿರಿಯ, ಕಿರಿಯ ಶಿಷ್ಯರು ಸೂಕ್ತವಾಗಿ ಸ್ಪಂದಿಸಿದ್ದಾರೆ. ನೃತ್ಯ ರೂಪಕ ಪ್ರಸ್ತುತಿ ಸಂದರ್ಭ ಕಲಾವಿದರ ಪ್ರತಿ ಹೆಜ್ಜೆಯಲ್ಲೂ ಹೊಸತನ ಮೂಡಿದೆ. ಶ್ರದ್ಧಾ ನೃತ್ಯ ಸಂಸ್ಥೆ ಮೂಲಕ 14 ವರ್ಷ ನಾನು ನಡೆಸಿದ ನರ್ತನ ಕಲಾ ಬೋಧನೆ ಶಿಷ್ಯವರ್ಗದ ಮನಗಳನ್ನು ಮಥನ ಮಾಡಿ ಇಂದು ರಸಿಕ ಮಹೋದಯರಿಗೆ ಆತ್ಮಾನಂದವೆಂಬ ಅಮೃತಪಾನ ಮಾಡಿಸಿದೆ. ಮುಂಬರುವ ವರ್ಷಗಳಲ್ಲಿ ಮತ್ತಷ್ಟು ಹೊಸ ಪ್ರಯೋಗಕ್ಕೆ ಅಣಿಯಾಗಲು 'ನೃತ್ಯಾರ್ಣವ' ಹೊಸ ಚೈತನ್ಯ ನೀಡಿದೆ.**

ವಿದುಷಿ ಶಮಾ ಕೃಷ್ಣ
ಹಿರಿಯ ಭರತನಾಟ್ಯ ಕಲಾವಿದೆ

## 14 ವರ್ಷ ನಾನು ನಡೆಸಿದ ನರ್ತನ ಕಲಾ ಬೋಧನೆ

# ಮುದ ನೀಡಿದ ನೃತ್ಯ ಸಂಜೀವಿನಿಯ ಚಿದ್ರೂಪ ದರ್ಶನಂ



ವೈ.ಕೆ. ಸಂಧ್ಯಾಶರ್ಮ
• ಉದಯವಾಹಿನಿ, ವಿಶೇಷ

ಬೆಂಗಳೂರಿನ ಖ್ಯಾತ ''ನೃತ್ಯ ಸಂಜೀವಿನಿ ಅಕಾಡೆಮಿ''ಯ ಸ್ಥಾಪಕ ಕಾರ್ಯದರ್ಶಿ ಪರಿಣತ ನೃತ್ಯ ಕಲಾವಿದೆ-ಗುರು ಡಾ. ಎನ್. ಎ. ಫಣಿಮಾಲಾ ಈಗಾಗಲೇ ಅನೇಕ ನೃತ್ಯರೂಪಕಗಳ ನಿರ್ಮಾಣ ಮಾಡಿದ್ದು ಈ ದಿಸೆಯಲ್ಲಿ ಸಾಕಷ್ಟು ಅನುಭವ ಪಡೆದಿದ್ದಾರೆ. ಅವರ ಇತ್ತೀಚಿನ ''ಚಿದ್ರೂಪ ದರ್ಶನಂ' ವಿಶಿಷ್ಟ ನೃತ್ಯರೂಪಕ ಜಯನಗರದ 'ಯುವಪಥ' ಸಭಾಂಗಣದಲ್ಲಿ 'ನೃತ್ಯ ಸಂಭ್ರಮ- 2024' ರ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಕಣ್ಮನ ಸೆಳೆಯಿತು.

ಪುಟ್ಟ ಮಕ್ಕಳಿಗೆ ಅತ್ಯಂತ ಪರಿಶ್ರಮದಿಂದ ನೃತ್ಯ ತಾಲೀಮು ನೀಡಿ ಅವರನ್ನು ಒಂದು ಸುಂದರ ನೃತ್ಯರೂಪಕದ ಭಾಗವಾಗಿಸುವುದು ಸುಲಭದ ಮಾತಲ್ಲ. ಗುರು ಫಣಿಮಾಲ ಅವರ ಪರಿಕಲ್ಪನೆ- ನಿರ್ದೇಶನದ 'ಚಿದ್ರೂಪ ದರ್ಶನಂ' ಮಕ್ಕಳ ಸುಂದರಾಭಿನಯದಿಂದ ಯಶಸ್ವಿಯಾಗಿ ಸಾಕಾರಗೊಂಡಿತು. ಪ್ರಥಮ ಪೂಜಿತ ವಿಘ್ನನಿವಾರಕ ವಿನಾಯಕನ ಜೀವನ ಚರಿತೆಯ ಸುತ್ತ ಪರಿಭ್ರಮಿಸಿದ ಕಥಾನಕ ಅಚ್ಚುಕಟ್ಟಾಗಿ ಮೂಡಿಬಂತು. ಪತಿ ಪರಮೇಶ್ವರನ ಅನುಮತಿಯಿಲ್ಲದೆ ಪಾರ್ವತೀದೇವಿಯು ತಂದೆ ದಕ್ಷ ರಾಜನು ಕೈಗೊಂಡಿದ್ದ ಯಜ್ಞಕ್ಕೆ ಆಹ್ವಾನವಿಲ್ಲದೆ ಹೋದದ್ದೇ ದೊಡ್ಡ ದುರಂತಕ್ಕೆ ಕಾರಣವಾಯಿತು. ಸತಿಯ ಆತ್ಮಾಹುತಿಯಿಂದ ನೊಂದು ಕೆರಳಿದ ಶಿವ, ರುದ್ರ ತಾಂಡವ ಮಾಡಿ ಕೋಪಾವಿಷ್ಟನಾಗುತ್ತಾನೆ. ಕೂಡಲೇ, ವೀರಭದ್ರನನ್ನು ಸೃಷ್ಟಿಸಿ ದಕ್ಷನನ್ನು ಸಂಹಾರ ಮಾಡಿ ಎಲ್ಲವನ್ನೂ ಧ್ವಂಸ ಮಾಡಿ ಸೇಡು ತೀರಿಸಿಕೊಳ್ಳುವ ದೃಶ್ಯ ನಾಟಕೀಯ ಆಯಾಮದಿಂದ ಪರಿಣಾಮಕಾರಿಯಾಗಿ ಮೂಡಿಬಂತು. ಮುಂದೆ ತಪಸ್ಸಿಗೆ ಕುಳಿತ ಶಿವನ ಧ್ಯಾನವನ್ನು ಕೆಡಿಸಿದ ರತಿ-ಮನ್ಮಥರ ಶೃಂಗಾರ ನೃತ್ಯ - ಕುಪಿತ ಶಿವನ ಮೂರನೆಯ ಕಣ್ಣು ಮನ್ಮಥನನ್ನು ದಹಿಸಿದ ನಂತರ ಗಿರಿಜಾ ಕಲ್ಯಾಣದವರೆಗೂ ಸುಮನೋಹರ ದೃಶ್ಯಗಳಲ್ಲಿ ಕಥಾನಕ ಸುಗಮವಾಗಿ ಸಾಗಿತು. ಮುಂದೆ- ನೃತ್ಯರೂಪಕದ ಹೃದಯ ಭಾಗ ಗಣೇಶನ ಜನನ ವೃತ್ತಾಂತ ರಮ್ಯ ನೃತ್ಯಗಳ ಸಲಿಲದಿಂದ ಮನೋಹರವಾಗಿ ಸಾಗಿತು. ಪಾರ್ವತಿಯ ಮೈ ಕೊಳೆಯಿಂದ ಆಕಾರ-ಜೀವ ಪಡೆದ ಬಾಲಕ, ತಾಯಿಯ ಆಣತಿಯಂತೆ ಬಾಗಿಲು ಕಾಯುತ್ತ, ಶಿವನಿಗೆ ಪ್ರವೇಶ ನಿರಾಕರಿಸಿದಾಗ ತಲೆ ಕಳೆದುಕೊಳ್ಳುವ ಪ್ರಸಂಗ ಮತ್ತು ಮರಳಿ ಆನೆಯ ತಲೆಯನ್ನು ಪಡೆದು ಸುಖಾಂತ್ಯ ಕಾಣುವ ಪ್ರಕರಣ ಮುದ ನೀಡಿತು. ಮುಂದೆ ವಿನಾಯಕನ ಮಹತ್ವ-ವೈಶಿಷ್ಟ್ಯ ಕುರಿತ ಅನೇಕ ಸುಮಧುರ ಹಾಡು-ನೃತ್ಯಗಳ ಸಮ್ಮೇಳದ ನೃತ್ಯವೈಭವ ಕಣ್ಮನಕ್ಕೆ ರಸಾನುಭವ ಒದಗಿಸಿತು. ಗಜವದನನನ್ನು ಕುರಿತ ಅತ್ಯಂತ ಜನಪ್ರಿಯವಾದ ಅನೇಕ ಕೃತಿಗಳಿಗೆ ನರ್ತಕಿಯರು ಸುಂದರವಾಗಿ ನರ್ತಿಸಿದ್ದು ಕಣ್ಣಿಗೆ ಹಬ್ಬವಾಗಿತ್ತು ಅಷ್ಟೇ ಅಲ್ಲದೆ 'ಶ್ರೀ ಮಹಾ ಗಣಪತಿಂ ಭಜೆ ', 'ಗಜವದನ ಬೇಡುವೆ', 'ವಿಘ್ನ ರಾಜಂ ಭಜೆ' ಮುಂತಾದ ಅನೇಕ ಸುಂದರ ಕೃತಿಗಳಿಂದ ನೃತ್ಯಾರ್ಪಣೆಗೆ ಸಾಂಗತ್ಯ ನೀಡಿದ ಸುಶ್ರಾವ್ಯ ಸಂಗೀತ ಕಿವಿಗಳಿಗೆ ಇಂಪು-ತಂಪು ಎರೆಯಿತು. ಮನಸ್ಸಿಗೆ ಸುಶಾಂತಿ-ದೈವೀಕ ಅನುಭವವನ್ನು ಮುಟ್ಟಿಸಿದ ' ಚಿದ್ರೂಪ ದರ್ಶನಂ ' ಹೃದಯಸ್ಪರ್ಶಿ ನೃತ್ಯರೂಪಕವಾಗಿ ಹೊರ ಹೊಮ್ಮಿ ಎಲ್ಲಾರಸಿಕರ ಮೆಚ್ಚುಗೆಗೆ ಪಾತ್ರವಾಯಿತು. ವಿದುಷಿ ಫಣಿಮಾಲ ಅವರ ನೃತ್ಯ ಸಂಯೋಜನೆ- ಸನ್ನಿವೇಶಗಳ ಸೃಷ್ಟಿ ಕಲಾತ್ಮಕವಾಗಿತ್ತು. ಜೊತೆಗೆ ಯಜ್ಞ ಕುಂಡ, ಶಿವಲಿಂಗ ಇನ್ನಿತರ ಪರಿಕರಗಳ ಬಳಕೆ ನೃತ್ಯ ನಾಟಕಕ್ಕೆ ಪೂರಕವಾಗಿತು. ಅತ್ಯಂತ ಕಾಳಜಿಪೂರ್ಣ ನೃತ್ಯದ ಚಿತ್ರಕಥೆ ರಚನೆ ಮತ್ತು ಅದರ ಸುಂದರ ಅನುಷ್ಠಾನ, ನಿರೂಪಣೆ , ನೃತ್ಯ ರಸಮೇಳ ರಸಿಕರ ಮನಮುಟ್ಟಿತು. ಯಶಸ್ವಿಯಾಗಿ ಪ್ರದರ್ಶಿತವಾದ 'ಚಿದ್ರೂಪ ದರ್ಶನಂ' ನೆನಪಿನಲ್ಲಿ ಉಳಿಯುವಂತಿದ್ದು ಶ್ಲಾಘನೀಯ ಪ್ರಯತ್ನವಾಗಿತ್ತು.



# ಬಡವರಿಗೆ ಗ್ಯಾರಂಟಿಗಳ ಲಾಭ ದೊರೆಯಬೇಕು: ಖಂಡ್ರೆ

## ಬೀದರ್ ಜಿಲ್ಲೆಯಲ್ಲಿ ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ, ಅನ್ನಭಾಗ್ಯ, ಯುವನಿಧಿ ಯೋಜನೆಯಿಂದ ಜನರಿಗೆ ಉಪಯೋಗ

• ಉದಯವಾಹಿನಿ, ಬೀದರ್

ಬಡವರಿಗೆ ರಾಜ್ಯ ಸರ್ಕಾರದ 'ಗ್ಯಾರಂಟಿ' ಯೋಜನೆಗಳ ಲಾಭ ಸಿಗಬೇಕು. ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಬೇಕು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ಏರ್ಪಡಿಸಿದ್ದ ಜಿಲ್ಲಾ ಗ್ಯಾರಂಟಿ ಯೋಜನೆಗಳ ಮೊದಲ ಸಭೆ ನಡೆಸಿ ಮಾತನಾಡಿದ ಅವರು, 'ಗ್ಯಾರಂಟಿ ಯೋಜನೆ ಪ್ರಾಧಿಕಾರದ ಸದಸ್ಯರು ಕಾಲ- ಕಾಲಕ್ಕೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಭೆಗಳನ್ನು ನಡೆಸಿ ಗ್ಯಾರಂಟಿ ಯೋಜನೆಗಳ ಲಾಭವನ್ನು ಎಲ್ಲರಿಗೂ ತಲುಪುವ ಹಾಗೆ ನೋಡಿಕೊಳ್ಳಬೇಕು' ಎಂದು ತಿಳಿಸಿದರು.'ಗ್ರಾಮಗಳಿಗೆ ಭೇಟಿ ನೀಡಿ ಗ್ಯಾರಂಟಿ ಯೋಜನೆಗಳನ್ನು ಎಲ್ಲಾ ಜನರಿಗೆ ತಲುಪಿವೆಯೇ ಅಥವಾ ಇಲ್ಲವೇ ಎಂಬ ಮಾಹಿತಿಯನ್ನು ಪಡೆಯಬೇಕು. ಜಿಲ್ಲೆಯಲ್ಲಿ ಐದು ಗ್ಯಾರಂಟಿಗಳನ್ನು ಜಾರಿಗೆ ತರಲಾಗಿದೆ. ಕೆಲವು ಅರ್ಜಿಗಳು ಪೆಂಡಿಂಗ್ ಇದ್ದು, ಅವುಗಳನ್ನು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಸರಿಪಡಿಸಿ, ಅರ್ಹರೆಲ್ಲರಿಗೂ ಸರ್ಕಾರದ ಯೋಜನೆಗಳ ಲಾಭ ದೊರಕಿಸಿಕೊಡಬೇಕು' ಎಂದು ನಿರ್ದೇಶನ ನೀಡಿದರು. ಬೀದರ್ ಜಿಲ್ಲೆಯಲ್ಲಿ 'ಗೃಹ ಲಕ್ಷ್ಮಿ', ಗೃಹ ಜ್ಯೋತಿ, ಶಕ್ತಿ, ಅನ್ನಭಾಗ್ಯ ಹಾಗೂ 'ಯುವನಿಧಿ' ಯೋಜನೆಯಿಂದ ಈಗಾಗಲೇ ಸಾವಿರಾರು ಜನರಿಗೆ ಉಪಯೋಗವಾಗುತ್ತಿದೆ. ಅರ್ಹರಾದವರು ಯಾರು ಈ ಯೋಜನೆಗಳಿಂದ ಹೊರಗುಳಿದಿದ್ದಾರೆ. ಅವರಿಗೆ ಎಲ್ಲಾ ರೀತಿಯ ನೆರವು ನೀಡಿ ಯೋಜನೆಯ ಫಲ ಸಿಗುವಂತೆ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. 'ಗೃಹ ಜ್ಯೋತಿ' ಯೋಜನೆ ಅಡಿ ಕೆಲವು ನಿರ್ಗತಿಕರಿಗೆ ಅರ್ಜಿಗಳನ್ನು ಹಾಕಲು ಬರುವುದಿಲ್ಲ. ಅಂತಹವರಿಗೆ ವಿದ್ಯುತ್ ಸಂಪರ್ಕ ಕೊಡುವ ಕೆಲಸ ಆಗಬೇಕು.

ಯುವ ನಿಧಿ ಯೋಜನೆಗೆ ಹೆಚ್ಚಿನ ಪ್ರಚಾರ ನೀಡಬೇಕು. ಅನ್ನ ಭಾಗ್ಯ ಯೋಜನೆಯ ಸಮೀಕ್ಷೆಯನ್ನು ಮಾಡಿ ಅದರಲ್ಲಿ ಬೋಗಸ್ ಇರುವವರ ಹೆಸರು ತೆಗೆದು ಹಾಕಿ ನಿಜವಾದ ಫಲಾನುಭವಿಗಳಿಗೆ ಲಾಭ ಸಿಗುವಂತಾಗಬೇಕು' ಎಂದು ತಿಳಿಸಿದರು.ಬೀದರ್ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಮೃತರಾವ್ ಚಿಮಕೋಡೆ ಮಾತನಾಡಿ, ಗ್ಯಾರಂಟಿ ಯೋಜನೆಗಳನ್ನು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲು ಜವಾಬ್ದಾರಿ ನೀಡಿದ್ದು, ಅವುಗಳನ್ನು ಜನರಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಮೇಲಿಂದ ಮೇಲೆ ಸಮಿತಿ ಸಭೆ ನಡೆಸಿ, ಯೋಜನೆಗಳ ಅನುಷ್ಠಾನಕ್ಕೆ ಕೆಲಸ ಮಾಡಲಿದೆ' ಎಂದು ತಿಳಿಸಿದರು.

ಪೌರಾಡಳಿತ ಸಚಿವ ರಹೀಂ ಖಾನ್, ಜಿಲ್ಲಾಧಿಕಾರಿ ಗೋವಿಂದ ರೆಡ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ ಎಸ್.ಎಲ್., ಬೀದರ್ ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ ವಾನತಿ ಎಂ.ಎಂ., ಹೆಚ್ಚುವರಿ ಜಿಲ್ಲಾಧಿಕಾರಿ ಶಿವಕುಮಾರ ಶೀಲವಂತ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕಿ ಸುರೇಖಾ, ಮಹಿಳಾ, ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಪ್ರಭಾಕರ್ ವಿವಿಧ ಇಲಾಖೆಗಳ ಗ್ಯಾರಂಟಿ ಯೋಜನೆಗಳ ಅಧಿಕಾರಿಗಳು ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಪ್ರಾಧಿಕಾರದ ಸದಸ್ಯರು ಹಾಜರಿದ್ದರು.



ಉದಯವಾಹಿನಿ ಚಿತ್ರ

**ಯುವನಿಧಿ ಮಾಹಿತಿ ಸಿಗುತ್ತಿಲ್ಲ**

### 'ಗೃಹಲಕ್ಷ್ಮಿ' ಸಹಾಯಧನ ಕಡಿತವಿಲ್ಲ

'ಗೃಹಲಕ್ಷ್ಮಿ' ಯೋಜನೆಯ ಫಲಾನುಭವಿಗಳಿಗೆ ಮಾಸಿಕವಾಗಿ ಸಿಗುವ ಸಹಾಯ ಧನವನ್ನು ಯಾವುದೇ ಬ್ಯಾಂಕ್‌ಗಳು ಕಡಿತಗೊಳಿಸುವಂತಿಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು. 'ಒಂದುವೇಳೆ ಯಾವುದೇ ಮಹಿಳೆ ಬ್ಯಾಂಕಿನಲ್ಲಿ ಸಾಲ ಪಡೆದುಕೊಂಡರೆ ಅವರಿಗೆ ಬರುವ ಗೃಹಲಕ್ಷ್ಮಿ ಸಹಾಯಧನದಿಂದ ಅದನ್ನು ಕಡಿತಗೊಳಿಸುವಂತಿಲ್ಲ. ಅವರ ಗಮನಕ್ಕೆ ತಂದು ಅವರ ಒಪ್ಪಿಗೆ ಪಡೆದು ಕಡಿತಗೊಳಿಸಬಹುದು. ಅವರಿಗೆ ಗೊತ್ತಿಲ್ಲದೆ ಮಾಡಿದರೆ ತಪ್ಪು. ಸರ್ಕಾರದ ಆದೇಶ ಇದೆ. ಯಾರೂ ಮೀರುವಂತಿಲ್ಲ' ಎಂದರು.

> ಗ್ಯಾರಂಟಿ ಅನುಷ್ಠಾನ ಸಮಿತಿಯ ಮೊದಲ ಸಭೆಯಲ್ಲಿಯೇ ಕೆಲ ಸದಸ್ಯರು ಭತ್ಯೆ ಪ್ರಯಾಣಕ್ಕೆ ವಾಹನ ಸೌಲಭ್ಯ ಸಭೆ ನಡೆಸಲು ಕಚೇರಿ ವ್ಯವಸ್ಥೆ ಮಾಡಿಕೊಡಬೇಕು ಎಂದು ಆಗ್ರಹಿಸಿದರು. ಜಿಲ್ಲಾ ಕೇಂದ್ರದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಹಾಗೂ ತಾಲ್ಲೂಕು ಕೇಂದ್ರದಲ್ಲಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸಮಿತಿಯಲ್ಲಿರುತ್ತಾರೆ. ಅವರ ನೇತೃತ್ವದಲ್ಲಿ ಸಭೆ ನಡೆಸಬೇಕು. ಅವರೇ ಜಾಗದ ವ್ಯವಸ್ಥೆ ಮಾಡುತ್ತಾರೆ. ಭತ್ಯೆಗೆ ಸಂಬಂಧಿಸಿದಂತೆ ಸರ್ಕಾರ ನಿರ್ಧಾರ ತೆಗೆದುಕೊಳ್ಳಲಿದೆ
>
> -ಈಶ್ವರ ಬಿ. ಖಂಡ್ರೆ, ಜಿಲ್ಲಾ ಉಸ್ತುವಾರಿ ಸಚಿವ

# ಹೊಸ ಪೀಳಿಗೆ ಪೊಲೀಸ್ ಸಿಬ್ಬಂದಿಗೆ ಬಲವಂತ ರೆಡ್ಡಿ ಸೇವೆ ಮಾದರಿ

• ಉದಯವಾಹಿನಿ, ಚಿತ್ತಾಪುರ

ಇಂದಿನ ದಿನದಲ್ಲಿ ಪೊಲೀಸ್ ಇಲಾಖೆಗೆ ಸೇರುವ ಯುವಕರಿಗೆ ಬಲವಂತರಡ್ಡಿ ಸೇವೆ ಮಾದರಿಯಾಗಿದೆ ಎಂದು ಡಿವೈಎಸ್‌ಪಿ ಶಂಕರಗೌಡ ಪಾಟೀಲ್ ಹೇಳಿದರು. ಅವರು ಪಟ್ಟಣ ಕಿಂಗ್ ಪ್ಯಾಲೇಸ್‌ನಲ್ಲಿ ಪೊಲೀಸ್ ಇಲಾಖೆ ವತಿಯಿಂದ ಹಮ್ಮಿಕೊಂಡ ಎ.ಎಸ್.ಐ,ಬಲವಂತರಡ್ಡಿ ಸೇವಾ ನಿವೃತ್ತಿ ಸಮಾರಂಭದ ಉದ್ಘಾಟಿಸಿ ಮಾತನಾಡಿ ಬಲವಂತರಡ್ಡಿ ಅವರು ವಹಿಸಿದ ಕೆಲಸವನು ನಿಷ್ಠೆಯಿಂದ ಮಾಡಿ ಮೇಲಾಧಿಕಾರಿಗಳ ಪ್ರೀತಿಗೆ ಪಾತ್ರರಾಗಿದ್ದರು.

ಇವರು ನಿಖರ ಮಾಹಿತಿ ಕಲೆ ಹಾಕಿ ಅಪರಾದಿಗಳನ್ನು ಹಿಡಿಯುವಲ್ಲಿ ನಿಪುಣರಾಗಿದ್ದರು. ಇದಕ್ಕೆ ಉದಾಹರಣೆ ಎಂದರೆ ಕುಖ್ಯಾತ ಅಪರಾಧಿ ಶ್ರೀನಿವಾಸ ಅಲಿಯಸ್ ಸಿನ್ನಾ, ಸುಗಂದಿ ಅನೇಕ ಪ್ರಕರಣಗಳಲ್ಲಿ ಪೊಲೀಸ್ ಇಲಾಖೆಗೆ ತಲೆನೋವು ಆಗಿದ್ದನು ಇದನ್ನು ಮನಗಂಡು ಮೇಲಾಧಿಗಳ ಸಹಾಯ ಸಹಕಾರ ಪಡೆದು ಅಪರಾದಿಯನ್ನು ಸಿನಿಮೀಯ ರೀತಿಯಲ್ಲಿ ಬಂದಿಸಿದರು.



ಉದಯವಾಹಿನಿ ಚಿತ್ರ

ಸಿಪಿಐ ಚಂದ್ರಶೇಖರ ತಿಗಡಿ, ನಟರಾಜ ಲಾಡೆ, ಜಗದೇವಪ್ಪ ಪಾಳಾ, ನ್ಯಾಯಾವಾದಿ ಚಂದ್ರಸೇಖರ ಅವಂಟಿ, ಮುಕ್ತಾರ ಪಟೇಲ್, ಲಕ್ಷ್ಮಿಕಾಂತ ಸಾಲಿ, ಬಾಬು ಕಾಶಿ, ನಾಗರಾಜ ಭಂಕಲಗಿ ಮಾತನಾಡಿದರು.

ಗೃಹರಕ್ಷಕ ದಳದ ಮುಖ್ಯಸ್ಥ ಮೆಹಮೂದ್ ಪುಲಾರೆ, ಮುಖಂಡರಾದ ಶಿವಕಾಂತ ಬೆಣ್ಣೂರಕರ್, ಮಲ್ಲಿಕಾರ್ಜುನ ಕಾಳಗಿ, ವಿಷ್ಣು ಲೋಮಟೆ, ಬಾಲಾಜಿ ಬುರುಬರೆ, ಆನಂದ ಪಾಟೀಲ್, ನಾಡಗೌಡ ಸನ್ನತಿ, ಮಲ್ಲಿಕಾರ್ಜುನ ಬೆಣ್ಣೂರಕರ್, ಶಿವರಾಜ ಗುರುಮಿಠಕಲ್,ಆನಂದ ದೊಡ್ಮನಿ, ಇದ್ದರು. ಕಾಳಗಿ, ಶಹಾಬಾದ, ವಾಡಿ ಮಾಡಬೂಳ ಪೊಲೀಸ್ ಠಾಣೆಯ ಅಧಿಕಾರಿಗಳು ಸಿಬ್ಬಂದಿಗಳು ಬಾಗವಹಿಸಿದರು. ಪಿಎಸೈ ಶ್ರೀಶೈಲ ಅಂಬಾಟೆ ಸ್ವಾಗತಿಸಿದರು. ನರಸಪ್ಪ ಚಿನ್ನಕಟ್ಟಿ ನಿರೂಪಿಸಿದರು. ನಾಗೇಂದ್ರಪ್ಪ ವಂದಿಸಿದರು. ಬಲವಂತರಡ್ಡಿ ದಂಪತಿಗೆ ಡಿವಾಯ್.ಎಸ್ಪಿ ಶಂಕರಗೌಡ ಪಾಟೀಲ್ ಸನ್ಮಾನಿಸಿದರು. ಸಿಪಿಐ ಚಂದ್ರಶೇಖರ ತಿಗಡಿ, ಜಗದೇವಪ್ಪ ಪಾಳಾ, ನಟರಾಜ ಲಾಡೆ, ಚಂದ್ರಾಮಪ್ಪ, ಪಿಎಸೈ ಶ್ರೀಶೈಲ ಅಂಬಾಟೆ ಇದ್ದರು.

> ಹೆಸರೆ ಸೂಚಿಸುವಂತೆ ಬಲವಂತರಡ್ಡಿ ಪೊಲೀಸ್ ಇಲಾಖೆಗೆ ಬಲ ತಂದುಕೊಟ್ಟಿದ್ದರು. ಅವರು ಉತ್ತಮ ಯೋಜನೆ ರೂಪಿಸುತ್ತಿದ್ದರು, ಕೆಲಸದ ಜೊತೆಗೆ ಮಾನವೀಯತೆ ಗುಣ ಹೊಂದಿದರು. ಜಾತ್ರೆ ಉತ್ಸವಗಳ ಬಂದೋಬಸ್ತೆನಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು
>
> -ಶಂಕರಗೌಡ ಪಾಟೀಲ್, ಡಿವೈಎಸ್‌ಪಿ

# ಖಾಸಗಿ ಕಂಪನಿಯಿಂದ ಬಾರದ ಹಣ

## ನಾಲ್ವರು ಮೆಣಸಿನಕಾಯಿ ಬೆಳೆಗಾರರು ಆತ್ಮಹತ್ಯೆ ಯತ್ನ

• ಉದಯವಾಹಿನಿ, ಬಳ್ಳಾರಿ

ತಮ್ಮ ಉತ್ಪನ್ನಗಳನ್ನು ಖರೀದಿಸಿದ ಖಾಸಗಿ ಕಂಪನಿಯು ಕಳೆದ ಒಂದೂವರೆ ವರ್ಷಗಳಿಂದ ಹಣವನ್ನು ಪಾವತಿಸದ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಕುರುಗೋಡು ತಾಲ್ಲೂಕಿನ ಸೋಮಸಮುದ್ರ ಗ್ರಾಮದ ನಾಲ್ವರು ಮೆಣಸಿನಕಾಯಿ ರೈತರು ಆತ್ಮಹತ್ಯೆಗೆ ಯತ್ನಿಸಿದ್ದಾರೆ.ರುದ್ರೇಶ್ (55), ಹನುಮಂತ್ (40), ಶೇಖರ್ (45) ಮತ್ತು ಕುನೇಶ್ (50) ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಹಣ ಪಾವತಿ ಮಾಡಲು ವಿಳಂಬ ಮಾಡಿದ್ದನ್ನು ವಿರೋಧಿಸಿ ಇತರ ರೈತರೊಂದಿಗೆ ಪ್ರತಿಭಟನೆ ನಡೆಸುತ್ತಿದ್ದ ವೇಳೆ ವಿಷ ಸೇವಿಸಿದ್ದಾರೆ. ಅವರನ್ನು ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ದಾಖಲಿಸಲಾಗಿದ್ದು, ಅವರ ಸ್ಥಿತಿ ಸ್ಥಿರವಾಗಿದೆ. ಬೆಂಗಳೂರು ಮೂಲದ ಅಗ್ರಿಗ್ರೀಡ್ ಪ್ರೈವೇಟ್ ಲಿಮಿಟೆಡ್ 100 ರೈತರಿಂದ 1.9 ಕೋಟಿ ರೂಪಾಯಿ ಮೌಲ್ಯದ ಮೆಣಸಿನಕಾಯಿ ಖರೀದಿಸಿದೆ ಎಂದು ರೈತರು ತಿಳಿಸಿದ್ದಾರೆ. 54 ರೈತರ ಬಿಲ್ ಕ್ಲಿಯರ್ ಆಗಿದ್ದು, ಉಳಿದ 46 ರೈತರಿಗೆ ಇನ್ನೂ ಹಣ ಬಂದಿಲ್ಲ. ಬಿಲ್ ಬಾಕಿ ಉಳಿದಿರುವ ರೈತರಲ್ಲಿ ಒಬ್ಬರಾದ ಹನುಮಂತಪ್ಪ ವಡ್ಡರ ಮಾತನಾಡಿ, 'ಕಂಪನಿಯಲ್ಲಿ ಜಿಲ್ಲೆಯ ಹೆಸರಾಂತ ವ್ಯಕ್ತಿಗಳು ಷೇರುದಾರರಾಗಿದ್ದಾರೆ. ಅವರನ್ನು ನಂಬಿ 220 ಟನ್ ಮೆಣಸಿನಕಾಯಿಯನ್ನು ಕಂಪನಿಗೆ ಮಾರಾಟ ಮಾಡಿದೆವು. ಸಾಮಾನ್ಯವಾಗಿ ಬ್ಯಾಡಗಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದು, ಖಾಸಗಿ ಕಂಪನಿಗೆ ನೀಡಿದ್ದು ಇದೇ ಮೊದಲು. ಎಂದು ಹೇಳಿದ್ದಾರೆ.

**ರಾಜ್ಯದ 17.09 ಲಕ್ಷ ಸಣ್ಣ ರೈತ ಕುಟುಂಬಗಳಿಗೆ ಪರಿಹಾರ ನೀಡಲು ಸರ್ಕಾರ ನಿರ್ಧಾರ:** ಅಲ್ಲದೆ, ಅವರು ಉತ್ತಮ ಬೆಲೆಯನ್ನು ನೀಡಿದರು. ಎರಡು ತಿಂಗಳ ಹಿಂದೆ, ಕಂಪನಿಗೆ ನಮ್ಮನ್ನು ಪರಿಚಯಿಸಿದ ಮಧ್ಯವರ್ತಿಯನ್ನು ನಾವು ಸಂಪರ್ಕಿಸಿದ್ದೇವೆ. ಅವರು ನಮಗೆ ಚೆಕ್ ನೀಡಿದರು, ಆದರೆ ಅವರ ಖಾತೆಯಲ್ಲಿ ಬಾಕಿ ಇರಲಿಲ್ಲ.

ಬಳ್ಳಾರಿ ಜಿಲ್ಲಾಧಿಕಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿಗಳು ಆದಷ್ಟು ಬೇಗ ಸಮಸ್ಯೆಯನ್ನು ಬಗೆಹರಿಸುವಂತೆ ಮನವಿ ಮಾಡಿದ್ದಾರೆ. ಕಲ್ಯಾಣ-ಕರ್ನಾಟಕದಲ್ಲಿ ಕುರುಗೋಡು ತಾಲ್ಲೂಕು ಮೆಣಸಿನ ಕಾಯಿ ಉತ್ಪಾದನೆಯಲ್ಲಿ ಅಗ್ರಸ್ಥಾನದಲ್ಲಿದೆ.

# ಮೂರು ಮಸೂದೆಗಳ ರದ್ಧತ್ತಿಗೆ ಪ್ರಗತಿಪರ ಸಂಘಟನೆಗಳ ಒತ್ತಾಯ

• ಉದಯವಾಹಿನಿ, ಸಿಂಧನೂರು

ಕೇಂದ್ರ ಸರ್ಕಾರ ಅಪರಾಧ ನ್ಯಾಯಕ್ಕೆ ಸಂಬಂಧಿಸಿ ಐಪಿಸಿ. ಸಿಆರ್ ಪಿಸಿ ಸಾಕ್ಷ್ಯಾಧಾರ ಬದಲಿಸಿ ಅವುಗಳ ಸ್ಥಾನದಲ್ಲಿ ಭಾರತೀಯ ನ್ಯಾಯ ಸಂಹಿತೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಮಸೂದೆಗಳನ್ನು. ಜುಲೈ 1ರಂದು ಜಾರಿಗೆ ತರುತ್ತಿದೆ. ಭಾರತ ಯಾರ ಬೇಡಿಕೆಯೂ ಆಗಿರದ ಈ ಕಾನೂನುಗಳಿಂದ ಅಧಿಕಾರಸ್ಥ ಕೆಲವರಿಗೆ ಮಾತ್ರ ಸುರಕ್ಷತೆ ಒದಗಿಸಿ. ಸಾಮಾನ್ಯ ನಾಗರಿಕರು ಸಂತ್ರಸ್ಥರು ಮತ್ತು ಶೋಷಿತರು ನ್ಯಾಯದಿಂದ ವಂಚಿತರಾಗಲಿದ್ದಾರೆ.

ಈ ಕ್ರಿಮಿನಲ್ ಕಾಯ್ದೆ ಗಳು ದೇಶದಲ್ಲಿ ಅರಾಜಕತೆಯನ್ನು ಸೃಷ್ಟಿ ಮಾಡಲಿದ್ದು. ಸರ್ಕಾರ ತಕ್ಷಣ ಅವುಗಳನ್ನು ವಾಪಸ್ ಪಡೆಯಬೇಕೆಂದು ಸಿಂಧನೂರು ಪ್ರಗತಿಪರ ಸಂಘಟನೆಗಳ ಒಕ್ಕೂಟವು ಗಾಂಧಿ ವೃತ್ತದಲ್ಲಿ ಕಪ್ಪು ಬಟ್ಟೆ ಧರಿಸಿ ಒತ್ತಾಯಿಸುತ್ತದೆ.

ಮಸೂದೆಗಳ ಜಾರಿಗೊಳಿಸುವಲ್ಲಿ ಪೋಲೀಸರಿಗೆ ಅಪಾರ ಅಧಿಕಾರವನ್ನು ನೀಡಲಾಗಿದ್ದು 3 ರಿಂದ 7 ವರ್ಷಗಳು ಶಿಕ್ಷಾರ್ಹ ಅಪರಾಧಗಳಲ್ಲಿ ಎಫ್‌ಐಆರ್ ದಾಖಲಿಸಿದೇ 14 ದಿನ ಗಳುವರಿಗೆ ಪ್ರಾಥಮಿಕ ತನಿಖೆಯನ್ನು ನಡೆಸಿದ ಬಳಿಕ ದಾಖಲಿಸಿಲು ಅವಕಾಶ ನೀಡಲಾಗಿದೆ.

ಇದರಿಂದ ಅಶಕ್ತರಿಗೆ ಶೋಷಿತರಿಗೆ ಕಾನೂನು ರಕ್ಷಣೆ ಮತ್ತು ನ್ಯಾಯ ಮರೀಚಿಕೆಯಾಗಲಿದೆ. ನೂತನ ಮಸೂದೆಯಲ್ಲಿ ದೇಶದ್ರೋಹ ಕಾನೂನು ತೆಗೆದು ಹಾಕಲಾಗಿದೆ ಎಂದು ಗೃಹ ಸಚಿವರು ಹೇಳಿದ್ದಾರೆ.




ಉದಯವಾಹಿನಿ ಚಿತ್ರ

**ಶೋಷಿತರು ನ್ಯಾಯದಿಂದ ವಂಚಿತ**

> ಸರಕಾರದ ಜನವಿರೋಧಿ ನೀತಿಗಳನ್ನು ಪ್ರಶ್ನಿಸಿದ ಅಂತ ರಾಷ್ಟ್ರೀಯ ಖ್ಯಾತ ಲೇಖಕಿ ಸಾಮಾಜಿಕ ಕಾರ್ಯಕರ್ತೆ ಆರುಂಧತಿ ರಾಯ್ ಮತ್ತು ಶಿಕ್ಷಣ ತಜ್ಞ ಶೌಕತ್ ಹುಸೇನ್ ಅವರು ಮೇಲೆ 14 ವರ್ಷ ದ ಹಿಂದಿನ ಯಾವುದೇ ಪ್ರಕರಣದ ನೆಪಮಾಡಿ ಕೊಂಡು ದೇಶದ್ರೋಹಿದ ಕಾನೂನು ಯುಎಪಿಎ ಕಾಯ್ದೆ ಕಲಂ 45(1) ಅಡಿಯಲ್ಲಿ ಕೇಸ್ ದಾಖಲಿಸಿ ಅವರು ದ್ವನಿ ಅಡಗಿಸಲು ಮುಂದಾಗಿ ಸೇಡಿನ ರಾಜಕಾರಣ ನಡೆಸುತ್ತಿದೆ ಎಂದು ಹೇಳಿದರು.

ಎಂದು ಆಗ್ರಹಿಸಿದರು. ಜನಸಾಮಾನ್ಯರು ಹಕ್ಕೊತ್ತಾಯದಗಳಿಗೆ ಧ್ವನಿಯೆತ್ತುವವರನ್ನು ಅಪರಾಧಕ್ಕೊಳಪಡಿಸವ ಅಪಾಯ ವಿರುತ್ತದೆ. ಇದು ಸಂವಿಧಾನದ ಕಲಂ 14 ಮತ್ತು 19ರ ಸ್ಪಷ್ಟ ಉಲ್ಲಂಘನೆಯಾಗಿದೆ. ಈ ಬೆಳವಣಿಗೆಗಳು ಸಮಾಜವನ್ನು ಬಲಾಢ್ಯರು ರಾಜಕಾರಣಿಗಳು ಹಾಗೂ ಪೋಲೀಸರು ಆಳುವ ಪರಿಸ್ಥಿತಿ ತಂದೊಡ್ಡಲಿದೆ ಎಂದು ಹೇಳಿದರು.

ಮಹಾರಾಷ್ಟ್ರದ ಭೀಮ್ ಕೊರೆಗಾವ್ ಪ್ರಕರಣಕ್ಕೆ ಸಂಬಂಧಿಸಿದಂತೆ ದುರುದ್ದೇಶ ಪೂರ್ವಕವಾಗಿ ಡಾ ಅಂಬೇಡ್ಕರ್ ಸಂಬಂಧಿ ಡಾ ಆನಂದ 16 ಜನ ಸಾಮಾಜಿಕ ಕಾರ್ಯಕರ್ತರು ವಕೀಲರು ಹಾಗೂ ಬುದ್ಧಿ ಜೀವಿಗಳನ್ನು ಬಂಧಿಸುವ ಮೂಲಕ ಕೇಂದ್ರ ಸರಕಾರ ಪ್ರಜಾಸತ್ತಾತ್ಮಕ ಧ್ವನಿಗಳು ಅಡಿಗೆಸುವ ಮೂಲಕ ದಬ್ಬಾಳಿಕೆಯನ್ನು ಜಗಜ್ಜಾಹೀರುಗೊಳಸದೆ. ಬಿಜೆಪಿ ಸರ್ಕಾರದ ಕಾನೂನು ದರ್ಬಕೆಯ ಕೃತ್ಯವನ್ನು ಒಕ್ಕೂಟವು ತೀವ್ರವಾಗಿ ಖಂಡಿಸುತ್ತದೆ ಉದ್ದೇಶಿತ ಕೇಸ್ ನ್ನು ವಾಪಸ್ ಪಡೆಯಬೇಕೆಂದು ಒತ್ತಾಯಿಸುತ್ತದೆ.

ಈ ಸಂದರ್ಭದಲ್ಲಿ. ಡಿ ಎಚ್ ಪೂಜಾರಿ.ಡಿ ಎಚ್ ಕಂಬಳಿ. ಚಂದ್ರಶೇಖರ್ ಗೊರೇಬಾಳ ನಾಗರಾಜ್ ಪೂಜಾರ ಬಿ ಎನ್ ಯರದಿಹಾಳ ರಮೇಶ್ ಪಾಟೀಲ್ ಬೇರಿಗೆ ಅಬ್ದುಲ್ ಸಮ್ಮದ್ ಚೌದ್ರಿ, ಸೇರಿದಂತೆ ಇತರರು ಉಪಸ್ಥಿತರಿದ್ದರು.

# ದುಬಾರಿ ಕಾರಿನ ಬೆಲೆಗೆ ಮಾರಾಟವಾದ ಎತ್ತು

• ಉದಯವಾಹಿನಿ, ವಿಜಯಪುರ

ರೈತನ ಮಿತ್ರ ಎತ್ತುಗಳು ಎಷ್ಟು ದರಕ್ಕೆ ಮಾರಾಟವಾಗುತ್ವೆ. ಅಬ್ಬಬ್ಬಾ ಅಂದ್ರೆ 1 ರಿಂದ 1.15 ಲಕ್ಷದ ವರೆಗೆ ಮಾರಾಟವಾಗ ಬಹುದು. ವಿಜಯಪುರ ಜಿಲ್ಲೆಯ ಒಂದೆ ಎತ್ತು ದುಬಾರಿ ಕಾರಿಗು ಅಧಿಕ ರೇಟಿಗೆ ಮಾರಾಟವಾಗಿ ದಾಖಲೆ ಬರೆದಿದೆ. ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲ್ಲೂಕಿನ ಬಬಲಾದಿ ಗ್ರಾಮದ ರಾಮನಗೌಡ ಪಾಟೀಲ್ ಎಂಬವರ ಎತ್ತು ಬರೋಬ್ಬರಿ 18 ಲಕ್ಷ 1 ಸಾವಿರ ರೂಪಾಯಿಗೆ ಮಾರಾಟವಾಗಿ ದಾಖಲೆ ಬರೆದಿದೆ. ಕಳೆದ ಕೆಲ ದಿನಗಳ ಹಿಂದೆ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಇಟ್ನಾಳ ಗ್ರಾಮದ ರೈತ ಸದಾಶಿವ ಡಾಂಗೆ 18 ಲಕ್ಷ ರೂಪಾಯಿಗೆ ಎತ್ತು ಖರೀದಿ ಮಾಡಿದ್ದಾರೆ. ಎತ್ತಿನ ಬಗ್ಗೆ ಮೊದಲೇ ತಿಳಿದಿದ್ದ ಸದಾಶಿವ ಡಾಂಗೆ ಹಠಕ್ಕೆ ಬಿದ್ದು 18 ಲಕ್ಷ 1 ಸಾವಿರ ರೂಪಾಯಿಗೆ ಎತ್ತು ಖರೀದಿ ಮಾಡಿದ್ದಾರೆ.

ಕಳೆದ ಮೂರು ವರ್ಷದ ಹಿಂದೆ ಸಿದ್ದನಗೌಡ 1 ಲಕ್ಷ 5ಸಾವಿರ ರೂಪಾಯಿಗೆ ವಿಜಯಪುರ ಜಿಲ್ಲೆಯ ಕೊರ್ತಿ ಕೋಲ್ಹಾರದಿಂದ ಖರೀದಿ ಮಾಡಿ ತಂದಿದ್ದರು. ಎತ್ತು ಖರೀದಿ ಮಾಡಿ ತಂದ ಮೂರೇ ವರ್ಷದಲ್ಲಿ ಎತ್ತು 18 ಲಕ್ಷಕ್ಕೆ ಮಾರಾಟವಾಗಿದೆ.



ಉದಯವಾಹಿನಿ ಚಿತ್ರ

18 ಲಕ್ಷಕ್ಕೆ ದಾಖಲೆ ದರಕ್ಕೆ ಸೇಲ್ ಆಗಿರೋ ಎತ್ತಿಗೆ ಬಬಲಾದಿಯ ಸಿದ್ದನಗೌಡ ಪಾಟೀಲ್ ಪ್ರೀತಿಯಿಂದ ಹಿಂದೂಸ್ತಾನ್ ಹೆಚ್.ಪಿ ಎಂದು ಹೆಸರಿಟ್ಟಿದ್ದರು. ಅಲ್ಲದೆ ಮನೆ ಮಗನಂತೆ ಎತ್ತನ್ನು ಸಾಕಿದ್ದರು. ವಿಶೇಷ ಅಂದರೆ, ಹಿಂದೂಸ್ತಾನ್ ಹೆಚ್.ಪಿ. ಎತ್ತು ಬಾಗಲಕೋಟೆ, ಯಾದಗಿರಿ, ಬೆಳಗಾವಿ, ವಿಜಯಪುರ ಸೇರಿದಂತೆ ನೆರೆಯ ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯ ಜತ್ತ ಸೇರಿದಂತೆ ಅನೇಕ ಕಡೆಗಳಲ್ಲಿ ನಡೆದ ತೆರೆಬಂಡೆ ಸ್ಪರ್ಧೆಯಲ್ಲಿ ಹಿಂದೂಸ್ತಾನ್ ಹೆಚ್ ಪಿ ಪಾಲ್ಗೊಂಡಿತ್ತು. ಈ ವರೆಗೆ ಮೂರು ಬೈಕ್, 40ಗ್ರಾಂ ಚಿನ್ನ, 2 ಬೆಳ್ಳಿ ಗಧೆ, 10 ಲಕ್ಷಕ್ಕು ಅಧಿಕ ಹಣವನ್ನ ಬಹುಮಾನ ರೂಪದಲ್ಲಿ ಗೆದ್ದು ತಂದಿದೆ. ಇದೀಗ ದೊಡ್ಡ ಮೊತ್ತಕ್ಕೆ ಎತ್ತು ಮಾರಾಟವಾಗಿದ್ದು, ಎಲ್ಲರು ಹುಬ್ಬೇರಿಸುವಂತೆ ಮಾಡಿದೆ.

# ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಜಿ.ಪಂ ಸಿಇಒ ಸೂಚನೆ

• ಉದಯವಾಹಿನಿ, ಚಿತ್ರದುರ್ಗ

2024-25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷಾ ಫಲಿತಾಂಶ ವೃದ್ಧಿಗೆ ಅಗತ್ಯ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್. ಜೆ.ಸೋಮಶೇಖರ್ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಶಿಕ್ಷಣ ಇಲಾಖೆ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

2022-23ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆ ಪ್ರಥಮ ಸ್ಥಾನ ಪಡೆದಿದ್ದು, 2023-24ನೇ ಸಾಲಿನಲ್ಲಿ 21ನೇ ಸ್ಥಾನಕ್ಕೆ ಕುಸಿದಿದ್ದು, ಈ ಫಲಿತಾಂಶ ಕುಸಿತಕ್ಕೆ ಕಾರಣವೇನು ಎಂದು ಪ್ರಶ್ನೆ ಮಾಡಿದ ಅವರು, 2024-25 ನೇ ಸಾಲಿನಲ್ಲಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲೇ ಶಾಲಾ ಹಂತ, ಹೋಬಳಿ ಹಂತ, ತಾಲ್ಲೂಕು ಹಂತ ಮತ್ತು ಜಿಲ್ಲಾ ಹಂತಗಳಲ್ಲಿ ಫಲಿತಾಂಶ ವೃದ್ಧಿಗಾಗಿ ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೆ.ತಿಮ್ಮಪ್ಪ. ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಸಿರುದ್ದೀನ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪಮನಿರ್ದೇಶಕ ಪುಟ್ಟಸ್ವಾಮಿ ಸೇರಿದಂತೆ ಜಿಲ್ಲೆಯ ಆರು ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

**ಎಸ್‌ಎಸ್‌ಎಲ್‌ಸಿ, ಪಿಯು ಫಲಿತಾಂಶ ವೃದ್ಧಿಗೆ ಅಗತ್ಯ ಕಾರ್ಯಕ್ರಮ ರೂಪಿಸಿ**

> ವಿದ್ಯಾರ್ಥಿಗಳಿಗೆ ಮನಮುಟ್ಟುವ ಹಾಗೆ ಮಾರ್ಗದರ್ಶನ ನೀಡಿ. ಅದರಲ್ಲೂ ಶಾಲಾ ಹಂತದಲ್ಲಿ ವಿಷಯವಾರು ಶಿಕ್ಷಕರ ಮೇಲ್ವಿಚಾರಣೆ ನಡೆಸಿ, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಪರೀಕ್ಷೆ ಫಲಿತಾಂಶ ಸುಧಾರಣೆಗೆ ಎಲ್ಲಾ ಅಧಿಕಾರಿಗಳು, ಶಿಕ್ಷಕರು ಅಗತ್ಯ ಕ್ರಮ ವಹಿಸಿ
>
> -ಎಸ್.ಜೆ.ಸೋಮಶೇಖರ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

# ದುರಸ್ತಿಯಾಗದ ಶುದ್ಧ ಕುಡಿಯುವ ನೀರು ಪೂರೈಕೆ ಘಟಕ

## ಅಧಿಕಾರಿಗಳ ನಿರ್ಲಕ್ಷ್ಯ, ಗುತ್ತಿಗೆದಾರರ ನಿರ್ವಹಣೆ ಕೊರತೆಯಿಂದಾಗಿ ಬಹುತೇಕ ಘಟಕಗಳು ತುಕ್ಕು ಹಿಡಿಯುತ್ತಿವೆ

• ಉದಯವಾಹಿನಿ, ಹಾವೇರಿ

ನಗರ, ಗ್ರಾಮೀಣ ಪ್ರದೇಶದ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸುವ ಉದ್ದೇಶದಿಂದ 'ಶುದ್ಧ ಕುಡಿಯುವ ನೀರು ಪೂರೈಕೆ ಘಟಕ' ಆರಂಭಿಸಲಾಗಿದ್ದು, ಅಧಿಕಾರಿಗಳ ನಿರ್ಲಕ್ಷ್ಯ, ಗುತ್ತಿಗೆದಾರರ ನಿರ್ವಹಣೆ ಕೊರತೆಯಿಂದಾಗಿ ಬಹುತೇಕ ಘಟಕಗಳು ತುಕ್ಕು ಹಿಡಿಯುತ್ತಿವೆ.

ಕಳೆದ ಬಾರಿ ಮಳೆಯ ಅಭಾವದಿಂದಾಗಿ ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಜಿಲ್ಲೆಯ ಹಲವೆಡೆ ಹಾಹಾಕಾರ ಉಂಟಾಗಿತ್ತು. ಕೊಳವೆ ಬಾವಿಗಳು ಸಂಪೂರ್ಣ ಬತ್ತಿದ್ದವು. ಕೊಳವೆ ಬಾವಿಗಳನ್ನೇ ನೆಚ್ಚಿಕೊಂಡು ನಿರ್ಮಿಸಿದ್ದ ಶುದ್ಧ ಕುಡಿಯುವ ನೀರು ಘಟಕಗಳೂ ಬಂದ್ ಆಗಿದ್ದವು. ಹಲವು ದಿನ ಬಾಗಿಲು ಮುಚ್ಚಿದ್ದರಿಂದ ಬಹುತೇಕ ಘಟಕಗಳಲ್ಲಿರುವ ಉಪಕರಣಗಳು ನಿಷ್ಕ್ರಿಯಗೊಂಡಿವೆ.

ಇದೀಗ ಮಳೆಗಾಲ ಶುರುವಾಗಿದ್ದು, ಜಿಲ್ಲೆಯ ಅಲ್ಲಲ್ಲಿ ಮಳೆ ಸುರಿಯುತ್ತಿದೆ. ಕೆಲವೆಡೆ ಕೊಳವೆ ಬಾವಿಗಳಲ್ಲಿ ನೀರು ಬರಲಾರಂಭಿಸಿದೆ. ಆದರೆ, ಶುದ್ಧ ಕುಡಿಯುವ ನೀರು ಪೂರೈಕೆ ಘಟಕಗಳು ಮಾತ್ರ ಆರಂಭವಾಗಿಲ್ಲ. ಉಪಕರಣಗಳ ದುರಸ್ತಿಗೂ ಅಧಿಕಾರಿಗಳಾಗಲಿ, ಗುತ್ತಿಗೆದಾರರಾಗಲಿ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಸಾರ್ವಜನಿಕರು ದೂರುತ್ತಿದ್ದಾರೆ.



ಉದಯವಾಹಿನಿ ಚಿತ್ರ

ಹಾವೇರಿ, ರಾಣೆಬೆನ್ನೂರು ಹಾಗೂ ಇತರೆ ನಗರ ಪ್ರದೇಶಗಳಲ್ಲಿ ನಗರಸಭೆ- ಪುರಸಭೆಗಳಿಂದ ಘಟಕ ಸ್ಥಾಪಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಇಲಾಖೆ ಹಾಗೂ ಇತರರ ಸಹಕಾರದಲ್ಲಿ ಘಟಕಗಳನ್ನು ನಿರ್ಮಿಸಲಾಗಿದ್ದು, ಬಹುತೇಕ ಘಟಕಗಳ ನಿರ್ವಹಣೆ ಜವಾಬ್ದಾರಿಯನ್ನು ಕೆಲ ಗುತ್ತಿಗೆದಾರರಿಗೆ ವಹಿಸಲಾಗಿದೆ.

ಘಟಕಗಳು ಆರಂಭವಾದ ದಿನದಿಂದಲೂ ಅಸಮರ್ಪಕ ನಿರ್ವಹಣೆ ಎದ್ದು ಕಾಣುತ್ತಿದೆ.

ಪದೇ ಪದೇ ಕೆಡುವ ಮೋಟರ್, ಹಾಳಾಗುವ ಫಿಲ್ಟರ್, ವಿದ್ಯುತ್ ಸರಬರಾಜಿನಲ್ಲಿ ತೊಂದರೆ, ಪೈಪ್‌ಲೈನ್‌ಗಳಲ್ಲಿ ದೋಷ ಸೇರಿದಂತೆ ಹಲವು ಸಮಸ್ಯೆಗಳು ಸಾಮಾನ್ಯವಾಗಿದ್ದವು. ಕೆಲ ದಿನ ಮಾತ್ರ ಬಂದ್ ಆಗುತ್ತಿದ್ದ ಘಟಕಗಳು, ಪುನಃ ಬಾಗಿಲು ತೆರೆಯುತ್ತಿದ್ದವು. ನೀರಿನ ಕೊರತೆಯಿಂದ ಬಂದಾಗಿರುವ ಘಟಕಗಳು, ಮಳೆಗಾಲ ಶುರುವಾಗಿ ಹಲವು ದಿನವಾದರೂ ಬಾಗಿಲು ತೆರೆಯದಿರುವುದು ಜಿಲ್ಲಾಡಳಿತ ವೈಫಲ್ಯಕ್ಕೆ ಹಿಡಿದ ಕೈಗನ್ನಡಿಯೆಂದು ಸಾರ್ವಜನಿಕರು ದೂರುತ್ತಿದ್ದಾರೆ.

**ಆರೋಗ್ಯ ಸಮಸ್ಯೆಗೆ ಆಹ್ವಾನ:** ಶುದ್ಧ ಕುಡಿಯುವ ನೀರು ದೊರೆಯದಿದ್ದರಿಂದ ಬಹುತೇಕ ಜನರು, ಲಭ್ಯವಿರುವ ಕೊಳವೆ ಬಾವಿಗಳು, ಇತರೆ ಮೂಲಗಳ ನೀರು ಕುಡಿಯುತ್ತಿದ್ದಾರೆ. ಇದರಿಂದಾಗಿ ವಾಂತಿ-ಬೇಧಿ ಹಾಗೂ ಇತರೆ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ತಡಸ ಬಳಿಯ ಮಮದಾಪುರದಲ್ಲಿ ಕುಡಿಯುವ ನೀರು ಘಟಕ ಬಂದ್ ಆಗಿ ಎರಡು ವರ್ಷವಾಗಿದೆ. ಇಲ್ಲಿಯ ಗ್ರಾಮಸ್ಥರು ಲಭ್ಯವಿರುವ ನೀರು ಕುಡಿಯುತ್ತಿದ್ದು, ನಾನಾ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಗ್ರಾಮದ ಶುದ್ಧ ಕುಡಿಯುವ ನೀರಿನ ಘಟಕ ಮರು ಆರಂಭಿಸಲು ಕೋರಿ ಗ್ರಾಮಸ್ಥರು ಹಲವು ಬಾರಿ ಮನವಿ ಸಲ್ಲಿಸಿದರೂ ಗ್ರಾಮ ಪಂಚಾಯಿತಿ ಅಧಿಕಾರಿಗಳು ಸ್ಪಂದಿಸಿಲ್ಲ. ಹಾವೇರಿ, ಹಾನಗಲ್, ಬ್ಯಾಡಗಿ, ಹಿರೇಕೆರೂರು, ರಾಣೆಬೆನ್ನೂರು, ಸವಣೂರು ಹಾಗೂ ಶಿಗ್ಗಾವಿ ತಾಲ್ಲೂಕಿನ ಬಹುತೇಕ ಆಸ್ಪತ್ರೆಗಳಲ್ಲಿ ರೋಗಿಗಳ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ.

ಇದರಲ್ಲಿ ಬಹುಪಾಲು ಮಂದಿ, ಕಲುಷಿತ ನೀರು ಸೇವನೆಯಿಂದ ಆರೋಗ್ಯ ಸಮಸ್ಯೆ ಎದುರಿಸುತ್ತಿರುವುದು ಗೊತ್ತಾಗುತ್ತಿದೆ. ಆದರೆ, ಈ ಬಗ್ಗೆ ಅಧಿಕಾರಿಗಳು

> ಚಕ್ಕಡಿ, ಬೈಕ್, ಕಾರುಗಳಲ್ಲಿ ಕಿ.ಮೀ.ಗಟ್ಟಲೇ ನಿತ್ಯವೂ ಹೋಗಿ ಬರುತ್ತಿರುವ ಜನ, ಸಕ್ರಿಯವಾಗಿರುವ ಘಟಕಗಳ ಎದುರು ಸರದಿಯಲ್ಲಿ ನಿಂತು ಶುದ್ಧ ಕುಡಿಯುವ ನೀರು ತುಂಬಿಸಿಕೊಂಡು ಬರುತ್ತಿದ್ದಾರೆ.'ಹಾನಗಲ್ ತಾಲ್ಲೂಕಿನ ಸೋಮಸಾಗರ ಗ್ರಾಮದ ಘಟಕ ಬಂದ್ ಆಗಿದೆ. ಗ್ರಾಮದಿಂದ 5 ಕಿ.ಮೀ ದೂರದಲ್ಲಿರುವ ಗುಡ್ಡದ ಮುತ್ತಳ್ಳಿ ಹಾಗೂ 7 ಕಿ.ಮೀ ದೂರದಲ್ಲಿರುವ ಚಿಕ್ಕಬಾಸೂರಿಗೆ ಹೋಗಿ ಶುದ್ಧ ನೀರು ತರುತ್ತಿದ್ದೇವೆ.
>
> -ಅರುಣ್, ಗ್ರಾಮಸ್ಥ

### ನೀರು ತರಲು ಓಡಾಟ

ಕುಡಿಯುವ ನೀರಿನಿಂದಲೇ ಹಲವು ಆರೋಗ್ಯ ಸಮಸ್ಯೆಗಳು ಬರುತ್ತವೆ' ಎಂಬುದನ್ನು ತಿಳಿದಿರುವ ಕೆಲ ಗ್ರಾಮಸ್ಥರು, ತಮ್ಮ ಊರಿನ ಘಟಕ ಕೆಟ್ಟಿದ್ದರಿಂದ ದೂರದ ಊರುಗಳಿಗೆ ಹೋಗಿ ನೀರು ತರುತ್ತಿದ್ದಾರೆ.

> ಆಸ್ಪತ್ರೆಗಳಿಗೆ ಬರುವ ಜನರನ್ನು ಹಾಗೂ ಅವರನ್ನು ಪರೀಕ್ಷಿಸುವ ವೈದ್ಯರಿಂದಲೂ ಜಿಲ್ಲಾಡಳಿತದ ಅಧಿಕಾರಿಗಳು ಮಾಹಿತಿ ಪಡೆಯುತ್ತಿಲ್ಲ. ಮಾಹಿತಿ ಪಡೆದರೆ, ಆರೋಗ್ಯ ಸಮಸ್ಯೆ ಎದುರಿಸುತ್ತಿರುವ ಜನರು ವಾಸವಿರುವ ಸ್ಥಳಕ್ಕೆ ಹೋಗಿ ಶುದ್ಧ ಕುಡಿಯುವ ನೀರು ಪೂರೈಸಲು ಅನುಕೂಲವಾಗುತ್ತದೆ
>
> -ರಾಕೇಶ, ವ್ಯಾಪಾರಿ

## ಮಿನಿ ನ್ಯೂಸ್

### ಸಸಿ ನೆಡುವ ಮೂಲಕ ವನಮಹೋತ್ಸವ ಕಾರ್ಯಕ್ರಮಕ್ಕೆ ಚಾಲನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ,ಚಿಂಚೋಳಿ

ತಾಲ್ಲೂಕಿನ ಕೊರವಿ ದೊಡ್ಡ ತಾಂಡಾದ ಕಾಳಿಕಾ ದೇವಿ ಮಠದ ಆಶ್ರಮದಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಪ್ರಾದೇಶಿಕ ವಲಯದ ಅರಣ್ಯ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ವನಮಹೋತ್ಸವ ಕಾರ್ಯಕ್ರಮಕ್ಕೆ 500ಸಸಿಗಳು ನೆಡುವುದರ ಮೂಲಕ ಕಾರ್ಯಕ್ರಮಕ್ಕೆ ಕಾಳಿಕಾದೇವಿ ಮಠದ ಪೀಠಾಧಿಪತಿ ಪರಮಪೂಜ್ಯ ವಿಠ್ಠಲ ಮಹಾರಾಜರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಸುಲೇಪೇಟ ಠಾಣೆಯ ಸಿಪಿಐ ರಾಘವೇಂದ್ರ ಎಸ್.ಎಚ್,ಪ್ರಾದೇಶಿಕ ವಲಯದ ಅರಣ್ಯ ಅಧಿಕಾರಿ ನಟರಾಜ ಚವ್ಹಾಣ, ಸುಲೇಪೇಟ ಜೆಸ್ಕಾಂ ಶಾಖಾ ಅಧಿಕಾರಿ ಮೋಹನ್ ರಾಠೋಡ್, ಪೊಲೀಸ್ ಸಿಬ್ಬಂದಿ ನಟರಾಜ ರಾಠೋಡ್, ರವಿರಾಜ ರಾಠೋಡ, ಯುವ ಕರ್ನಾಟಕ ವೇದಿಕೆ ತಾಲ್ಲೂಕಾಧ್ಯಕ್ಷ ಸಚಿನ್ ಚವ್ಹಾಣ, ಮೇಘನಾಥ ಜಾಧವ, ಶ್ರೀಕಾಂತ್ ಜಾಧವ, ಗುರುನಾಥ ರಾಠೋಡ, ವಿಕ್ರಂ ಚವ್ಹಾಣ ಅನೇಕರಿದ್ದರು.

### ಪಹಣಿಗೆ ಆಧಾರ್ ಲಿಂಕ್ ಮಾಡಿಸಿ

• ಉದಯವಾಹಿನಿ, ಚಿತ್ತಾಪುರ

ತಾಲ್ಲೂಕಿನ ಶೇ 68ರಷ್ಟು ರೈತರು ಮಾತ್ರ ಪಹಣಿಗೆ ಆಧಾರ್ ಲಿಂಕ್ ಮಾಡಿದ್ದಾರೆ. ಸರ್ಕಾರದ ವಿವಿಧ ಸೌಲಭ್ಯಕ್ಕಾಗಿ ಉಳಿದವರು ಆಧಾರ್ ಲಿಂಕ್ ಮಾಡಬೇಕು ಎಂದು ತಹಶೀಲ್ದಾರ್ ಅಮರೇಶ ಬಿರಾದಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಆಧಾರ್ ಲಿಂಕ್ ನಿಂದ ಪೌತಿ, ವಾರಸಾ ಖಾತೆಯ ವರ್ಗಾವಣೆಯಲ್ಲಿ ಆಗುವ ಅಕ್ರಮವನ್ನು ತಡೆಗಟ್ಟಬಹುದು. ಉಪ ನೋಂದಣಿ ಕಚೇರಿಯಲ್ಲಿ ತಮ್ಮ ಬದಲಿಗೆ ಬೇರೆಯವರು ಕೊಟ್ಟ ದಾಖಲೆ ಸೃಷ್ಟಿಸಿ ನೋಂದಣಿ ಮಾಡಿಸುವುದು ತಡೆಗಟ್ಟಬಹುದು. ಬ್ಯಾಂಕ್ ಮತ್ತು ಸರ್ಕಾರದ ಇತರೆ ಸೌಲಭ್ಯದ ವಿಳಂಬಕ್ಕೆ ಅವಕಾಶವಿರುವುದಿಲ್ಲ.

ಸರ್ಕಾರದ ಅಧಿಸೂಚನೆ ಪ್ರಕಾರ ಒಂದು ಕುಟುಂಬಕ್ಕೆ ಭೂ ಹಿಡುವಳಿ ಪರಿಮಿತಿ 64 ಎಕರೆ ಕೃಷಿ ಜಮೀನು ಬದಲಾಗಿ 105 ಎಕರೆ ವರೆಗೆ ಕೃಷಿ ಜಮೀನು ಹೊಂದಬಹುದು. ದೊಡ್ಡ ರೈತರು ಆತಂಕ ಪಡುವ ಅಗತ್ಯವಿಲ್ಲ. ಮುಂದಿನ ದಿನಗಳಲ್ಲಿ ಉಪ ನೋಂದಣಿ ಕಚೇರಿ, ಕಂದಾಯ ಇಲಾಖೆ ಕಚೇರಿಯ ತಂತ್ರಾಂಶವು ವಿಲೀನ ಮಾಡಲಾಗುತ್ತಿದೆ. ಇದರಿಂದ ನೋಂದಣಿ ಪ್ರಕ್ರಿಯೆ ಪಾರದರ್ಶಕವಾಗಿರುತ್ತದೆ ಎಂದು ತಿಳಿಸಿದ್ದಾರೆ. ಕಂದಾಯ ಇಲಾಖೆಯಿಂದ ಬೆಳೆ ನಷ್ಟ ಪರಿಹಾರ, ಬರಗಾಲ ಪರಿಹಾರ, ರೈತರ ಆತ್ಮಹತ್ಯೆ ಪರಿಹಾರ, ಹಾವು ಕಚ್ಚಿ ಮೃತಪಟ್ಟ ಪ್ರಕರಣಗಳಲ್ಲಿ ಪರಿಹಾರ ಮೊತ್ತ ನಿಯಮಾನುಸಾರ ಪಾವತಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದ್ದಾರೆ.

### ಮದುವೆ ಮೆರವಣಿಗೆಗೆ ರಾಮನ ಹಾಡು ಎರಡು ಕೋಮುಗಳ ನಡುವೆ ಹೊಡೆದಾಟ

• ಉದಯವಾಹಿನಿ, ಕಲಬುರಗಿ

ಯುವಕರ ತಂಡವೊಂದು ಸ್ನೇಹಿತನ ಮದುವೆ ಮೆರವಣಿಗೆ ವೇಳೆ ರಾಮ ಮಂದಿರ ಕುರಿತ ಡಿಜೆ ಹಾಡಿಗೆ ಡ್ಯಾನ್ಸ್ ಮಾಡಿದ್ದಕ್ಕೆ, ಇನ್ನೊಂದು ಕೋಮಿನ ಯುವಕರ ತಂಡ ಆಕ್ಷೇಪ ವ್ಯಕ್ತಪಡಿಸಿ ಹಲ್ಲೆ ಮಾಡಿದ ಘಟನೆ ಜಿಲ್ಲೆಯ ಇಟಗಾ ಗ್ರಾಮದಲ್ಲಿ ನಡೆದಿದೆ. ಘಟನೆ ಯಲ್ಲಿ ಭೀಮಾಶಂಕರ್ ಎಂಬ ಯುವಕನ ಮೇಲೆ ಅನ್ಯಕೋವಿನ ಯುವಕರ ಗುಂಪು ಮಾರಣಾಂತಿಕ ಹಲ್ಲೆ ನಡೆಸಿದೆ ಎಂಬ ಆರೋಪ ಕೇಳಿಬಂದಿದೆ. ಸೋಮವಾರ ರಾತ್ರಿ ಮದುವೆ ಮರವಣಿಗೆ ವೇಳೆ ಈ ಘಟನೆ ನಡೆದಿದ್ದು, ಇದೀಗ ಬೆಳಕಿಗೆ ಬಂದಿದೆ. ಇನ್ನು ಗಾಯಾಳು ಯುವಕನನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಕುರಿತು ಗುಲ್ಬರ್ಗಾ ವಿ.ವಿ.ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಹಲ್ಲೆ ನಡೆಸಿದ್ದ ಆರೋಪಿಗಳ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

### ಆಸ್ತಿಗಾಗಿ ಮಾಟಮಂತ್ರ: ಠಾಣೆ ಮೆಟ್ಟಿಲೇರಿದ ವಿಜಯ ಪುತ್ರಿ

• ಉದಯವಾಹಿನಿ, ಬೆಳಗಾವಿ

ಆಸ್ತಿಗಾಗಿ ಮಾಟ ಮಂತ್ರ ಮಾಡಿದ್ದಾರೆ ಎಂದು ಆರೋಪಿಸಿ ಖ್ಯಾತ ಉದ್ಯಮಿ ಡಾ.ವಿಜಯ ಸಂಕೇಶ್ವರ ಪುತ್ರಿ, ಮಾಜಿ ಸಂಸದ ಎಸ್.ಬಿ ಸಿದ್ನಾಳರ ಸೊಸೆ ದೀಪಾ ಸಿದ್ನಾಳ ಪೊಲೀಸ್ ಮೆಟ್ಟಿಲೇರಿದ್ದಾರೆ. ಆಸ್ತಿಗಾಗಿ ಎಸ್.ಬಿ ಸಿದ್ನಾಳ ಕಿರಿಯ ಸೊಸೆ, ಖ್ಯಾತ ಉದ್ಯಮಿ ಡಾ.ವಿಜಯ ಸಂಕೇಶ್ವರ ಅವರ ದ್ವಿತೀಯ ಪುತ್ರಿ ದೀಪಾ ಅವರು ಬೆಳಗಾವಿ ನಗರದ ಕ್ಯಾಂಪ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಕ್ಯಾಂಪ್ ಪೊಲೀಸ್ ಠಾಣೆಯಲ್ಲಿ ದೀಪಾ ಸಿದ್ನಾಳ ಅವರು ಬಿಎನ್‌ಎಸ್1860, ಸೆಕ್ಷನ್ 120ಬಿ, 506, 307, ಮಾಟ ಮಂತ್ರ ಕಾಯ್ದೆ 2007 ಅಡಿಯಲ್ಲಿ ದೂರು ಕೂಡ ದಾಖಲಿಸಿದ್ದಾರೆ.

ದೂರು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಇತ್ತೀಚಿಗೆ ಶಿವಕಾಂತ್ ಸಿದ್ನಾಳ್ ಸಾವನ್ನಪ್ಪಿದ್ದಾರೆ. ನನ್ನ ಪತಿ ಸಾವಿಗೂ ಮಾಟ, ಮಂತ್ರ ಕಾರಣವಿರಬಹುದೆಂಬ ಶಂಕೆ ವ್ಯಕ್ತಪಡಿಸಿದ್ದು, ಅವರ ಸಮಾಧಿ ಸುತ್ತಮುತ್ತ ಮಾಟಮಂತ್ರ ಮಾಡಿದ್ದಾರೆಂದು ದೂರಿನಲ್ಲಿ ಉಲ್ಲೇಖ ಮಾಡಿದ್ದಾರೆ.

### ಯಾರೂ ಇಲ್ಲದ ವೇಳೆ ನೇಣಿಗೆ ಶರಣಾದ ಯುವತಿ; ಕಾರಣ ನಿಗೂಢ

• ಉದಯವಾಹಿನಿ, ಭರಮಸಾಗರ

ಬಾಲಕಿಯೊಬ್ಬಳು ಮನೆಯಲ್ಲಿ ಯಾರು ಇಲ್ಲದ ವೇಳೆ ನಿಗೂಢವಾಗಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಸಮೀಪದ ಹಳವುದರ ಲಂಬಾಣಿ ಹಟ್ಟಿ ಗ್ರಾಮದ ಸಂಜನಾ (14) ಆತ್ಮಹತ್ಯೆ ಮಾಡಿಕೊಂಡ ಬಾಲಕಿ. ಗ್ರಾಮದ ಬೇಬಿಬಾಯಿ ಮತ್ತು ಪೊನ್ಯನಾಯ್ಕ್ ಎಂಬುವರ ಮಗಳಾದ ಸಂಜನಾ ಕರಿಯಮ್ಮನಹಟ್ಟಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಎಂಟನೇ ತರಗತಿ ವ್ಯಾಸಂಗ ಮಾಡುತ್ತಿದ್ದಳು. ಮನೆಯಲ್ಲಿ ಯಾರು ಇಲ್ಲದ ವೇಳೆ ಸೀರೆಯಿಂದ ನೇಣುಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾಳೆ. ಭರಮಸಾಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಸಿರಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಮೃತ ಬಾಲಕಿ ಶವದ ಮರಣೋತ್ತರ ಪರೀಕ್ಷೆ ನಡೆಸಿ ಪೋಷಕರಿಗೆ ನೀಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಯಾರಿಗೂ ಚಿಕಿತ್ಸೆ ನೀಡದೆ ನಕಲಿ ದಾಖಲೆ ಸೃಷ್ಟಿಸಿ ಮೋಸ

## ಚಿಕಿತ್ಸೆ ನೀಡದೆ ವಿಮೆ ಹಣ ಗುಳುಂ! ಭಾರತೀಯ ಮೂಲದ ಅಮೆರಿಕ ವೈದ್ಯೆಗೆ 10 ವರ್ಷ ಜೈಲು ಶಿಕ್ಷೆ ಸಾಧ್ಯತೆ

**ಅಮೆರಿಕ:** 51 ವರ್ಷ ವಯಸ್ಸಿನ ಭಾರತೀಯ ಮೂಲದ ಅಮೆರಿಕ ವೈದ್ಯೆ ಮೋನಾ ಘೋಷ್ ಇದೀಗ ಭಾರೀ ಸುದ್ದಿಯಲ್ಲಿದ್ದಾರೆ. ಚಿಕಾಗೋ ಪ್ರದೇಶದಲ್ಲಿ ನೆಲೆಸಿದ್ದ ಈ ವೈದ್ಯೆ ಇದೀಗ ಜೈಲು ಸೇರಿದ್ದು, ನ್ಯಾಯಾಲಯ ಈಕೆಯನ್ನ ದೋಷಿ ಎಂದು ಪರಿಗಣಿಸಿದೆ. ರೋಗಿಗಳಿಗೆ ಯಾವುದೇ ಚಿಕಿತ್ಸೆ ನೀಡದೆ ವಿಮೆ ಹಣವನ್ನು ಲಪಟಾಯಿಸಿದ ಪ್ರಕರಣದಲ್ಲಿ ಮೋನಾ ಘೋಷ್ ತಪ್ಪಿತಸ್ಥೆ ಎಂದು ಸಾಬೀತಾಗಿದೆ.



ಸ್ತ್ರೀ ರೋಗ ಹಾಗೂ ಪ್ರಸೂತಿ ತಜ್ಞೆಯಾಗಿರುವ ಮೋನಾ ಘೋಷ್, ತಮ್ಮದೇ ಆದ ಆಸ್ಪತ್ರೆಯನ್ನು ಅಮೆರಿಕದಲ್ಲಿ ಹೊಂದಿದ್ದಾರೆ. ಇವರು ಸರ್ಕಾರಿ ವಿಮೆ ಹಾಗೂ ಖಾಸಗಿ ವಿಮೆಯನ್ನು ದುರ್ಬಳಕೆ ಮಾಡಿ ಕೊಂಡು ಯಾರಿಗೂ ಚಿಕಿತ್ಸೆ ನೀಡದೆ ನಕಲಿ ದಾಖಲೆ ಸೃಷ್ಟಿಸಿ ಮೋಸ ಮಾಡುತ್ತಿದ್ದರು ಅನ್ನೋದು ದೃಢಪಟ್ಟಿದೆ. ಎರಡು ಪ್ರಕರಣಗಳಲ್ಲಿ ಆಕೆಯ ವಿರುದ್ಧದ ಆರೋಪ ಸಾಬೀತಾಗಿದೆ. ಅಮೆರಿಕದಲ್ಲಿ ಇತ್ತೀಚೆಗೆ ನಡೆದ ಆರೋಗ್ಯ ಸೇವಾ ವಲಯದ ಅಕ್ರಮಗಳಲ್ಲಿ ಇದು ಭಾರೀ ಗಮನ ಸೆಳೆದ ಪ್ರಕರಣವಾಗಿತ್ತು. ಈ ಪ್ರಕರಣ ಸಂಬಂಧ ನ್ಯಾಯಾಲಯ ಆರೋಪಿ ವೈದ್ಯೆ ಮೋನಾ ಘೋಷ್ ಅವರಿಗೆ ಸುಮಾರು 10 ವರ್ಷ ಕಾಲ ಜೈಲು ಶಿಕ್ಷೆ ವಿಧಿಸುವ ಸಾಧ್ಯತೆ ಇದೆ. ಈ ಪ್ರಕರಣ ಸಂಬಂಧ 2024ರ ಅಕ್ಟೋಬರ್ 22 ರಂದು ತೀರ್ಪು ಪ್ರಕಟವಾಗಲಿದ್ದು, ಅಮೆರಿಕದ ಜಿಲ್ಲಾ ನ್ಯಾಯಾಧೀಶ ಫ್ರಾಂಕ್ಲಿನ್ ಯು ವಲ್ದೇ ರಾಮಾ ಅವರು ತೀರ್ಪು ನೀಡಲಿದ್ದಾರೆ. ಶಿಕ್ಷೆಯ ಪ್ರಮಾಣವೂ ಅಂದೇ ಪ್ರಕಟ ಆಗಲಿದೆ. ಆರೋಪಿ ವೈದ್ಯೆ ಮೋನಾ ಘೋಷ್ ಅವರು ಸುಮಾರು 2.4 ಮಿಲಿಯನ್ ಡಾಲರ್ ಮೊತ್ತದ ವಿಮೆ ಹಣವನ್ನು ಯಾರಿಗೂ ಚಿಕಿತ್ಸೆ ನೀಡದೆ ವಿಮೆ ಕಂಪನಿಗಳಿಂದ ಪಡೆದುಕೊಂಡಿದ್ದರು. ಅಷ್ಟೂ ಹಣವನ್ನು ಮೋನಾ ಘೋಷ್ ಮರು ಪಾವತಿ ಮಾಡಬೇಕಿದೆ ಎಂದು ಸರ್ಕಾರಿ ಪರ ವಕೀಲರು ಆಗ್ರಹಿಸಿದ್ದಾರೆ.

**ಶಿಕ್ಷೆಯ ಪ್ರಮಾಣವೂ ಅಂದೇ ಪ್ರಕಟ**

ಇನ್ನು ವಿಚಾರಣೆ ವೇಳೆ ಮೋನಾ ಘೋಷ್ ಅವರು ತಾವು 1.5 ಮಿಲಿಯನ್ ಡಾಲರ್ ಮೊತ್ತದ ಹಣವನ್ನು ವಾಪಸ್ ನೀಡುತ್ತೇನೆ ಎಂದು ನ್ಯಾಯಾಲಯಕ್ಕೆ ಹೇಳಿದ್ದಾರೆ. ಆದರೆ ಈ ಕುರಿತಾಗಿ ನ್ಯಾಯಾಲಯ ಇನ್ನೂ ಯಾವುದೇ ತೀರ್ಮಾನ ಕೈಗೊಂಡಿಲ್ಲ. ವೈದ್ಯೆ ಮೋನಾ ಘೋಷ್ ಅವರು ಜೈಲು ಶಿಕ್ಷೆ ಜೊತೆಯಲ್ಲೇ ಎಷ್ಟು ಹಣವನ್ನು ದಂಡದ ರೂಪದಲ್ಲಿ ಕಟ್ಟಬೇಕು ಎಂದು ನ್ಯಾಯಾಲಯ ತೀರ್ಮಾನ ಮಾಡಲಿದೆ. 2018 ರಿಂದ 2022ರವರೆಗೆ ವೈದ್ಯೆ ಮೋನಾ ಘೋಷ್ ಅವರು ಈ ಅಕ್ರಮ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ. ತಮ್ಮ ಆಸ್ಪತ್ರೆಯ ಉದ್ಯೋಗಿಗಳ ಬಳಿ ಅರ್ಜಿ ಹಾಕಿಸಿ ಅಮೆರಿಕದ ಸರ್ಕಾರಿ ಹಾಗೂ ಖಾಸಗಿ ವಿಮಾ ಸಂಸ್ಥೆಗಳ ನೂರಾರು ವಿಮೆ ಖಾತೆಗಳಿಂದ ಹಣ ಪಡೆದಿರುವ ಆರೋಪ ವೈದ್ಯೆ ಮೋನಾ ಘೋಷ್ ಅವರ ಮೇಲಿದೆ. ಮೆಡಿಕ್ಲೈಡ್, ಟ್ರೈ ಕೇರ್ ಸೇರಿದಂತೆ ಹಲವು ವಿಮಾ ಕಂಪನಿಗಳಿಗೆ ಮೋಸ ಮಾಡಿರೋದಾಗಿ ಮಾಹಿತಿ ಲಭ್ಯವಾಗಿದೆ. ಕೆಲವು ರೋಗಿಗಳಿಗೆ ಯಾವುದೇ ಚಿಕಿತ್ಸೆಯ ಅಗತ್ಯತೆ ಇಲ್ಲದಿದ್ದರೂ ಅವರಿಗೆ ಚಿಕಿತ್ಸೆ ನೀಡಿರೋದಾಗಿ ಬಿಂಬಿಸಿ ಅವರ ಹೆಸರಿನಲ್ಲಿ ವಿಮೆ ಹಣವನ್ನು ಪಡೆದಿದ್ದಾರೆ. ಕೆಲವೊಂದು ಪ್ರಕರಣಗಳಲ್ಲಿ ರೋಗಿಗಳಿಗೆ ಅಗತ್ಯವಿಲ್ಲದಿದ್ದರೂ ಅವರ ಸಮ್ಮತಿ ಇಲ್ಲದೆ ಆಪರೇಷನ್ ಸೇರಿದಂತೆ ಹಲವು ರೀತಿಯ ಚಿಕಿತ್ಸೆಗಳನ್ನ ನೀಡಲಾಗಿದೆ.

ಇನ್ನು ರೋಗಿಗಳ ಕುರಿತಾಗಿ ನಕಲಿ ದಾಖಲೆಗಳನ್ನ ಹಾಗೂ ನಕಲಿ ವೈದ್ಯಕೀಯ ವರದಿಗಳನ್ನು ತಯಾರಿಸಿದ ಅಪರಾಧವನ್ನು ವೈದ್ಯೆ ಡಾ. ಮೋನಾ ಘೋಷ್ ಅವರು ಒಪ್ಪಿಕೊಂಡಿದ್ದಾರೆ. ವಿಮೆ ಹಣವನ್ನು ಅಕ್ರಮವಾಗಿ ಪಡೆದ ಆರೋಪವನ್ನೂ ಅವರು ಒಪ್ಪಿಕೊಂಡಿದ್ದಾರೆ. ಇದೀಗ ಜೈಲು ಶಿಕ್ಷೆಯ ಅವಧಿ ಎಷ್ಟು ಅನ್ನೋ ಕುತೂಹಲ ಮಾತ್ರ ಬಾಕಿ ಉಳಿದಿದೆ.

### ನ್ಯಾಯಾಲಯ ಪರಿಶೀಲನೆ

ಇನ್ನು ಟೆಲಿ ಮೆಡಿಸಿನ್, ರೋಗಿಗಳ ಮನೆಗೆ ಭೇಟಿ ನೀಡಿದ ಬಗ್ಗೆ ಸುಳ್ಳು ದಾಖಲೆಗಳನ್ನ ಸೃಷ್ಟಿ ಮಾಡಿ ಹಣ ಪಡೆಯಲಾಗಿದೆ. ಈ ಕುರಿತಾಗಿ ಸಮಗ್ರ ತನಿಖೆ ನಡೆಸಲಾಗಿದ್ದು, ವೈದ್ಯೆ ಡಾ. ಮೋನಾ ಘೋಷ್ ಅವರ ಮೇಲ್ಮನವಿ ಅರ್ಜಿಯನ್ನೂ ನ್ಯಾಯಾಲಯ ಪರಿಶೀಲಿಸಿದೆ.

**ಅನಾರೋಗ್ಯ ಕಾಡಿದಾಗ, ಗಂಭೀರ ಆರೋಗ್ಯ ಸಮಸ್ಯೆಗಳು ಎದುರಾದಾಗ ನೆರವಿಗೆ ಬರಬೇಕು ಅನ್ನೋ ಕಾರಣಕ್ಕೆ ಆರೋಗ್ಯ ವಿಮೆ ಮಾಡಿಸಲಾಗುತ್ತದೆ. ಆದರೆ, ಈ ವಿಮೆಯನ್ನೇ ದುರ್ಬಳಕೆ ಮಾಡಿಕೊಂಡಿರುವ ಅಮೆರಿಕ ವೈದ್ಯೆಯೊಬ್ಬರು ಯಾರಿಗೂ ಚಿಕಿತ್ಸೆ ನೀಡದೆ ವಿಮೆ ಹಣವನ್ನು ಗುಳುಂ ಮಾಡಿದ್ದಾರೆ. ಇದೀಗ ಇವರು ತಪ್ಪಿತಸ್ಥರು ಎಂದು ನ್ಯಾಯಾಲಯದಲ್ಲಿ ಸಾಬೀತಾಗಿದ್ದು, ಕೆಲವೇ ತಿಂಗಳಲ್ಲಿ ಈಕೆಗೆ ಶಿಕ್ಷೆಯ ಪ್ರಮಾಣ ಪ್ರಕಟ ಆಗಲಿದೆ. 10 ವರ್ಷ ಜೈಲು ಶಿಕ್ಷೆಯಾಗುವ ಸಾಧ್ಯತೆ ಇದೆ.**

# ನನ್ನ ಮಾತುಗಳನ್ನು ಕಡತದಿಂದ ತೆಗೆದುಹಾಕಲಾಗಿದೆ

**ನವದೆಹಲಿ:** ಸಂಸತ್‌ನಲ್ಲಿ ನಾನು ಮಾತನಾಡಿದ ಕೆಲ ಮಾತುಗಳನ್ನು ಉದ್ದೇಶಪೂರ್ವಕವಾಗಿ ಕಡತದಿಂದ ತೆಗೆದುಹಾಕಲಾಗಿದೆ ಎಂದು ವಿಪಕ್ಷ ನಾಯಕ ರಾಹುಲ್‌ಗಾಂಧಿ ಆರೋಪಿಸಿದ್ದಾರೆ. ಇಂತಹ ಘಟನೆಗಳು ನಡೆಯಲು ಮೋದಿ ಅವರ ಕಾಲದಲ್ಲಿ ಮಾತ್ರ ಸಾಧ್ಯ, ಇನ್ನು ಏನೇನು ತೆಗೆದು ಹಾಕುತ್ತಾರೋ ನೋಡೋಣ ಎಂದು ಅವರು ಹರಿಹಾಯ್ದಿದ್ದಾರೆ. ಮೋದಿ ಅವರ ಕಾಲದಲ್ಲಿ ಸತ್ಯವನ್ನು ತೆಗೆದು ಹಾಕಲಾಗಿದೆ. ಆದರೆ ನಿಜವಾಗಿಯು ಸತ್ಯವನ್ನು ತೆಗೆದುಹಾಕಲು ಸಾಧ್ಯವಿಲ್ಲ. ನಾನು ಏನು ಹೇಳ ಬೇಕಿತ್ತು ಅದನ್ನೇ ಹೇಳಿದ್ದೇನೆ.



ಅದೇ ಸರಿ, ಸತ್ಯ. ಅವರು ಏನನ್ನಾದರೂ ತೆಗೆದು ಹಾಕಲಿ. ಸತ್ಯ ಸತ್ಯವೇ ಆಗಿರುತ್ತದೆ ಎಂದು ಪ್ರತಿಕ್ರಿಯಿಸಿದ್ದಾರೆ. ಸೋಮವಾರ ಆರಂಭಗೊಂಡ ಕಲಾಪದಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದರು. ಬಿಜೆಪಿ ಜಾತಿವಾದಿ ಪಕ್ಷ ಎಂದು ಜರಿದಿದ್ದರು. ಜಾತಿ ಆಧಾರದ ಮೇಲೆ ದೇಶವನ್ನು ಬಿಜೆಪಿ ಒಡೆಯುತ್ತಿದೆ ಎಂದು ಆರೋಪಿಸಿದ್ದರು. ಅಲ್ಲದೆ ಕುರಾನ್ ಹೇಳಿಕೆಗಳನ್ನು ಉಲ್ಲೇಖಿಸಿದ್ದ ರಾಹುಲ್ ಗಾಂಧಿ, ಶಿವ, ಗುರು ನಾನಕ್, ಕ್ರಿಸ್ತನ ಫೋಟೋಗಳನ್ನು ತೋರಿಸಿದ್ದರು.

ಈ ಭಗವಂತರು ಹೇಳಿದ್ದು ಎಲ್ಲಾ ಧರ್ಮಗಳು ಒಂದೇ ಎಂದು. ಆದ್ದರಿಂದ ಹೆದರುವ ಅವಶ್ಯಕತೆ ಇಲ್ಲ ಎಂದು ಪ್ರತಿಪಾದಿಸಿದ್ದರು. ಅಗ್ನಿಪಥ್ ನೇಮಕದ ಬಗ್ಗೆ ಮಾತನಾಡಿದ ರಾಹುಲ್, ಅಗ್ನಿವೀರ್ ನೇಮಕ ದೇಶದ ಸೇನೆಗಲ್ಲ ಬದಲಿಗೆ ಪ್ರಧಾನಿ ಕಚೇರಿ ರಕ್ಷಣೆಗೆ ಸೀಮಿತವಾಗಿದೆ ಎಂದು ಹರಿಹಾಯ್ದಿದ್ದರು.

# ಸುಕ್ಮಾ ಜಿಲ್ಲೆಯಲ್ಲಿ 9 ನಕ್ಸಲರ ಬಂಧನ

**ಸುಕಾ:** ಕಳೆದ ತಿಂಗಳು ಐಇಡಿ ಸ್ಫೋಟಿಸಿ ಇಬ್ಬರು ಸಿಆರ್ ಪಿಎಫ್ ಕೋಬ್ರಾ ಸಿಬ್ಬಂದಿ ಸಾವಿಗೆ ಕಾರಣರಾದ ಒಂಬತ್ತು ನಕ್ಸಲೀಯರನ್ನು ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಫೋಟದ ಘಟನೆಯಲ್ಲಿ ಭಾಗಿಯಾದ ನಾಲ್ವರನ್ನು ಪೊಲೀಸ್ ಜಂಟಿ ತಂಡ, ಸಿಆರ್‌ಪಿಎನ ಬೆಟಾ ಲಿಯನ್, ಕಮಾಂಡೋ ಬೆಟಾ ಲಿಯನ್ ಫ್‌ರ್‌ರ್ ರೆಸಲ್ಯೂಟ್ ಆಕ್ಷನ್ ಜಾ ಗರಗುಂದದ ತಿಮ್ಮಾಪುರಂ ಮತ್ತು ಟೇಕಲ್ಗುಡಂ ಗ್ರಾಮಗಳ ನಡುವಿನ ಅರಣ್ಯದಿಂದ ಬಂಧಿಸಿದೆ ಎಂದು ಸುಕ್ಮಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವಾಣ್ ತಿಳಿಸಿದ್ದಾರೆ. ಬಂತರಲ್ಲಿ ಕುಂಜಮ್ ರಾಮ (35), ಬರ್ಸೆ ಬಿಚ್ಚೆಮ್ (40) ಮಾವೋವಾದಿಗಳ ಮುಂಚೂಣಿಯಲ್ಲಿರುವ ಡಿಎಕೆಎಂಎಸ್ (ದಂಡಕಾರಣ್ಯ ಆದಿವಾಸಿ ಕಿಸಾನ್ ಮಜ್ದೂರ್ ಸಂಘಟನೆ) ಸದಸ್ಯರಾಗಿದ್ದು, ಕುನಜ್ಮ್ ಜೋಗಾ (2 2), ಕುಂಜಮ್ ಭೀಮಾ (21) ಮಿಲಿಟಿಯ ಸದಸ್ಯರಾಗಿದ್ದಾರೆ ಎಂದು ಅವರು ಹೇಳಿದರು.



ಕಳೆದ ಜೂನ್ 23 ರಂದು ಸಿಲ್ಗರ್ ಮತ್ತು ಟೇಕಲ್ಗುಡೆಂ ಶಿಬಿರಗಳ ನಡುವೆ ತಿಮ್ಮಾಪುರಂ ಗ್ರಾಮದ ಬಳಿ ಭದ್ರತಾ ಸಿಬ್ಬಂದಿ ಸಾಗಿಸುತ್ತಿದ್ದ ಟ್ರಕ್ ಅನ್ನು ಸ್ಫೋಟಿಸಿದ ಕಾನ್‌ಸ್ಟೇಬಲ್ ಶೈಲೇಂದ್ರ (29) ಮತ್ತು ಕೋಬ್ರಾದ 201 ನೇ ಬೆಟಾಲಿಯನ್ನ ಚಾಲಕ ವಿಷ್ಣು ಆರ್ (35) ಹುತಾತ್ಮರಾಗಿದ್ದರು. ಇದರೊಂದಿಗೆ ಘಟನೆಗೆ ಸಂಬಂಧಿಸಿದಂತೆ ಇದುವರೆಗೆ 10 ನಕ್ಸಲೀಯರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತ್ಯೇಕ ಘಟನೆಯಲ್ಲಿ, ಜಿಲ್ಲಾ ರಿಸರ್ವ್ ಗಾರ್ಡ್, ಸ್ಥಳೀಯ ಪೊಲೀಸರ ಜಂಟಿ ತಂಡ ಶೋಧ ಕಾರ್ಯಾಚರಣೆಯಲ್ಲಿದ್ದಾಗ ಜಾಗರಗುಂದ ಪೊಲೀಸ್ ಠಾಣೆ ವ್ಯಾಪ್ತಿಯ ಗೊಂಡಪಲ್ಲಿ ಗ್ರಾಮದ ಅರಣ್ಯದಿಂದ ಐವರು ನಕ್ಸಲೀಯರನ್ನು ಬಂಧಿಸಲಾಯಿತು ಎಂದು ಚವಾಣ್ ಹೇಳಿದರು. ಈ ವರ್ಷ ಏಪ್ರಿಲ್ 6 ರಂದು ಜಗರಗುಂದ ಪ್ರದೇಶದಲ್ಲಿ ಪೊಲೀಸ್ ತಂಡದ ಮೇಲೆ ನಡೆದ ದಾಳಿಯಲ್ಲಿ ಐವರು ಭಾಗಿಯಾಗಿದ್ದಾರೆ ಎಂದು ಅವರು ಹೇಳಿದರು.

# ಸಲ್ಮಾನ್ ಖಾನ್ ಹತ್ಯೆಗೆ 25 ಲಕ್ಷ ರೂ. ಸುಫಾರಿ

**ಮುಂಬೈ:** ಬಾಲಿವುಡ್ ನಟ ಸಲ್ಮಾನ್ ಖಾನ್ ಹತ್ಯೆಗೆ ಬಿಷ್ಣೋಯ್ ಗ್ಯಾಂಗ್ 25 ಲಕ್ಷ ರೂ.ಗಳ ಸುಫಾರಿ ನೀಡಿತ್ತು ಎನ್ನುವ ಅಂಶ ಇದೀಗ ಬಹಿರಂಗಗೊಂಡಿದೆ. ಬಾಲಿವುಡ್ ನಟ ಸಲಾನ್ ಖಾನ್ ಹತ್ಯೆಗೆ ಸಂಚುರೂಪಿಸಿದ್ದ ಐವರು ಆರೋಪಿಗಳ ವಿರುದ್ಧ ದಾಖಲಾಗಿರುವ ಹೊಸ ಚಾರ್ಜ್ ಶೀಟ್ ಆಘಾತಕಾರಿ ವಿವರಗಳನ್ನು ಬಹಿರಂಗಪಡಿಸಿದೆ. ನವಿ ಮುಂಬೈ ಪೊಲೀಸರ ಪ್ರಕಾರ, ಕುಖ್ಯಾತ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನೊಂದಿಗೆ ಸಂಬಂಧ ಹೊಂದಿರುವ ಆರೋಪಿಗಳ ಮೇಲೆ ಕೊಲೆಗೆ ಸಂಚು, ಇತರ ಗಂಭೀರ ಅಪರಾಧಗಳ ಆರೋಪ ಹೊರಿಸಲಾಗಿದೆ.



ಚಾರ್ಜ್ ಶೀಟ್ ಪ್ರಕಾರ, ನಟನನ್ನು ಹತ್ಯೆ ಮಾಡಲು ಬಿಷ್ಣೋಯ್ ಗ್ಯಾಂಗ್ 25 ಲಕ್ಷ ಮೊತ್ತದ ಗುತ್ತಿಗೆ ನೀಡಿತ್ತು. 2023ರ ಆಗಸ್ಟ್‌ನಿಂದ 2024ರ ಏಪ್ರಿಲ್‌ವರೆಗೆ ಹಲವು ತಿಂಗಳುಗಳ ಕಾಲ ಈ ಯೋಜನೆ ರೂಪಿಸಲಾಗಿತ್ತು. ಎಕೆ-47, ಎಕೆ-92, ಎಂ16 ರೈಫಲ್‌ಗಳು ಮತ್ತು ಟರ್ಕಿ ನಿರ್ಮಿತ ಜಿಗಾನಾ ಪಿಸ್ತೂಲ್ ಸೇರಿದಂತೆ ಪಾಕಿಸ್ತಾನದಿಂದ ಸುಧಾರಿತ ಬಂದೂಕುಗಳನ್ನು ಪಡೆಯಲು ಗ್ಯಾಂಗ್ ಉದ್ದೇಶಿಸಿತ್ತು ಎಂದು ತನಿಖೆಗಳು ಬಹಿರಂಗಪಡಿಸಿವೆ.

ಮೇ 29, 2022 ರಂದು ಪಂಜಾಬಿ ಗಾಯಕ ಸಿಧು ಮೂಸ್ ವಾಲಾ ಹತ್ಯೆಗೆ ಬಳಸಲಾದ ಆಯುಧವನ್ನೇ ಬಳಸಿ ಸಲಾನ್ ಖಾನ್ ಅವರನ್ನು ಹತ್ಯೆ ಮಾಡುವ ಗುರಿ ಹೊಂದಲಾಗಿತ್ತು ಎನ್ನುವುದು ಗೊತ್ತಾಗಿದೆ. ಸರಿಸುಮಾರು 60 ರಿಂದ 70 ವ್ಯಕ್ತಿಗಳ ಜಾಲವೂ ಖಾನ್ ಅವರ ಪ್ರತಿಯೊಂದು ಚಲನವಲನವನ್ನು ಪತ್ತೆಹಚ್ಚುವಲ್ಲಿ ತೊಡಗಿಸಿಕೊಂಡಿತ್ತು.

ಮಾತ್ರವಲ್ಲ ಅವರು ಚಲನಚಿತ್ರ ಚಿತ್ರೀಕರಣಗಳ ಸ್ಥಳಕ್ಕೂ ಆಗಾಗ್ಗೆ ಭೇಟಿ ನೀಡುತ್ತಿದ್ದರು ಎಂದು ವರದಿಯಾಗಿದೆ. ಹತ್ಯೆಯನ್ನು ಕಾರ್ಯಗತಗೊಳಿಸಲು 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹುಡುಗರನ್ನು ನೇಮಿಸಿಕೊಳ್ಳಲಾಗಿತ್ತು ಎಂದು ಚಾರ್ಜ್ ಶೀಟ್ ಹೇಳುತ್ತದೆ. ಈ ಅಪ್ರಾಪ್ತ ವಯಸ್ಕರು ದಾಳಿಯನ್ನು ಪ್ರಾರಂಭಿಸಲು ಉತ್ತರ ಅಮೆರಿಕಾದಿಂದ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ನಂಬಲಾದ ಗ್ಯಾಂಗ್‌ನ ಪ್ರಮುಖ ವ್ಯಕ್ತಿಗಳಾದ ಗೋಲ್ಡಿ ಬ್ರಾರ್ ಮತ್ತು ಅನೋಲ್ ಬಿಷ್ಣೋಯ್ ಅವರ ಆದೇಶಗಳಿಗಾಗಿ ಕಾಯುತ್ತಿದ್ದರು ಎಂದು ವರದಿಯಾಗಿದೆ.

**ಖಾನ್ ಅವರ ಮನೆಯ ಹೊರಗೆ ಗುಂಡಿನ ದಾಳಿಯ ಘಟನೆಯ ಒಂದು ದಿನದ ನಂತರ, ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರು ನಟನನ್ನು ಭೇಟಿಯಾಗಿ ಎಲ್ಲಾ ಸಹಾಯ ನೀಡುವ ಭರವಸೆ ನೀಡಿದ್ದರು.**

# 8,300 ಕೋಟಿ ರೂ. ವಂಚನೆ

**ವಾಷಿಂಗ್ಟನ್:** ಭಾರತೀಯ ಮೂಲದ ಅಮೆರಿಕದ ಉದ್ಯಮಿ, ಔಟ್ಕಮ್ ಹೆಲ್ತ್ ಸಂಸ್ಥೆಯ ಸಹ ಸಂಸ್ಥಾಪಕ ರಿಶಿ ಶಾ ಅವರಿಗೆ ವಂಚನೆ ಪ್ರಕರಣದಲ್ಲಿ ಏಳೂವರೆ ವರ್ಷ ಶಿಕ್ಷೆಯಾಗಿದೆ. ಬರೋಬ್ಬರಿ 8,300 ಕೋಟಿ ರೂ. ವಂಚನೆ ಪ್ರಕರಣದಲ್ಲಿ ರಿಶಿ ಶಾ ಅವರನ್ನು ಅಮೆರಿಕ ಜಿಲ್ಲಾ ಕೋರ್ಟ್ ದೋಷಿ ಎಂದು ಘೋಷಿಸಿದ್ದು, ಇದೀಗ ಶಿಕ್ಷೆ ಪ್ರಮಾಣ ಪ್ರಕಟಿಸಿದೆ. ಗೋಲ್ಡ್‌ಸಚ್ಸ್ ಗ್ರೂಪ್, ಗೂಗಲ್ ಪೇರೆಂಟ್ ಆಲ್ಫಬೆಟ್, ಇಲಿನಾಯ್ಸ್ ಗವರ್ನರ್ ಜೆಬಿ ಪ್ರಿಟ್ಜ್ಕರ್ ಅವರ ಸಾಹಸೋದ್ಯಮ ಬಂಡವಾಳ ಸಂಸ್ಥೆಗೆ ತಮ ಸ್ಕೀಂ ಮೂಲಕ ಶಾ ಕೋಟ್ಯಂತರ ರೂ. ವಂಚನೆ ಮಾಡಿರುವುದು ಸಾಬೀತಾಗಿದ್ದು, ಅಮೆರಿಕ ಜಿಲ್ಲಾ ನ್ಯಾಯಾಧೀಶ ಥಾಮನ್ ಡರ್ಕಿನ್ ಏಳೂವರೆ ವರ್ಷ ಕಠಿಣ ಸಜೆ ವಿಧಿಸಿದೆ.

ಹೂಡಿಕೆದಾರರಿಗೆ ಸುಳ್ಳು ಹೇಳಿ ವಂಚನೆ, ಸುಳ್ಳು ಜಾಹೀರಾತು ಪ್ರಕಟಿಸಿ ವಂಚನೆ ಹೀಗೆ ಗಂಭೀರ ಆರೋಪಗಳನ್ನು ಎದುರಿಸುತ್ತಿರುವ ಶಾಗೆ 15 ವರ್ಷಗಳ ಶಿಕ್ಷೆ ವಿಧಿಸಬೇಕೆಂದು ಕೋರ್ಟ್‌ಗೆ ಸಂತ್ರಸ್ತರು ಮನವಿ ಮಾಡಿದ್ದರು.

ವೈದ್ಯರ ಕಚೇರಿಗಳಲ್ಲಿನ ಟಿವಿಗಳಲ್ಲಿ ಜಾಹೀರಾತುಗಳನ್ನು ಒದಗಿಸಿದ ಔಟ್ಕಮ್ ಹೆಲ್ತ್‌ನ ಸಹ-ಸಂಸ್ಥಾಪಕ, ಭಾರತೀಯ-ಅಮೆರಿಕನ್ ರಿಷಿ ಶಾ, 38, ಕಳೆದ ವರ್ಷ ಫೆಡರಲ್ ಕೋರ್ಟ್ ಅನೇಕ ವಂಚನೆ ಮತ್ತು ಮನಿ ಲಾಂಡರಿಂಗ್ ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಿತ್ತು. ಇದೀಗ ಶಾ ಮತ್ತು ಮತ್ತು ಇತರ ಇಬ್ಬರು ಸಹೋದ್ಯೋಗಿಗಳಿಗೆ ಕಳೆದ ವಾರ ಚಿಕಾಗೋದಲ್ಲಿ ಯುಎಸ್ ಜಿಲ್ಲಾ ನ್ಯಾಯಾಧೀಶ ಥಾಮಸ್ ಡರ್ಕಿನ್ ಅವರು ಶಿಕ್ಷೆ ವಿಧಿಸಿದ್ದಾರೆ ಎಂದು ಯುಎಸ್ ಅಟಾರ್ನಿ ಕಚೇರಿ ನಿನ್ನೆ ಹೇಳಿಕೆಯಲ್ಲಿ ತಿಳಿಸಿದೆ. 2017 ರ ವಾಲ್ ಸ್ಟ್ರೀಟ್ ಜನರ್‌ಲ್ ಲೇಖನದಲ್ಲಿ ವಂಚನೆಯನ್ನು ಬಹಿರಂಗಪಡಿಸುವ ಮೊದಲು, ಶಾ ಡೆಮಾಕ್ರಟಿಕ್ ವಲಯಗಳಲ್ಲಿ ಉದಯೋನ್ಮುಖ ಉದ್ಯಮಿಯಾಗಿದ್ದರು.

2006 ರಲ್ಲಿ ಅವರು ಚಿಕಾಗೋದ ಉತ್ತರದಲ್ಲಿರುವ ನಾರ್ತ್‌ವೆಸ್ಟರ್ನ್ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಯಾಗಿದ್ದಾಗ ಶಾ ಕಾಂಟೆಕ್ಸ್ಟ ಮೀಡಿಯಾ ಹೆಲ್ತ್ ಎಂಬ ಸ್ಟಾರ್ಟ್ ಅಪ್ ಕಂಪೆನಿ ಶುರು ಮಾಡಿದ್ದರು.

# ಜುಲೈನಲ್ಲಿ ಮುಂಗಾರು ಮಳೆ ಹೇಗಿರಲಿದೆ?

**ನವದೆಹಲಿ:** ಮುಂಗಾರು ಮಾರುತಗಳು ಚುರುಕಾಗಿರುವುದರಿಂದ ಜುಲೈನಲ್ಲಿ ಭಾರತದಲ್ಲಿ ಸರಾಸರಿಗಿಂತ ಹೆಚ್ಚಿನ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ. ಐಎಂಡಿ ಮುನ್ಸೂಚನೆ ಪ್ರಕಾರ, ಈಶಾನ್ಯ ಭಾರತವನ್ನು ಹೊರತುಪಡಿಸಿ ದೇಶದ ಎಲ್ಲಾ ಪ್ರದೇಶಗಳಲ್ಲಿ ಜುಲೈನಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯಾಗುವ ಶೇಕಡಾ 80 ರಷ್ಟು ಸಂಭವನೀಯತೆ ಇದೆ. ಮಾನ್ಸೂನ್ ಋತುವಿನ ದ್ವಿತೀಯಾರ್ಧದಲ್ಲಿ ಮಳೆ ಸುರಿಯಲು ಅನುಕೂಲಕರವಾಗುವ ಲಾ ನಿನಾ ಪರಿಣಾಮವು ಪ್ರಭಾವ ಬೀರುವ ನಿರೀಕ್ಷೆಯಿದೆ. ಇದರ ಪರಿಣಾಮವಾಗಿ ಹೆಚ್ಚಿನ ಮಳೆಯಾಗಲಿದೆ ಎಂದು ಐಎಂಡಿ ಮಹಾನಿರ್ದೇಶಕ ಮೃತ್ಯುಂಜಯ್ ಮೊಹಾಪಾತ್ರ ಹೇಳಿದ್ದಾರೆ. ಮಾನ್ಸೂನ್ ಮೇ 30 ರಂದು ಬೇಗನೆ ಕೇರಳ ಮತ್ತು ಈಶಾನ್ಯದಲ್ಲಿ ಆವರಿಸಿತ್ತು. ಆದರೆ, ಮಹಾರಾಷ್ಟ್ರದಲ್ಲಿ ಅದರ ಪ್ರಗತಿ ನಿಧಾನವಾಯಿತು.



ಇದು ವಾಯುವ್ಯ ಭಾರತದಲ್ಲಿ ಸುಡುವ ತೀವ್ರ ಶಾಖದ ಅಲೆಗಳಿಗೆ ಮತ್ತು ಪಶ್ಚಿಮ ಬಂಗಾಳ, ಒಡಿಶಾ, ಜಾರ್ಖಂಡ್, ಬಿಹಾರ, ಛತ್ತೀಸ್‌ಗಢ, ಮಧ್ಯಪ್ರದೇಶ, ಉತ್ತರ ಪ್ರದೇಶದಲ್ಲಿ ದೀರ್ಘಕಾಲದ ಶುಷ್ಕ ಪರಿಸ್ಥಿತಿಗಳಿಗೆ ಕಾರಣವಾಯಿತು. ಜೂನ್ 11 ರಿಂದ ಜೂನ್ 27 ರವರೆಗೆ ದೇಶದಲ್ಲಿ 16 ದಿನಗಳ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗಿದೆ. ಇದು ಒಟ್ಟಾರೆ ಸಾಮಾನ್ಯಕ್ಕಿಂತ ಕಡಿಮೆ ಮಳೆಗೆ ಕಾರಣವಾಯಿತು ಎಂದು ಮೊಹಾಪಾತ್ರ ಹೇಳಿದರು. ಐಎಂಡಿ ಅಂಕಿ ಅಂಶಗಳ ಪ್ರಕಾರ, ಜೂನ್‌ನಲ್ಲಿ ದೇಶದಲ್ಲಿ 165.3 ಮಿ.ಮೀ ಸಾಮಾನ್ಯ ಮಳೆಗೆ ಬದಲಾಗಿ 147.2 ಮಿ.ಮೀ ಮಳೆಯಾಗಿದೆ.

ಇದು ಒಂದು ತಿಂಗಳಲ್ಲಿ ಶೇಕಡಾ 11 ರಷ್ಟು ಮಳೆಯ ಕೊರತೆ ಯಾಗಿದೆ. ಭಾರತೀಯ ಆರ್ಥಿಕತೆಯಲ್ಲಿ ಮಾನ್ಸೂನ್ ಪ್ರಮುಖ ಪಾತ್ರ ವಹಿಸುತ್ತದೆ. ಆಹಾರವನ್ನು ಪೂರೈಕೆ ಮಾತ್ರವಲ್ಲದೇ ದ್ವಿಚಕ್ರ ವಾಹನಗಳು, ಫ್ರಿಜ್‌ಗಳು ವೇಗವಾಗಿ ಮಾರಾಟವಾಗುವ ಗ್ರಾಹಕ ಸರಕುಗಳಿಗೆ ಬೇಡಿಕೆಯನ್ನು ಹೆಚ್ಚಿಸುವಲ್ಲಿ ಕೃಷಿ ಕ್ಷೇತ್ರವು ಪ್ರಮುಖ ಪಾತ್ರ ವಹಿಸುತ್ತದೆ.

**ದೇಶದ ಶೇಕಡಾ 50 ರಷ್ಟು ಕೃಷಿಭೂಮಿಗೆ ಮಳೆ ಬಿಟ್ಟರೆ ಬೇರೆ ಯಾವುದೇ ನೀರಾವರಿ ಮೂಲಗಳಿಲ್ಲ. ಮಾನ್ಸೂನ್ ಮಳೆಯು ದೇಶದ ಜಲಾಶಯಗಳು, ಜಲಾನಯನ ಪ್ರದೇಶಗಳನ್ನು ಮರುಪೂರಣ ಮಾಡಲು ಸಹ ನಿರ್ಣಾಯಕವಾಗಿದೆ. ಭಾರತವು ಆಹಾರ ಧಾನ್ಯಗಳ ಪ್ರಮುಖ ರ್ತದಾರನಾಗಿ ಹೊರಹೊಮಿದೆ. ಆದರೆ, ದೇಶೀಯ ಪೂರೈಕೆಯನ್ನು ಹೆಚ್ಚಿಸಲು ಮತ್ತು ಕಳೆದ ವರ್ಷ ಅನಿಯಮಿತ ಮಾನ್ಸೂನ್ ಕಾರಣದಿಂದ ಬೆಲೆಗಳನ್ನು ನಿಯಂತ್ರಿಸಲು ಸಕ್ಕರೆ, ಅಕ್ಕಿ, ಗೋಧಿ ಮತ್ತು ಈರುಳ್ಳಿಯ ರ್ತಗಳನ್ನು ನಿರ್ಬಂಧಿಸಬೇಕಾಯಿತು.**

# ಮುಂದೊಂದು ದಿನ ಭಾರತದ ಬಹುಸಂಖ್ಯಾತರು

## ಅಲ್ಪಸಂಖ್ಯಾತರಾಗಲಿದ್ದಾರೆ: ಅಲಹಾಬಾದ್ ಹೈಕೋರ್ಟ್ ಕಳವಳ

• **ಉದಯವಾಹಿನಿ, ಅಲಹಬಾದ್**

ಸಭೆ ಸಮಾರಂಭಗಳಲ್ಲಿ ಹೆಚ್ಚುತ್ತಿರುವ ಧಾರ್ಮಿಕ ಮತಾಂತರಗಳ ಬಗ್ಗೆ ಅಲಹಾಬಾದ್ ಹೈಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದ್ದು, ಇಂತಹ ಪ್ರವೃತ್ತಿ ಮುಂದುವರೆದರೆ, ದೇಶದ ಬಹುಸಂಖ್ಯಾತ ಜನಸಂಖ್ಯೆಯು ಮುಂದೊಂದು ದಿನ ಅಲ್ಪ ಸಂಖ್ಯಾತವಾಗಲಿದೆ ಎಂದು ಎಚ್ಚರಿಸಿದೆ.



ಗ್ರಾಮವೊಂದರಲ್ಲಿ ಹಿಂದೂಗಳ ಗುಂಪನ್ನು ಕ್ರಿಶ್ಚಿಯನ್ ಧರ್ಮಕ್ಕೆ ಪರಿವರ್ತಿಸಿದ ಆರೋಪದ ಮೇಲೆ ಕೈಲಾಶ್ ಎಂಬಾತನ ಜಾಮೀನು ಅರ್ಜಿಯನ್ನು ವಜಾಗೊಳಿಸುವಾಗ ನ್ಯಾಯಮೂರ್ತಿ ರೋಹಿತ್ ರಂಜನ್ ಅಗರ್‌ವಾಲ್ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಪ್ರಕ್ರಿಯೆಗೆ ಅವಕಾಶ ನೀಡಿದರೆ ಮುಂದೊಂದು ದಿನ ಈ ದೇಶದ ಬಹುಸಂಖ್ಯಾತರು ಅಲ್ಪಸಂಖ್ಯಾತರಾಗುತ್ತಾರೆ, ಮತಾಂತರ ನಡೆಯುತ್ತಿದ್ದು, ಭಾರತದ ಪ್ರಜೆಗಳ ಧರ್ಮವನ್ನು ಬದಲಾಯಿಸುವ ಇಂತಹ ಧಾರ್ಮಿಕ ಸಭೆಗಳನ್ನು ತಕ್ಷಣವೇ ನಿಲ್ಲಿಸಬೇಕು ಎಂದು ನ್ಯಾಯಾಲಯ ಸೂಚನೆ ನೀಡಿದೆ.

**ಸಭೆಗಳನ್ನು ತಕ್ಷಣವೇ ನಿಲ್ಲಿಸಬೇಕು**

ವ್ಯಕ್ತಿಗಳ ಸಂಭಾಷಣೆಗಳು ನಡೆಯುವ ಧಾರ್ಮಿಕ ಸಭೆಗಳನ್ನು ತಕ್ಷಣವೇ ನಿಷೇಧಿಸುವಂತೆ ಹೈ ಕೋರ್ಟ್ ಆದೇಶಿಸಿದ್ದು, ಅಂತಹ ಚಟುವಟಿಕೆಗಳು ಸಂವಿಧಾನದ 25ನೇ ವಿಧಿಯಲ್ಲಿ ಪ್ರತಿಪಾದಿಸಿರುವ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ನೇರವಾಗಿ ಉಲ್ಲಂಘಿಸುತ್ತದೆ ಎಂದು ಆತಂಕ ಹೊರಹಾಕಿದೆ. 25ನೇ ವಿಧಿಯು ವ್ಯಕ್ತಿಗಳು ಯಾವುದೇ ಧರ್ಮವನ್ನು ನಂಬಲು ಸ್ವತಂತ್ರರು ಎಂದು ಹೇಳುತ್ತದೆ, ಕೆಲವು ನಿರ್ಬಂಧಗಳಿಗೆ ಒಳಪಟ್ಟು ಅವರ ಧರ್ಮವನ್ನು ಪೂಜಿಸಲು ಮತ್ತು ಪ್ರಚಾರ ಮಾಡಲು ಅವಕಾಶವಿದೆ.

ಪ್ರಚಾರ ಎಂದರೆ ಧರ್ಮವನ್ನು ಉತ್ತೇಜಿಸುವುದು, ಯಾವುದೇ ವ್ಯಕ್ತಿಯನ್ನು ಅವರ ಧರ್ಮದಿಂದ ಇನ್ನೊಬ್ಬರಿಗೆ ಪರಿವರ್ತಿಸುವುದು ಎಂದಲ್ಲ.

ಉತ್ತರ ಪ್ರದೇಶದ ವಿವಿಧ ಭಾಗಗಳಲ್ಲಿ ಬಡವರನ್ನು ದಾರಿತಪ್ಪಿಸಿ ಅನೇಕ ಆಮಿಷಗಳನ್ನು ಒಡ್ಡಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಿದ ನಿದರ್ಶನಗಳನ್ನು ಗಮನಿಸಲಾಗಿದೆ ಎಂದು ಆದೇಶದಲ್ಲಿ ಉಲ್ಲೇಖ ಮಾಡಿದೆ. ಇದೇ ವೇಳೆ ಸಂಭಾಷಣೆಯ ಆರೋಪಗಳ ಗಂಭೀರತೆಯನ್ನು ಪರಿಗಣಿಸಿ, ಹಮೀರ್‌ಪುರ ಜಿಲ್ಲೆಯ ಮೌದಾಹಾಗೆ ಸೇರಿದ ಕೈಲಾಶ್‌ಗೆ ಜಾಮೀನು ನೀಡಲು ನ್ಯಾಯಾಲಯ ನಿರಾಕರಿಸಿದೆ.

**ಒಬ್ಬ ತನ್ನ ಮಾನಸಿಕ ಅಸ್ವಸ್ಥ ಸಹೋದರನನ್ನು ಒಂದು ವಾರ ದೆಹಲಿಗೆ ಕರೆದೊಯ್ದ ನಂತರ ಕೈಲಾಶ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು. ಸಹೋದರನಿಗೆ ಚಿಕಿತ್ಸೆ ಕೊಡಿಸಿ ಗ್ರಾಮಕ್ಕೆ ವಾಪಸ್ ಕಳುಹಿಸುವುದಾಗಿ ಹೇಳಿದ್ದರೂ ಆರೋಪಿ ವಾಪಸ್ ಬಂದಿಲ್ಲ ಎಂದು ಎಐಆರ್‌ನಲ್ಲಿ ಹೇಳಲಾಗಿದೆ. ಕೈಲಾಶ್ ಹಿಂದಿರುಗಿದಾಗ, ಅವರು ಹಳ್ಳಿಯ ಎಲ್ಲಾ ಜನರನ್ನು ದೆಹಲಿಯಲ್ಲಿ ಆಯೋಜಿಸಲಾದ ಕಾರ್ಯಕ್ರಮಕ್ಕೆ ಕರೆದೊಯ್ದರು. ಅಲ್ಲಿ ಎಲ್ಲರೂ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡರು. ಎಫ್‌ಐಆರ್ ಪ್ರಕಾರ, ಪ್ರಜಾಪತಿ ಅವರ ಸಹೋದರನಿಗೆ ಮತಾಂತರಕ್ಕೆ ಬದಲಾಗಿ ಹಣವನ್ನು ನೀಡಲಾಗಿತ್ತು.**

# ಉತ್ತರ ಪ್ರದೇಶದ ಹತ್ರಾಸ್‌ನಲ್ಲಿ ಕಾಲ್ತುಳಿತಕ್ಕೆ 100 ಬಲಿ

## ವಿಶಾಲವಾದ ಟೆಂಟ್‌ನಲ್ಲಿ ಆಯೋಜಿಸಲಾಗಿದ್ದ ಸಮಾರಂಭ, ಉತ್ತರಪ್ರದೇಶದ ಹತ್ರಾಸ್ ಜಿಲ್ಲೆಯ ಗ್ರಾಮದಲ್ಲಿ ನಡೆದ ಘಟನೆ

**ಹತ್ರಾಸ್:** ಉತ್ತರ ಪ್ರದೇಶದ ಹತ್ರಾಸ್ ಜಿಲ್ಲೆಯ ಗ್ರಾಮವೊಂದರಲ್ಲಿ ಆಯೋಜಿಸಲಾಗಿದ್ದ ಧಾರ್ಮಿಕ ಸಮಾರಂಭದಲ್ಲಿ ಸಂಭವಿಸಿದ ಕಾಲ್ತುಳಿತದಿಂದಾಗಿ 100 ಮಂದಿ ಸಾವಿಗೀಡಾಗಿದ್ದಾರೆ. ಹತ್ರಾಸ್‌ನ ರಾತಿ ಭಾನ್ಪುರ್ ಎಂಬ ಗ್ರಾಮದಲ್ಲಿ ಶಿವನ ಆರಾಧನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಅದಕ್ಕಾಗಿ ವಿಶಾಲವಾದ ಬಯಲಿನಲ್ಲಿ ವಿಶಾಲವಾದ ಟೆಂಟ್ ಹಾಕಲಾಗಿತ್ತು. ಅದರಲ್ಲಿ ನೂರಾರು ಜನರು ಕುಳಿತುಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು.



**ಏಕೈಕ ಪ್ರವೇಶ ದ್ವಾರದ ಕಡೆಗೆ ಓಡಿದ್ದಾರೆ**

ಧಾರ್ಮಿಕ ಗುರುವೊಬ್ಬರು ಈ ಧಾರ್ಮಿಕ ಸಭೆಯಲ್ಲಿ ನೆರೆದಿದ್ದವರನ್ನು ಉದ್ದೇಶಿಸಿ ಭಾಷಣ ಮಾಡುತ್ತಿದ್ದಾಗ, ಕಾಲ್ತುಳಿತ ಸಂಭವಿಸಿದೆ ಎಂದು ಹೇಳಲಾಗಿದೆ. ಪೊಲೀಸರ ಪ್ರಕಾರ, ಬಯಲಿನಲ್ಲಿ ಹಾಕಲಾಗಿದ್ದ ಟೆಂಟ್‌ನೊಳಗೆ ಗಾಳಿಯಾಡಲು ಎಲ್ಲೂ ರಂಧ್ರಗಳನ್ನು ಬಿಟ್ಟಿರಲಿಲ್ಲ. ಹಾಗಾಗಿ, ವಿಶಾಲವಾದ ಟೆಂಟ್‌ನೊಳಗೆ ಜನ ಪ್ರವೇಶಿಸಿದ ಕೆಲವೇ ನಿಮಿಷಗಳಲ್ಲಿ ಅಲ್ಲಿ ಆಮ್ಲಜನಕದ ಕೊರತೆಯುಂಟಾಗಿದೆ.

ಹಲವಾರು ಜನರಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಅವರೆಲ್ಲರೂ ಚಡಪಡಿಸುತ್ತಾ, ಟೆಂಟ್ ನಿಂದ ಹೊರಬರಲು ಪ್ರಯತ್ನಿಸಿದ್ದಾರೆ. ಹಾಗೆ, ಬದುಕಲು ಓಡುವಾಗ ಗಾಬರಿಯಲ್ಲಿ ಅವರು ಅಕ್ಕಪಕ್ಕ ಕುಳಿದಿದ್ದವರ ಮೇಲೆಲ್ಲಾ ಓಡಾಡಿ ಟೆಂಟ್‌ಗೆ ಇದ್ದ ಏಕೈಕ ದ್ವಾರದ ಕಡೆಗೆ ಓಡಿಬಂದಿದ್ದಾರೆ. ಎಲ್ಲರೂ ಹೀಗೆ ಎಲ್ಲರ ಮೇಲೆ ಎದ್ದುಬಿದ್ದು ಓಡಿ ಬಂದಿದ್ದರಿಂದಾಗಿ, ಕಾಲ್ತುಳಿತ ಉಂಟಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯ ತೀವ್ರತೆಯ ಬಗ್ಗೆ ಪ್ರತಿಕ್ರಿಯಿಸಿದ ಹತ್ರಾಸ್ ಜಿಲ್ಲೆಯ ವೈದ್ಯಾಧಿಕಾರಿ ಡಾ. ಉಮೇಶ್ ಕುಮಾರ್ ತ್ರಿಪಾಠಿ, ಈ ದುರ್ಘಟನೆಯಲ್ಲಿ ಸತ್ತವರ 27 ಶವಗಳನ್ನು ಮರಣೋತ್ತರ ಪರೀಕ್ಷೆಗಾಗಿ ಜಿಲ್ಲಾಸ್ಪತ್ರೆಗೆ ಕಳುಹಿಸಲಾಗಿದೆ. ಅವರಲ್ಲಿ 25 ಜನ ಮಹಿಳೆಯರು ಹಾಗೂ ಇಬ್ಬರು ಗಂಡಸರು ಸೇರಿದ್ದಾರೆ. ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಆಮ್ಲಜನಕದ ಕೊರತೆಯಿಂದ ಕಾಲ್ತುಳಿತ ಉಂಟಾಗಿರಬಹುದು ಎಂದು ಹೇಳಲಾಗಿದೆ. ಈ ಬಗ್ಗೆ ತನಿಖೆ ನಡೆಯುತ್ತಿದ್ದು ಹೆಚ್ಚಿನ ಮಾಹಿತಿಯನ್ನು ನಿರೀಕ್ಷಿಸಲಾಗುತ್ತಿದೆ. ಗಾಯಾಳುಗಳಲ್ಲಿ ಹಲವರ ಪರಿಸ್ಥಿತಿ ತೀವ್ರ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗುವ ಭೀತಿ ಆವರಿಸಿದೆ'' ಎಂದು ಹೇಳಿದ್ದಾರೆ.

ಈ ಘಟನೆಯನ್ನು ಆಗ್ರಾದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಹಾಗೂ ಅಲೀಗಡದ ಪೊಲೀಸ್ ಆಯುಕ್ತರು ಜಂಟಿಯಾಗಿ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕೆಂದು ಯೋಗಿ ಆದಿತ್ಯನಾಥ್ ಸೂಚಿಸಿದ್ದಾರೆ ಎಂದು ಉತ್ತರ ಪ್ರದೇಶದ ಸರ್ಕಾರದ ಮುಖ್ಯಮಂತ್ರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

### ತನಿಖೆಗೆ ಆದೇಶಿಸಿದ ಸಿಎಂ ಯೋಗಿ

ಹತ್ರಾಸ್ ಜಿಲ್ಲೆಯಲ್ಲಿ ನಡೆದ ಘಟನೆಯ ಬಗ್ಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸಂತಾಪ ವ್ಯಕ್ತಪಡಿಸಿದ್ದು, ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ಘಟನಾ ಸ್ಥಳಕ್ಕೆ ಧಾವಿಸಿ ಪರಿಹಾರ ಕಾರ್ಯಗಳನ್ನು ತ್ವರಿತಗೊಳಿಸುವಂತೆ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಗಾಯಾಳುಗಳನ್ನು ಕೂಡಲೇ ಆಸ್ಪತ್ರೆಗೆ ಕರೆದೊಯ್ದು ಸೂಕ್ತ ವೈದ್ಯಕೀಯ ನೆರವು ನೀಡುವಂತೆ ಸೂಚನೆ ನೀಡಿರುವ ಅವರು ಗಾಯಗೊಂಡವರು ಶೀಘ್ರ ಗುಣಮುಖರಾಗಲಿ ಎಂದು ಹಾರೈಸಿದ್ದಾರೆ.

**ಉತ್ತರ ಪ್ರದೇಶದ ಹತ್ರಾಸ್ ಜಿಲ್ಲೆಯ ರಾತಿ ಭಾನ್ಪುರ್ ಎಂಬ ಗ್ರಾಮದಲ್ಲಿ ನಡೆಯುತ್ತಿದ್ದ ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಸಂಭವಿಸಿದ ಕಾಲ್ತುಳಿತಕ್ಕೆ 27 ಮಂದಿ ಬಲಿಯಾಗಿದ್ದಾರೆ. ಶಿವನ ಆರಾಧನೆಗಾಗಿ ಧಾರ್ಮಿಕ ಗುರುವೊಬ್ಬರು ಸತ್ಸಂಗವನ್ನು ಏರ್ಪಡಿಸಿದ್ದರು. ಬಯಲಿನಲ್ಲಿ ಹಾಕಲಾಗಿದ್ದ ವಿಶಾಲವಾದ ಟೆಂಟ್ ನಲ್ಲಿ ಜನರು ತುಂಬಿದ್ದರು. ಕೆಲವೇ ಗಂಟೆ ಗಳಲ್ಲಿ ಅವರಿಗೆ ಆಮ್ಲಜನಕದ ಕೊರತೆ ಉಂಟಾಗಿದ್ದರಿಂದಾಗಿ ಅವರೆಲ್ಲರೂ ಟೆಂಟ್‌ನ ಏಕೈಕ ಪ್ರವೇಶ ದ್ವಾರದ ಕಡೆಗೆ ಓಡಿದ್ದಾರೆ. ಆಗ ಕಾಲ್ತುಳಿತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.**

## ಮಿನಿ ನ್ಯೂಸ್

### ಅದಾನಿ ಸಮೂಹ ಸಂಸ್ಥೆ ವಿರುದ್ಧ ಇಲ್ಲಸಲ್ಲದ ಆರೋಪ

**ನವದೆಹಲಿ:** ಅದಾನಿ ಸಮೂಹ ಸಂಸ್ಥೆ ವಿರುದ್ಧ ಇಲ್ಲ ಸಲ್ಲದ ಆರೋಪ ಮಾಡಿದ್ದ ಹಿಂಡೆನ್‌ಬರ್ಗ್ ರಿಸರ್ಚ್ ಎಲ್‌ಎಲ್‌ಸಿ, ನಾಥನ್ ಆಂಡರ್ಸನ್ ಮತ್ತು ಮಾರಿಷಸ್ ಮೂಲದ ವಿದೇಶಿ ಬಂಡವಾಳ ಹೂಡಿಕೆದಾರ ಮಾರ್ಕ್ ಕಿಂಗ್‌ಡನ್ ಘಟಕಗಳಿಗೆ ಸೆಬಿ ಶೋಕಾಸ್ ನೋಟೀಸ್ ಜಾರಿ ಮಾಡಿದೆ. ಹಿಂಡೆನ್‌ಬರ್ಗ್, ಆಂಡರ್ಸನ್ ಸಂಗಳು ಮೋಸದ ಮತ್ತು ಅನ್ಯಾಯದ ವ್ಯಾಪಾರ ಅಭ್ಯಾಸಗಳ ನಿಯಮಾವಳಿಗಳು ಮತ್ತು ಸಂಶೋಧನಾ ವಿಶ್ಲೇಷಕರ ನಿಯಮಗಳಿಗಾಗಿ ಸೇಬಿ ನೀತಿ ಸಂಹಿತೆಗಳನ್ನು ಉಲ್ಲಂಘಿಸಿದ್ದಾರೆ ಎಂದು ನಿಯಂತ್ರಕರು ಆರೋಪಿಸಿದ್ದಾರೆ.

ನಿಯಂತ್ರಕವೂ ಹಿಂಡೆನ್‌ಬರ್ಗ್ ಮತ್ತು ಎಫ್‌ಪಿಐ ಘಟಕಗಳು ತಪ್ಪು ದಾರಿಗೆಳೆಯುವ ಹಕ್ಕು ನಿರಾಕರಣೆಯನ್ನು ಕೈಗೊಂಡಿದೆ ಎಂದು ಗಮನಸೆಳೆದರು, ವರದಿಯು ಭಾರತದಲ್ಲಿನ ಪಟ್ಟಿಮಾಡಿದ ಘಟಕಗಳಿಗೆ ಸ್ಪಷ್ಟವಾಗಿ ಸಂಬಂಧಿಸಿರುವಾಗ ಭಾರತದ ಹೊರಗೆ ವ್ಯಾಪಾರ ಮಾಡುವ ಸೆಕ್ಯುರಿಟಿಗಳ ಮೌಲ್ಯಮಾಪನಕ್ಕೆ ಮಾತ್ರ ಎಂದು ಹೇಳಿದೆ. ಭಾರತೀಯ ಉತ್ಪನ್ನಗಳ ಮಾರುಕಟ್ಟೆಯಲ್ಲಿ ಕಂಪನಿಯ ಭವಿಷ್ಯದಲ್ಲಿ ವ್ಯಾಪಾರ ಮಾಡಲು ಶಾರ್ಟ್ ಸೆಲ್ಲರ್‌ನೊಂದಿಗೆ ಸಹಕರಿಸುವ ಮೂಲಕ ಅದಾನಿ ಎಂಟರ್‌ಪ್ರೈಸಸ್‌ನಲ್ಲಿ ಪರೋಕ್ಷವಾಗಿ ಭಾಗವಹಿಸಲು ಕಿಂಗ್‌ಡನ್ ಹಿಂಡೆನ್‌ಬರ್ಗ್‌ಗೆ ಸಹಾಯ ಮಾಡಿದೆ ಮತ್ತು ಸಂಶೋಧನಾ ಸಂಸ್ಥೆಯೊಂದಿಗೆ ಲಾಭವನ್ನು ಹಂಚಿಕೊಂಡಿದೆ ಎಂದು ನಿಯಂತ್ರಕ ಹೇಳಿದರು. ಹಿಂಡೆನ್‌ಬರ್ಗ್ ತನ್ನ ಜನವರಿ 2023 ವರದಿಯನ್ನು ಸಮರ್ಥಿಸುವುದನ್ನು ಮುಂದುವರೆಸಿದೆ.

### ಕಲಾಪಗಳನ್ನು ನಡೆಸಲು ಸಹಾಯಕ್ಕೆ ಹಿರಿಯ ಸದಸ್ಯರ ಸಮಿತಿ ರಚನೆ

**ನವದೆಹಲಿ:** ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ಸದನದ ಕಲಾಪಗಳನ್ನು ನಡೆಸಲು ಸಹಾಯ ಮಾಡಲು ಹಿರಿಯ ಸದಸ್ಯರ ಸಮಿತಿಯನ್ನು ರಚಿಸಿದ್ದಾರೆ. ಸಮಿತಿಯಲ್ಲಿ ಜಗದಾಂಬಿಕಾ ಪಾಲ್, ಪಿ.ಸಿ. ಮೋಹನ್ ಸಂಧ್ಯಾ ರೈ, ದಿಲೀಪ್ ಸೈಕಿಯಾ, ಸೆಲ್ಜಾ, ಎ ರಾಜಾ, ಕಾಕೋಲಿ ಘೋಷ್ ದಸ್ತಿದರ್, ಕೃಷ್ಣ ಪ್ರಸಾದ್ ಮತ್ತು ಅವಧೇಶ್ ಪ್ರಸಾದ್ ಅವರನ್ನು ಬಿರ್ಲಾ ಹೆಸರಿಸಿದ್ದಾರೆ.

ಸಭಾಧ್ಯಕ್ಷರು ಪೀಠದಲ್ಲಿ ಇಲ್ಲದಿದ್ದಾಗ ಸದನದ ಕಲಾಪಗಳು ನಡೆಯಲು ಅಧ್ಯಕ್ಷರ ಸಮಿತಿಯ ಸದಸ್ಯರು ವಹಿಸುತ್ತಾರೆ. ಅವರು ಸ್ಪೀಕರ್‌ಗೆ ನೀಡಲಾದ ಎಲ್ಲಾ ಅಧಿಕಾರಗಳನ್ನು ಅನುಭವಿಸುತ್ತಾರೆ. ಇದರಲ್ಲಿ ಆಡಳಿತ, ವಿಪಕ್ಷದ ಸಂಸದರು ಇದ್ದಾರೆ.

### ಕೀನ್ಯಾದ ತೆರಿಗೆ ವಿರೋಧಿ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿ 39 ಸಾವು

**ಕೀನ್ಯಾ:** ಹೊಸ ತೆರಿಗೆ ಹೆಚ್ಚಳದ ವಿರುದ್ಧ ಕೀನ್ಯಾದಲ್ಲಿ ಜೂನ್ 18ರಿಂದ ಜುಲೈ 1ರವರೆಗೆ ನಡೆದ ಭಾರಿ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿ ಕನಿಷ್ಠ 39 ಮಂದಿ ಜೀವ ಕಳೆದುಕೊಂಡಿದ್ದಾರೆ ಎಂದು ಅಲ ಜಝೀರಾ ವರದಿ ಮಾಡಿದೆ. ಮೃತರ ಸಂಖ್ಯೆಯನ್ನು ಕೀನ್ಯಾದ ಮಾನವ ಹಕ್ಕುಗಳ ರಾಷ್ಟ್ರೀಯ ಆಯೋಗ(ಕೆಎನ್‌ಸಿಎಚ್‌ಆರ್) ಸೋಮವಾರ ಪ್ರಕಟಿಸಿದೆ. ಇದು ಈ ಹಿಂದೆ ಸರ್ಕಾರ ಪ್ರಕಟಿಸಿದ್ದ ಸಂಖ್ಯೆಗಿಂತ ದುಪ್ಪಟ್ಟಾಗಿದೆ.

ಈ ನಡುವೆ ಈ ವಾರ ಎರಡನೇ ಸುತ್ತಿನ ಪ್ರತಿಭಟನೆಯನ್ನು ಹೋರಾಟಗಾರರು ಹಮ್ಮಿಕೊಂಡಿದ್ದಾರೆ. ಇಲ್ಲಿನ ಸರ್ಕಾರ ತೆರಿಗ ನಿರ್ಧಾರವನ್ನು ಹಿಂಪಡೆಯಲಾಗಿದೆ. ಕೆಲವರನ್ನು ಒತ್ತಾಯಪೂರ್ವಕವಾಗಿ ಕರೆದೊಯ್ದು ಈಗ ಅವರು ನಾಪತ್ತೆಯಾಗಿರುವ 32 ಪ್ರಕರಣಗಳು ಸಹ ಕಂಡುಬಂದಿವೆ ಎಂದೂ ಅದು ಹೇಳಿದೆ. 627 ಮಂದಿಯನ್ನು ಬಂಧಿಸಲಾಗಿದೆ. ಇದಲ್ಲದೆ, ಬಹುತೇಕ ಯುವ ಪ್ರತಿಭಟನಾಕಾರರ ನೇತೃತ್ವದಲ್ಲಿ ನಡೆಯುತ್ತಿದ್ದ ಶಾಂತಿಯುತ ತೆರಿಗೆ ವಿರೋಧಿ ರ್‍ಯಾಲಿಗಳು ಕಳೆದ ಮಂಗಳವಾರ ವಿವಾದಾತ್ಮಕ ಕಾಯ್ದೆ ಅಂಗೀಕರಿಸಿದ ಬೆನ್ನಲ್ಲೇ ಹಿಂಸಾ ರೂಪಕ್ಕೆ ತಿರುಗಿತ್ತು. ಕೇಂದ್ರ ನೈರೋಬಿಯ ಸಂಸತ್ ಭವನದ ಆವರಣಕ್ಕೆ ನುಗ್ಗಿದ್ದ ಪ್ರತಿಭಟನಾಕಾರರು ಸಂಸತ್ತಿನ ಒಂದು ಭಾಗಕ್ಕೆ ಬೆಂಕಿ ಹಚ್ಚಿದ್ದರು. ಈ ಸಂದರ್ಭ ಗುಂಪು ಚದುರಿಸಲು ಪೊಲೀಸರು ಗೋಲಿ ಬಾರ್ ನಡೆಸಿದ್ದರು.

### ರಾಷ್ಟ್ರಪತಿ ಭಾಷಣದಲ್ಲಿ ರಾಮಮಂದಿರದ ಪ್ರಸ್ತಾಪವೇ ಇಲ್ಲ: ಎಸ್‌ಪಿ ಸಂಸದ

**ನವದೆಹಲಿ:** ರಾಷ್ಟ್ರಪತಿಯವರ 29 ಪುಟಗಳ ಭಾಷಣದಲ್ಲಿ ರಾಮ ಮಂದಿರ ಹಾಗೂ ಅಯೋಧ್ಯ ಬಗ್ಗೆ ಪ್ರಸ್ತಾಪವೇ ಇಲ್ಲ. ಶ್ರೀರಾಮನ ಜನ್ಮಸ್ಥಳದ ಬಗ್ಗೆ ಪ್ರಸ್ತಾಪಿಸದಿರುವುದು ಕಂಡು ಅಚ್ಚರಿಯಾಯಿತು' ಎಂದು ಫೈಜಾಬಾದ್ ಸಮಾಜವಾದಿ ಪಕ್ಷದ ಸಂಸದ ಅವಧೇಶ್ ಪ್ರಸಾದ್ ಹೇಳಿದ್ದಾರೆ.

ಲೋಕಸಭೆಯಲ್ಲಿ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯ ವೇಳೆ ಮಾತನಾಡಿದ ಅವರು, 'ಅಯೋಧ್ಯೆಯ ಬೀದಿಗಳಲ್ಲಿ ಕೊಳಚೆ ತುಂಬಿದ್ದು, ಅದನ್ನು ದಾಟಿ ರಾಮ ಮಂದಿರಕ್ಕೆ ತಲುಪಬೇಕಾದ ಪರಿಸ್ಥಿತಿಯಿದೆ' ಎಂದು ಅಸಮಾಧಾನ ಹೊರಹಾಕಿದ್ದಾರೆ. 'ಅಯೋಧ್ಯೆಯಲ್ಲಿ ವಿಮಾನ ನಿಲ್ದಾಣ ನಿರ್ಮಿಸುವ ಉದ್ದೇಶದಿಂದ ಬಡವರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಯಿತು. ಆದರೆ ಅವರಿಗೆ ಸಿಗಬೇಕಾದ ಪರಿಹಾರ ಇನ್ನೂ ಸಿಕ್ಕಿಲ್ಲ' ಎಂದಿದ್ದಾರೆ.

### ಆಗಸ್ಟ್ ಮಧ್ಯದಲ್ಲಿ ನೀಟ್-ಪಿಜಿ ಪರೀಕ್ಷೆ ನಡೆಯುವ ಸಾಧ್ಯತೆ

**ನವದೆಹಲಿ:** ವೈದ್ಯಕೀಯ ಕ್ಷೇತ್ರದ ಸ್ನಾತಕೋತ್ತರ ಕೋರ್ಸ್ ಪ್ರವೇಶಕ್ಕೆ ಅಗತ್ಯವಿರುವ ನೀಟ್-ಪಿಜಿ ಪರೀಕ್ಷೆ ಆಗಸ್ಟ್ ಮಧ್ಯದಲ್ಲಿ ನಡೆಯುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಪರಿಷ್ಕೃತ ದಿನಾಂಕವನ್ನು ಈ ವಾರ ಪ್ರಕಟಿಸುವ ನಿರೀಕ್ಷೆಯಿದೆ.



ಈ ಸಂಬಂಧ ಕೇಂದ್ರ ಗೃಹ ಸಚಿವಾಲಯದಲ್ಲಿ ಸಭೆ ನಡೆದಿದೆ. ಆರೋಗ್ಯ ಸಚಿವಾಲಯ, ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಪರೀಕ್ಷಾ ಮಂಡಳಿ (ಎನ್‌ಬಿಇಎಂಎಸ್), ಇದರ ತಾಂತ್ರಿಕ ಪಾಲುದಾರ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಮತ್ತು ಸೈಬರ್ ವಿಭಾಗದ ಅಧಿಕಾರಿಗಳು ಯಾವುದೇ ಲೋಪವಾಗದಂತೆ ಪರೀಕ್ಷೆ ನಡೆಸುವ ಕುರಿತು ಚರ್ಚಿಸಿದ್ದಾರೆ ಎಂದು ವರದಿಯಾಗಿದೆ.

ಮೇ 5ರಂದು ನಡೆದಿದ್ದ ನೀಟ್-ಯುಜಿ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಸೇರಿದಂತೆ ಹಲವು ಅಕ್ರಮಗಳು ನಡೆದಿವೆ ಎಂಬ ಕೂಗು ಕೇಳಿಬಂದಿತ್ತು. ಈ ವಿವಾದದ ಬೆನ್ನಲ್ಲೇ ಮುನ್ನೆಚ್ಚರಿಕಾ ಕ್ರಮವಾಗಿ ಜೂನ್ 23 ರಂದು ನಡೆಯಬೇಕಿದ್ದ, ನೀಟ್-ಪಿಜಿ ಪ್ರವೇಶ ಪರೀಕ್ಷೆಯನ್ನು ಕೇಂದ್ರ ಆರೋಗ್ಯ ಸಚಿವಾಲಯ ಮುಂದೂಡಿತ್ತು.






# ಆರ್‌ಸಿಬಿ ತಂಡಕ್ಕೆ ವಿರಾಟ್ ಕೊಹ್ಲಿ ಕ್ಯಾಪ್ಟನ್..

ಕಳೆದ 17 ಸೀಸನ್‌ಗಳಿಂದ ಚಾಂಪಿಯನ್ ಪಟ್ಟ ಅಲಂಕರಿಸುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಕನಸು ಮುಂದುವರೆದಿದೆ. ಪ್ರತಿ ಬಾರಿ ಈ ಸಲ ಕಪ್ ನಮ್ದೆ ಎಂಬ ಘೋಷವಾಕ್ಯದೊಂದಿಗೆ ಅಭಿಯಾನ ಆರಂಭಿಸುವ ಆರ್‌ಸಿಬಿ ಫೈನಲ್ ಪ್ರವೇಶಿಸದೇ 8 ವರ್ಷಗಳೇ ಕಳೆದಿವೆ.

ಅದರಲ್ಲೂ ಕಳೆದ ಸೀಸನ್‌ನಲ್ಲಿ ಆರ್‌ಸಿಬಿ 14 ಪಂದ್ಯಗಳಲ್ಲಿ ಗೆದ್ದಿದ್ದು ಕೇವಲ 7 ಮ್ಯಾಚ್ ಮಾತ್ರ. ಹೀಗಾಗಿ ಮುಂದಿನ ಸೀಸನ್‌ನಲ್ಲಿ ಆರ್‌ಸಿಬಿ ತಂಡದ ನಾಯಕತ್ವ ಬದಲಾಗುವುದು ಬಹುತೇಕ ಖಚಿತ ಎನ್ನಬಹುದು. ಏಕೆಂದರೆ ಆರ್‌ಸಿಬಿ ತಂಡದ ಪ್ರಸ್ತುತ ನಾಯಕ ಫಾಫ್ ಡುಪ್ಲೆಸಿಸ್‌ಗೆ ಈಗ 39 ವರ್ಷ. ಹೀಗಾಗಿ ಮುಂದಿನ ಸೀಸನ್‌ನಲ್ಲಿ ಆರ್‌ಸಿಬಿ ಪರ ಕಾಣಿಸಿಕೊಳ್ಳುವ ಸಾಧ್ಯತೆಯಿಲ್ಲ.

ಇತ್ತ ವಿರಾಟ್ ಕೊಹ್ಲಿ ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳುತ್ತಿದ್ದಂತೆ ಮತ್ತೆ ನಾಯಕತ್ವದ ಚರ್ಚೆಗಳು ಶುರುವಾಗಿದೆ. ಏಕೆಂದರೆ ಈ ಹಿಂದೆ ಟೀಮ್ ಇಂಡಿಯಾ ನಾಯಕತ್ವದ ಹೊರೆಯ ಕಾರಣ ವಿರಾಟ್ ಕೊಹ್ಲಿ ಆರ್‌ಸಿಬಿ ತಂಡದ ಕ್ಯಾಪ್ಟನ್ಸಿಗೆ ರಾಜೀನಾಮೆ ನೀಡಿದ್ದರು. ಅಂದರೆ ಭಾರತ ತಂಡವನ್ನು ಹಾಗೂ ಆರ್‌ಸಿಬಿಯನ್ನು ಮುನ್ನಡೆಸುತ್ತಿರುವುದು ಹೊರೆಯಾಗುತ್ತಿದೆ. ಹೀಗಾಗಿ ಲೀಗ್ ಕ್ರಿಕೆಟ್‌ನ ನಾಯಕತ್ವನ ಜವಾಬ್ದಾರಿಯಿಂದ ಕೆಳಗಿಳಿಯುತ್ತಿರುವುದಾಗಿ ಕೊಹ್ಲಿ ತಿಳಿಸಿದ್ದರು.

ಇದೀಗ ವಿರಾಟ್ ಕೊಹ್ಲಿ ಸಂಪೂರ್ಣ ಫ್ರೀಯಾಗಿದ್ದಾರೆ. ಟೀಮ್ ಇಂಡಿಯಾದ ಮೂರು ತಂಡಗಳ ನಾಯಕತ್ವವನ್ನು ತೊರೆದಿದ್ದಾರೆ. ಅಲ್ಲದೆ ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ಗೂ ವಿದಾಯ ಹೇಳಿದ್ದಾರೆ. ಅತ್ತ ಟಿ20 ಮಾದರಿಗೆ ನಿವೃತ್ತಿ ಘೋಷಿಸಿರುವ ಕಾರಣ, ವಿರಾಟ್ ಕೊಹ್ಲಿ ಆರ್‌ಸಿಬಿ ಪರ ಸಂಪೂರ್ಣ ತೊಡಗಿಸಿಕೊಳ್ಳಬಹುದು.

ಹೀಗಾಗಿ ವಿರಾಟ್ ಕೊಹ್ಲಿ ಮತ್ತೆ ಆರ್‌ಸಿಬಿ ತಂಡದ ಚುಕ್ಕಾಣಿ ಹಿಡಿಯಲಿದ್ದಾರೆ ಎನ್ನಲಾಗುತ್ತಿದೆ. ಅದರಂತೆ ಐಪಿಎಲ್ 2025 ರಿಂದ ಕಿಂಗ್ ಕೊಹ್ಲಿ ಮತ್ತೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಕ್ಯಾಪ್ಟನ್ ಆಗಿ ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚಿದೆ.

ಆರ್‌ಸಿಬಿ ತಂಡವನ್ನು 143 ಪಂದ್ಯಗಳಲ್ಲಿ ಮುನ್ನಡೆಸಿರುವ ವಿರಾಟ್ ಕೊಹ್ಲಿ 66 ಪಂದ್ಯಗಳಲ್ಲಿ ಜಯ ತಂದುಕೊಟ್ಟಿದ್ದಾರೆ. ಅಲ್ಲದೆ ಕಿಂಗ್ ಕೊಹ್ಲಿ ನಾಯಕತ್ವದಲ್ಲೇ ಆರ್‌ಸಿಬಿ 2016 ರಲ್ಲಿ ಫೈನಲ್‌ಗೆ ಪ್ರವೇಶಿಸಿದರೆ, 3 ಬಾರಿ ಪ್ಲೇಆಫ್ಸ್ ಆಡಿತ್ತು. ಹೀಗಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯು ಕಿಂಗ್ ಕೊಹ್ಲಿಗೆ ಮತ್ತೆ ನಾಯಕನ ಪಟ್ಟ ನೀಡುವ ಸಾಧ್ಯತೆಯಿದೆ.



# ಟೀಮ್ ಇಂಡಿಯಾದಿಂದ ಮೂವರು ಔಟ್

## ಸಂಜು ಸ್ಯಾಮ್ಸನ್, ಶಿವಂ ದುಬೆ ಹಾಗೂ ಯಶಸ್ವಿ ಜೈಸ್ವಾಲ್ ಮೊದಲೆರಡು ಪಂದ್ಯಗಳಿಗೆ ಅಲಭ್ಯ



ಭಾರತ ಮತ್ತು ಝಿಂಬಾಬ್ವೆ ನಡುವಣ ಟಿ20 ಸರಣಿಯು ಜುಲೈ 6 ರಿಂದ ಶುರುವಾಗಲಿದೆ. ಹರಾರೆಯಲ್ಲಿ ನಡೆಯಲಿರುವ 5 ಪಂದ್ಯಗಳ ಈ ಸರಣಿಯ ಮೊದಲೆರಡು ಪಂದ್ಯಗಳು ಜುಲೈ 6 ಮತ್ತು ಜುಲೈ 7 ರಂದು ನಡೆಯಲಿದೆ. ಇನ್ನು ಮೂರನೇ ಪಂದ್ಯವು ಜುಲೈ 10 ರಂದು ನಡೆದರೆ, ಕೊನೆಯ ಎರಡು ಪಂದ್ಯಗಳು ಜುಲೈ 13 ಮತ್ತು 14 ರಂದು ಜರುಗಲಿದೆ.

ಝಿಂಬಾಬ್ವೆ ವಿರುದ್ಧದ ಟಿ20 ಸರಣಿಗೆ ಆಯ್ಕೆಯಾಗಿದ್ದ ಸಂಜು ಸ್ಯಾಮ್ಸನ್, ಶಿವಂ ದುಬೆ ಹಾಗೂ ಯಶಸ್ವಿ ಜೈಸ್ವಾಲ್ ಮೊದಲೆರಡು ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ. ಈ ಮೂವರು ಆಟಗಾರರು ಟಿ20 ವಿಶ್ವಕಪ್ ತಂಡದ ಭಾಗವಾಗಿದ್ದರು. ಅಲ್ಲದೆ ಟಿ20 ವಿಶ್ವಕಪ್ ಬಳಿಕ ಟೀಮ್ ಇಂಡಿಯಾ ಆಟಗಾರರು ಭಾರತಕ್ಕೆ ಮರಳದ ಕಾರಣ ಇದೀಗ ಈ ಮೂವರನ್ನು ಝಿಂಬಾಬ್ವೆ ವಿರುದ್ಧದ ಮೊದಲೆರಡು ಪಂದ್ಯಗಳಿಂದ ಕೈ ಬಿಡಲಾಗಿದೆ.

**ಯುವ ಆಟಗಾರರು ಇನ್**

**ಟೀಮ್ ಇಂಡಿಯಾ ಭಾರತಕ್ಕೆ ಹಿಂತಿರುಗದಿರಲು ಕಾರಣವೇನು**

ಟಿ20 ವಿಶ್ವಕಪ್ ಮುಗಿದು ಎರಡು ದಿನಗಳು ಕಳೆದಿವೆ. ಇದಾಗ್ಯೂ ಭಾರತ ತಂಡದ ಆಟಗಾರರು ಇನ್ನೂ ಸಹ ತವರಿಗೆ ಹಿಂತಿರುಗಿಲ್ಲ. ಇದಕ್ಕೆ ಕಾರಣ ಬಾರ್ಬಡೋಸ್‌ನಲ್ಲಿ ಚಂಡಮಾರುತದೊಂದಿಗೆ ಭಾರೀ ಮಳೆಯಾಗುತ್ತಿರುವುದು. ಕೆರಿಬಿಯನ್ ದ್ವೀಪದಲ್ಲಿ ಭಾರೀ ಮಳೆಯಾಗುತ್ತಿದ್ದು, ಹೀಗಾಗಿ ವಿಮಾನಯಾನ ಸೇವೆಗಳು ಬಂದ್ ಆಗಿವೆ.

ಅತ್ತ ವಿಮಾನ ನಿಲ್ದಾಣ ಗಳು ಮುಚ್ಚರುವ ಕಾರಣ ಭಾರತೀಯ ಆಟಗಾರರಿಗೆ ತವರಿಗೆ ಮರಳಲು ಸಾಧ್ಯವಾಗಿಲ್ಲ.

ಹೀಗಾಗಿ ಝಿಂಬಾಬ್ವೆ ವಿರುದ್ಧದ ಸರಣಿಗೆ ಆಯ್ಕೆಯಾಗಿದ್ದ ಸಂಜು ಸ್ಯಾಮ್ಸನ್, ಶಿವಂ ದುಬೆ ಹಾಗೂ ಯಶಸ್ವಿ ಜೈಸ್ವಾಲ್ ಭಾರತ ಟಿ20 ತಂಡವನ್ನು ಕೂಡಿಕೊಳ್ಳುವುದು ತಡವಾಗಲಿದೆ. ಹೀಗಾಗಿ ಮೊದಲೆರಡು ಪಂದ್ಯಗಳಿಗೆ ಬದಲಿ ಆಟಗಾರರನ್ನು ಆಯ್ಕೆ ಮಾಡಲಾಗಿದೆ.

**ಬದಲಿ ಆಟಗಾರರು ಯಾರು**

ಝಿಂಬಾಬ್ವೆ ವಿರುದ್ಧದ ಮೊದಲೆರಡು ಪಂದ್ಯಗಳಿಗೆ ಬದಲಿ ಆಟಗಾರರಾಗಿ ಎಡಗೈ ದಾಂಡಿಗ ಸಾಯಿ ಸುದರ್ಶನ್, ವಿಕೆಟ್ ಕೀಪರ್ ಬ್ಯಾಟರ್ ಜಿತೇಶ್ ಶರ್ಮಾ ಹಾಗೂ ಹರ್ಷಿತ್ ರಾಣಾ ಆಯ್ಕೆಯಾಗಿದ್ದಾರೆ. ಅದರಂತೆ ಈ ಮೂವರು ಆಟಗಾರರು ಶೀಘ್ರದಲ್ಲೇ ಝಿಂಬಾಬ್ವೆಗೆ ತೆರಳಲಿದ್ದಾರೆ.

**ಝಿಂಬಾಬ್ವೆ ಸರಣಿಗೆ ಭಾರತ ಟಿ20 ತಂಡ:**

**ಮೊದಲೆರಡು ಪಂದ್ಯಗಳಿಗೆ:** ಶುಭ್‌ಮನ್ ಗಿಲ್ (ನಾಯಕ), ಸಾಯಿ ಸುದರ್ಶನ್, ರುತುರಾಜ್ ಗಾಯಕ್ವಾಡ್, ಅಭಿಷೇಕ್ ಶರ್ಮಾ, ರಿಂಕು ಸಿಂಗ್, ಜಿತೇಶ್ ಶರ್ಮಾ (ವಿಕೆಟ್ ಕೀಪರ್), ಧ್ರುವ್ ಜುರೆಲ್ (ವಿಕೆಟ್ ಕೀಪರ್), ರಿಯಾನ್ ಪರಾಗ್, ವಾಷಿಂಗ್ಟನ್ ಸುಂದರ್, ರವಿ ಬಿಷ್ಣೋಯ್, ಅವೇಶ್ ಖಾನ್, ಖಲೀಲ್ ಅಹ್ಮದ್, ಮುಖೇಶ್ ಕುಮಾರ್, ತುಷಾರ್ ದೇಶಪಾಂಡೆ , ಹರ್ಷಿತ್ ರಾಣಾ.

**ಕೊನೆಯ ಮೂರು ಪಂದ್ಯಗಳಿಗೆ:** ಶುಭ್‌ಮನ್ ಗಿಲ್ (ನಾಯಕ), ಜೈಸ್ವಾಲ್, ರುತುರಾಜ್, ಅಭಿಷೇಕ್ ಶರ್ಮಾ, ರಿಂಕು ಸಿಂಗ್, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಧ್ರುವ್ ಜುರೆಲ್ (ವಿಕೆಟ್ ಕೀಪರ್), ರಿಯಾನ್ ಪರಾಗ್, ವಾಷಿಂಗ್ಟನ್ ಸುಂದರ್, ರವಿ ಬಿಷ್ಣೋಯ್, ಅವೇಶ್ ಖಾನ್, ಖಲೀಲ್ ಅಹ್ಮದ್, ಮುಖೇಶ್ ಕುಮಾರ್, ತುಷಾರ್ ದೇಶಪಾಂಡೆ

# ರೋಹಿತ್ ಮನವಿಗೆ ಮನಸ್ಸು ಬದಲಿಸಿದ ರಾಹುಲ್



2023ರ ಏಕದಿನ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಟೀಮ್ ಇಂಡಿಯಾ 240 ರನ್ ಕಲೆಹಾಕಿತು. ಈ ಗುರಿಯನ್ನು ಬೆನ್ನತ್ತಿದ ಆಸ್ಟ್ರೇಲಿಯಾ ತಂಡವು 43 ಓವರ್‌ಗಳಲ್ಲಿ ಗುರಿ ಮುಟ್ಟುವ ಮೂಲಕ 6 ವಿಕೆಟ್‌ಗಳ ಜಯ ಸಾಧಿಸಿತ್ತು. ಈ ಸೋಲಿನ ಬೆನ್ನಲ್ಲೇ ರಾಹುಲ್ ದ್ರಾವಿಡ್ ಕೋಚ್ ಸ್ಥಾನದಿಂದ ಕೆಳಗಿಳಿಯಲು ನಿರ್ಧರಿಸಿದ್ದರು.

ನವೆಂಬರ್ 19, 2023 ಅಹಮದಾಬಾದ್‌ನಲ್ಲಿ ನಡೆದ ಏಕದಿನ ವಿಶ್ವಕಪ್ ಫೈನಲ್ ಮೂಲಕ ಟೀಮ್ ಇಂಡಿಯಾ ಕೋಚ್ ರಾಹುಲ್ ದ್ರಾವಿಡ್ ವಿದಾಯ ಹೇಳಲು ಸಜ್ಜಾಗಿದ್ದರು. ಆದರೆ ಫೈನಲ್ ಪಂದ್ಯದ ಫಲಿತಾಂಶ ಎಲ್ಲವನ್ನು ತಲೆಕೆಳಗಾಗಿಸಿತು. ಅತ್ತ ಅದಾಗಲೇ ಕೋಚ್ ಸ್ಥಾನದಿಂದ ಕೆಳಗಿಳಿಯಲು ನಿರ್ಧರಿಸಿದ್ದ ರಾಹುಲ್ ದ್ರಾವಿಡ್ ತಮ್ಮ ನಿರ್ಧಾರವನ್ನು ಬದಲಿಸಲು ಮುಂದಾಗಿರಲಿಲ್ಲ.

ಈ ವಿಷಯ ತಿಳಿಯುತ್ತಿದ್ದಂತೆ ರಾಹುಲ್ ದ್ರಾವಿಡ್ ಅವರಿಗೆ ಟೀಮ್ ಇಂಡಿಯಾ ನಾಯಕ ರೋಹಿತ್ ಶರ್ಮಾ ಕರೆ ಮಾಡಿದ್ದಾರೆ. ಅಲ್ಲದೆ ಮುಂಬರುವ ಟಿ20 ವಿಶ್ವಕಪ್‌ವರೆಗೆ ಕೋಚ್ ಆಗಿ ಇರುವಂತೆ ಮನವಿ ಮಾಡಿದ್ದಾರೆ. ಅಲ್ಲೆ ಅವರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ.

# ಪೋಸ್ಟ ಹಾಕಿದ ಪಾಂಡ್ಯ ಪತ್ನಿ



ಬಾರ್ಬಡೋಸ್‌ನಲ್ಲಿ ನಡೆದ ಟಿ-20 ವಿಶ್ವಕಪ್‌ನ ಫೈನಲ್‌ನಲ್ಲಿ ಭಾರತ ಐತಿಹಾಸಿಕ ಗೆಲುವು ದಾಖಲಿಸಿದೆ. ಈ ಗೆಲುವಿನಲ್ಲಿ ಹಾರ್ದಿಕ್ ಪಾಂಡ್ಯ ಪ್ರಮುಖ ಪಾತ್ರ ವಹಿಸಿದ್ದರು. ಆದರೆ ವಿಶ್ವಕಪ್ ಗೆಲುವಿನ ನಂತರ ಅವರ ಪತ್ನಿ ನತಾಶಾ ಅವರು ಹಾರ್ದಿಕ್‌ಗಾಗಿ ಒಂದೇ ಒಂದು ಪೋಸ್ಟ್ ಅನ್ನು ಸಾಮಾಜಿಕ ಮಾಧ್ಯಮದಲ್ಲಿ ಹಾಕದ ಕಾರಣ ಅಭಿಮಾನಿಗಳು ಅಸಮಾಧಾನಗೊಂಡಿದ್ದಾರೆ. ಈಗ ವಿಶ್ವಕಪ್ ಗೆದ್ದ ಬಳಿಕ ಇದೇ ಮೊದಲ ಬಾರಿಗೆ ನತಾಶಾ ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಅನ್ನು ಹಂಚಿಕೊಂಡಿದ್ದಾರೆ. ಈ ಪೋಸ್ಟ್ ಕೂಡ ಹಾರ್ದಿಕ್‌ಗೆ ಸಂಬಂಧಿಸಿದ್ದಲ್ಲ ಅನ್ನೋದು ಇಲ್ಲಿ ಗಮನಿಸಬೇಕಾದ ವಿಚಾರ. ಇದು ಅಭಿಮಾನಿಗಳ ಆಕ್ರೋಶಕ್ಕೆ ಕಾರಣ ಆಗಿದೆ. ಈ ಪೋಸ್ಟ್‌ನ ಕಾಮೆಂಟ್ ಬಾಕ್ಸ್‌ನಲ್ಲಿ, ಹಲವಾರು ಜನರು ಹತಾಶೆಯಿಂದ ವಿಚ್ಛೇದನದ ಬಗ್ಗೆ ಕೇಳಿದ್ದಾರೆ. 'ನೀವು ಹಾರ್ದಿಕ್ ಜೊತೆ ಇದ್ದೀರೋ ಇಲ್ಲವೋ ಹೇಳಿ' ಎಂದು ಪ್ರಶ್ನೆ ಮಾಡಿದ್ದಾರೆ.

# 17 ಆಟಗಾರರಿಗೆ 60 ರೂಮ್: ಇದುವೇ ಪಾಕಿಸ್ತಾನ್ ತಂಡದ ಸಾಧನೆ..!

ಟಿ20 ವಿಶ್ವಕಪ್‌ನ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಟೀಮ್ ಇಂಡಿಯಾ 176 ರನ್ ಕಲೆಹಾಕಿತು. ಈ ಗುರಿಯನ್ನು ಬೆನ್ನತ್ತಿದ ಸೌತ್ ಆಫ್ರಿಕಾ ತಂಡವು 169 ರನ್‌ಗಳಿಸಲಷ್ಟೇ ಶಕ್ತರಾಗಿದ್ದಾರೆ. ಈ ಮೂಲಕ ಟೀಮ್ ಇಂಡಿಯಾ 7 ರನ್‌ಗಳ ರೋಚಕ ಜಯ ಸಾಧಿಸಿದೆ. ಈ ಗೆಲುವಿನ ಬೆನ್ನಲ್ಲೇ ಪಾಕ್ ತಂಡದ ಮಾಜಿ ಆಟಗಾರರು ಬಾಬರ್ ಪಡೆಯ ವಿರುದ್ಧ ಆಕ್ರೋಶ ಹೊರಹಾಕುತ್ತಿದ್ದಾರೆ.

ಟಿ20 ವಿಶ್ವಕಪ್‌ನಲ್ಲಿ ಭಾರತ ತಂಡ ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಇತ್ತ ಫೈನಲ್ ಗೆಲುವಿನ ಬೆನ್ನಲ್ಲೇ ಟೀಮ್ ಇಂಡಿಯಾಗೆ ಅಭಿನಂದನೆಗಳ ಮಹಾಪೂರ ಹರಿದುಬಂದರೆ, ಅತ್ತ ಪಾಕಿಸ್ತಾನ್ ತಂಡ ಭಾರೀ ಟೀಕೆಗೆ ಗುರಿಯಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ ಟೂರ್ನಿ ಆರಂಭಕ್ಕೂ ಮುನ್ನ ಪಾಕಿಸ್ತಾನ್ ಪ್ರಶಸ್ತಿಯೊಂದಿಗೆ ಮರಳುವುದಾಗಿ ಕೊಚ್ಚಿಕೊಂಡಿದ್ದು.

ಪಾಕಿಸ್ತಾನ್ ತಂಡವು ವಿಶ್ವಕಪ್ ಟೂರ್ನಿಗಾಗಿ ತೆರಳುವ ನಡೆಸಿದ ಸುದ್ದಿಗೋಷ್ಠಿಯಲ್ಲಿ ನಾಯಕ ಬಾಬರ್ ಆಝಂ ಸೇರಿದಂತೆ ತಂಡದ ಪ್ರಮುಖ ಆಟಗಾರರು ಈ ಬಾರಿ ಕಪ್ ಗೆದ್ದೇ ಹಿಂತಿರುಗುತ್ತೇವೆ ಎಂದು ತಿಳಿಸಿದ್ದರು. ಕಳೆದ ಎರಡು ಟಿ20 ವಿಶ್ವಕಪ್‌ನಲ್ಲಿ ಸೆಮಿಫೈನಲ್ ಹಾಗೂ ಫೈನಲ್ ಆಡಿರುವ ಕಾರಣ ಈ ಸಲ ಕಪ್ ಗೆದ್ದೇ ಗೆಲ್ಲುತ್ತೇವೆ ಎಂದು ಬಾಬರ್ ಆಝಂ ಹೇಳಿದ್ದರು.




ಆದರೆ ಈ ಬಾರಿಯ ಟಿ20 ವಿಶ್ವಕಪ್‌ನಲ್ಲಿ ಪಾಕಿಸ್ತಾನ್ ತಂಡವು ಅತ್ಯಂತ ಕಳಪೆ ಪ್ರದರ್ಶನ ನೀಡಿತ್ತು. ಮೊದಲ ಸುತ್ತಿನಲ್ಲಿ ಯುಎಸ್‌ಎ ವಿರುದ್ಧ ಸೋತಿದ್ದ ಪಾಕ್ ಪಡೆ, ಆ ಬಳಿಕ ಟೀಮ್ ಇಂಡಿಯಾ ವಿರುದ್ಧ ಮಂಡಿಯೂರಿತು. ಅಲ್ಲದೆ ಮೊದಲ ಸುತ್ತಿನಲ್ಲೇ ನಿರ್ಗಮಿಸುವ ಮೂಲಕ ಭಾರೀ ಮುಖಭಂಗಕ್ಕೆ ಒಳಗಾಗಿತ್ತು.

ಇದೀಗ ಟೀಮ್ ಇಂಡಿಯಾ ವಿಶ್ವಕಪ್ ಗೆಲ್ಲುತ್ತಿದ್ದಂತೆ, ಪಾಕ್ ತಂಡದ ಮೇಲೆ ಟೀಕಾಸ್ತ್ರಗಳ ಪ್ರಯೋಗ ಮತ್ತೆ ಶುರುವಾಗಿದೆ. ಅದರಲ್ಲೂ ಪಾಕ್ ತಂಡದ ಮಾಜಿ ಆಟಗಾರ ಅತೀಕ್-ಉಝ್-ಝಮಾನ್ ಭಾರತ ತಂಡದ ಪ್ರದರ್ಶನವನ್ನು ಶ್ಲಾಘಿಸಿ, ಪಾಕಿಸ್ತಾನ್ ವಿರುದ್ಧ ಕಿಡಿಕಾರಿದ್ದಾರೆ.

# ಬಾಲಿವುಡ್‌ನಲ್ಲಿ ಗೋಲ್ಡನ್ ಚಾನ್ಸ್ ಗಿಟ್ಟಿಸಿಕೊಂಡ ಮೃಣಾಲ್



'ಸೀತಾರಾಮಂ' ನಟಿ ಮೃಣಾಲ್ ಠಾಕೂರ್ ಇದೀಗ ಬಂಪರ್ ಅವಕಾಶಗಳು ಅರಸಿ ಬರುತ್ತಿವೆ. ಟಾಪ್ ನಟಿಯರಿಗೆ ಠಕ್ಕರ್ ಕೊಟ್ಟು ಮೃಣಾಲ್ ಸ್ಟಾರ್ ನಟನ ಸಿನಿಮಾಗೆ ಆಯ್ಕೆಯಾಗಿದ್ದಾರೆ. ಬಹುನಿರೀಕ್ಷಿತ ಸನ್ ಆಫ್ ಸರ್ದಾರ್ 2 ಚಿತ್ರದಲ್ಲಿ ಹೀರೋಯಿನ್ ಆಗಿದ್ದಾರೆ.

ಅಜಯ್ ದೇವಗನ್, ಸಂಜಯ್ ದತ್ ನಟನೆಯ 'ಸನ್ ಆಫ್ ಸರ್ದಾರ್ ಪಾರ್ಟ್ 2'ನಲ್ಲಿ ಮೃಣಾಲ್ ಲೀಡ್ ರೋಲ್‌ನಲ್ಲಿ ನಟಿಸುವ ಅವಕಾಶ ಸಿಕ್ಕಿದೆ. ಅವರ ಪಾತ್ರಕ್ಕೆ ಪ್ರಾಮುಖ್ಯತೆ ಇದ್ದು, ನಟನೆಗೆ ಸ್ಕೋಪ್ ಇದೆ. 2012ರಲ್ಲಿ 'ಸನ್ ಆಫ್ ಸರ್ದಾರ್' ಎಂಬ ಸಿನಿಮಾ ಬಂದಿತ್ತು. ಇದರ ಸೀಕ್ವೆಲ್ ತರಲು ತಂಡ ಈಗ ಪ್ಲ್ಯಾನ್ ಮಾಡಿದೆ. ಸದ್ಯದಲ್ಲೇ ವಿದೇಶದಲ್ಲಿ ಶೂಟಿಂಗ್ ಶುರುವಾಗಲಿದೆ.

**ಮೃಣಾಲ್ ಫ್ಯಾನ್ಸ್ ಥ್ರಿಲ್**

ಅಂದಹಾಗೆ, ಜೂನ್ 27ರಂದು ತೆರೆಕಂಡ 'ಕಲ್ಕಿ 2898 ಎಡಿ' ಸಿನಿಮಾದಲ್ಲಿ ಮೃಣಾಲ್ ನಟಿಸಿದ್ದಾರೆ. ಅತಿಥಿ ಪಾತ್ರವಾಗಿದ್ರೂ, ಕೆಲವೇ ನಿಮಿಷ ನಟಿಸಿದರು ಕೂಡ ಮೃಣಾಲ್ ನಟನೆಯ ಮೆಚ್ಚುಗೆ ವ್ಯಕ್ತವಾಗಿದೆ. ಈ ಬೆನ್ನಲ್ಲೇ ಬಾಲಿವುಡ್‌ನಲ್ಲಿ ನಟಿ ಬಂಪರ್ ಆಫರ್ ಗಿಟ್ಟಿಸಿಕೊಂಡಿರೋದು ಕೇಳಿ ಫ್ಯಾನ್ಸ್ ಥ್ರಿಲ್ ಆಗಿದ್ದಾರೆ.

ಇದೊಂದೇ ಸಿನಿಮಾ ಅಲ್ಲ, ಸಂಜಯ್ ಲೀಲಾ ಬನ್ಸಾಲಿ ನಿರ್ಮಾಣದ ಸಿನಿಮಾ ಸೇರಿದಂತೆ ತೆಲುಗಿನಲ್ಲೂ ಸ್ಟಾರ್ ನಟರ ಜೊತೆ ಡ್ಯುಯೆಟ್ ಹಾಡುವ ಚಾನ್ಸ್ ನಟಿಗೆ ಸಿಕ್ಕಿದೆ.



# ಚೊಚ್ಚಲ ಮಗುವಿನ ನಿರೀಕ್ಷೆಯಲ್ಲಿ ಹರ್ಷಿಕಾ

ಕನ್ನಡದ ಚಿತ್ರರಂಗದ ಸ್ಟಾರ್ ದಂಪತಿ ಕೊಡಗಿನ ಬೆಡಗಿ ಹರ್ಷಿಕಾ ಪೂಣಚ್ಚ ಮತ್ತು ಭುವನ್ ಪೊನ್ನಣ್ಣ ಇದೀಗ ಚೊಚ್ಚಲ ಮಗುವಿನ ನಿರೀಕ್ಷೆಯಲ್ಲಿದ್ದಾರೆ. ಕೊಡವ ಸಂಪ್ರದಾಯದ ಉಡುಗೆಯಲ್ಲೇ ವಿಭಿನ್ನವಾಗಿ ಫೋಟೋಶೂಟ್ ಮಾಡಿಸಿರುವ ದಂಪತಿ ಮಗುವಿನ ಆಗಮನದ ಸುದ್ದಿ ಘೋಷಿಸಿದ್ದಾರೆ.

**ಯೂನಿಕ್ ಕಾನ್ಸೆಪ್ಟ್ ಪ್ಲ್ಯಾನ್**

ಇದೇ ಅಕ್ಟೋಬರ್‌ನಲ್ಲಿ ಮಗು ಬರಲಿರುವ ಸಂತಸದಲ್ಲಿದ್ದಾರೆ ಹರ್ಷಿಕಾ ದಂಪತಿ. ಬಹುಕಾಲದ ಸ್ನೇಹಿತರಾಗಿದ್ದ ಭುವನ್ ಮತ್ತು ಹರ್ಷಿಕಾ ಕಳೆದ ವರ್ಷ ಆಗಸ್ಟ್ 24ರಂದು ಕೊಡಗಿನಲ್ಲೇ ಅವರ ಸಂಪ್ರದಾಯದ ಪ್ರಕಾರ ಮದುವೆಯಾಗಿದ್ದರು. ಇದೀಗ ವರ್ಷದೊಳಗೆ ಮಗು ಆಗಮಿಸುವ ಸುದ್ದಿ ಕೊಟ್ಟಿದ್ದಾರೆ.

ಕೊಡವ ಸಂಪ್ರದಾಯದ ಹಳ್ಳಿ ಮನೆಯಲ್ಲಿ ಕ್ಲಾಸಿಕ್ ಶೈಲಿಯಲ್ಲಿ ದಂಪತಿ ಫೋಟೋಶೂಟ್ ಮಾಡಿಸಿದ್ದಾರೆ. ಇಡೀ ಕುಟುಂಬ ಅದೇ ಶೈಲಿಯಲ್ಲೇ ಕಂಗೊಳಿಸಿದೆ. ಕಪ್ಪು ಮಿಶ್ರಿತ ಬ್ರೌನ್ ಕಲರ್ ಕೊಡವ ಶೈಲಿಯ ಸೀರೆ ಧರಿಸಿರುವ ಹರ್ಷಿಕಾ ಬೇಬಿ ಬಂಪ್ ಪ್ರದರ್ಶಿಸಿದ್ದಾರೆ. ಇನ್ನು ತಂದೆಯಾಗುತ್ತಿರುವ ಭುವನ್ ಪೊನ್ನಣ್ಣ ಕೊಡವ ಸಂಪ್ರದಾಯದ ಕಪ್ಪು ಕೋಟ್ ಧರಿಸಿ-ತಲೆಗೆ ಪೇಟಾ ಧರಿಸಿ ಕೈಯಲ್ಲಿ ಬಂದೂಕು ಹಿಡಿದು ಗರ್ಭಿಣಿ ಪತ್ನಿ ಜೊತೆ ನಿಂತಿದ್ದಾರೆ.

ಮದುವೆ ಬಳಿಕ ಹರ್ಷಿಕಾ ನಟನೆಯಿಂದ ಬ್ರೇಕ್ ಪಡೆದುಕೊಂಡು ಸಂಸಾರದ ಕಡೆ ಗಮನ ಕೊಟ್ಟಿದ್ದಾರೆ. ಮಗು ಜನಿಸಿದ ಬಳಿಕ ಮತ್ತೆ ಚಿತ್ರರಂಗದಲ್ಲಿ ಆಕ್ಟೀವ್ ಆಗುವ ನಿರೀಕ್ಷೆಯಲ್ಲಿದ್ದಾರೆ. ಒಂದೇ ಊರು ಒಂದೇ ಸಂಪ್ರದಾಯದಲ್ಲಿ ಬೆಳೆದು ಬಂದವರು ಹರ್ಷಿಕಾ ಹಾಗೂ ಭುವನ್ ದಂಪತಿ. ಸ್ಯಾಂಡಲ್‌ವುಡ್‌ನ ಈ ತಾರಾಜೋಡಿ ಸದ್ಯಕ್ಕೆ ತಮ್ಮ ಜೀವನಕ್ಕೆ ಹೊಸ ಸದಸ್ಯನ ಆಗಮನದ ಖುಷಿಯಲ್ಲಿದೆ.

ಫ್ಯಾಶನ್ ಕ್ಷೇತ್ರದಲ್ಲಿ ಹೆಚ್ಚಾಗಿ ಗುರುತಿಸಿ ಕೊಂಡಿರುವ ಭುವನ್ ಮತ್ತು ಹರ್ಷಿಕಾ ಜೋಡಿ ಇದೀಗ ಪ್ರೆಗ್ನೆನ್ಸಿ ರಿವೀಲ್ ಫೋಟೋಶೂಟ್‌ನಲ್ಲೂ ಯೂನಿಕ್ ಕಾನ್ಸೆಪ್ಟ್ ಪ್ಲ್ಯಾನ್ ಮಾಡಿದ್ದು ವಿಶೇಷ. ಇಲ್ಲಿ ಕೊಡವರ ತುಂಬು ಕುಟುಂಬದ ಶೈಲಿಯನ್ನ ಅನಾವರಣ ಮಾಡಿದ್ದಾರೆ ದಂಪತಿ.

ಕುಟುಂಬಸ್ಥರೆಲ್ಲರೂ ಸಾಂಪ್ರದಾಯಿಕ ಉಡುಗೆಯಲ್ಲಿ ನಿಂತು ಗರ್ಭಿಣಿ ಮನೆ ಸೊಸೆಯನ್ನ ಪರಿಚಯಿಸುವ ಶೈಲಿಯ ವಿಡಿಯೋ ಈಗ ನೋಡುಗರ ಗಮನ ಸೆಳೆಯುತ್ತದೆ.

# ಒಂದೇ ಸಿನಿಮಾದಲ್ಲಿ ಗಣೇಶ್, ರಮೇಶ್



ಸ್ಯಾಂಡಲ್‌ವುಡ್ ನಟ ಗಣೇಶ್ ಜು.2 ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಇದೇ ಖುಷಿಯಲ್ಲಿ ಹೊಸ ಸಿನಿಮಾ ಘೋಷಿಸಿದ್ದಾರೆ. ಈ ಮೂಲಕ ಗೋಲ್ಡನ್ ಸ್ಟಾರ್ ಗಣೇಶ್ ಅಭಿಮಾನಿಗಳಿಗೆ ಸಿಹಿಸುದ್ದಿ ಕೊಟ್ಟಿದ್ದಾರೆ.

ಯಂಗ್ ಎನರ್ಜಿಟಿಕ್ ನಟ ಕಮ್ ನಿರ್ಮಾಪಕ ರಮೇಶ್ ಅರವಿಂದ್ ಜೊತೆ ಹೊಸ ಚಿತ್ರಕ್ಕಾಗಿ ಗಣೇಶ್ ಕೈಜೋಡಿಸಿದ್ದಾರೆ. ಇದೀಗ ನಟ ರಮೇಶ್ ಮತ್ತು ಗಣೇಶ್ ಅವರ ಟೀನೇಜ್ ದಿನಗಳ ಫೋಟೋ ಪೋಸ್ಟರ್‌ನಲ್ಲಿದ್ದು, ರೆಟ್ರೋ ಲುಕ್‌ನಲ್ಲಿ ತೋರಿಸಲಾಗಿದೆ. ಸಿನಿಮಾದ ಮೊದಲ ಲುಕ್ ಆ.16ರಂದು ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ತಿಳಿಸಿದೆ. ಅಂದಹಾಗೆ, ಇದೇ ಮೊದಲ ಬಾರಿಗೆ ಗೋಲ್ಡನ್ ಸ್ಟಾರ್ ಗಣೇಶ್ ಮತ್ತು ರಮೇಶ್ ಅರವಿಂದ್ ಒಂದೇ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಇವರಿಗೆ ವಿಖ್ಯಾತ್ ಎ.ಆರ್ ಆಕ್ಷನ್ ಕಟ್ ಹೇಳ್ತಿದ್ದಾರೆ. ಚಿತ್ರವನ್ನು ಸತ್ಯ ಎಂಬುವವರು ನಿರ್ಮಾಣ ಮಾಡಿದ್ದಾರೆ. ಗಣೇಶ್ ಜೊತೆ ಈ ವರ್ಷ ಬರ್ತ್‌ಡೇ ಆಚರಿಸುವ ಭಾಗ್ಯ ಇಲ್ಲ ಎಂದು ಬೇಸರದಲ್ಲಿದ್ದ ಫ್ಯಾನ್ಸ್‌ಗೆ ಈ ಸಿನಿಮಾದ ಅಪ್‌ಡೇಟ್ ಮೂಲಕ ಗುಡ್ ನ್ಯೂಸ್ ಕೊಟ್ಟಿದ್ದಾರೆ.

# ಯೂಟ್ಯೂಬರ್ ಜೊತೆ ಸುನೈನಾ ನಿಶ್ಚಿತಾರ್ಥ



ಕನ್ನಡದ 'ಗಂಗೆ ಬಾರೆ ತುಂಗೆ ಬಾರೆ' ಸಿನಿಮಾದ ನಾಯಕಿ ಸುನೈನಾ ಇದೀಗ ಖಾಸಗಿ ಬದುಕಿನ ವಿಚಾರವಾಗಿ ಸುದ್ದಿಯಾಗ್ತಿದ್ದಾರೆ. ದುಬೈ ಮೂಲದ ಯೂಟ್ಯೂಬರ್ ಖಲೀದ್ ಜೊತೆ ಸುನೈನಾ ಗುಟ್ಟಾಗಿ ನಿಶ್ಚಿತಾರ್ಥ ಮಾಡಿಕೊಂಡಿದ್ದಾರೆ ಎಂದು ಸೋಷಿಯಲ್ ಮೀಡಿಯಾದಲ್ಲಿ ಸುದ್ದಿ ಹರಿದಾಡುತ್ತಿದ್ದಾರೆ.

ಸೋಷಿಯಲ್ ಮೀಡಿಯಾ ಸ್ಟಾರ್ ಆಗಿ ಗುರುತಿಸಿಕೊಂಡಿರುವ ಖಲೀದ್ ಅಲ್ ಅಮೇರಿ ಜೊತೆ ಜುಲೈ 1ರಂದು ಸುನೈನಾ ನಿಶ್ಚಿತಾರ್ಥ ನೆರವೇರಿದೆ ಎನ್ನಲಾಗಿದೆ. ಹೀಗೊಂದು ಸುದ್ದಿ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಮೊದಲ ಪತ್ನಿ ಸಲಾಮಾ ಜೊತೆ ಡಿವೋರ್ಸ್ ಆಗಿರೋದಾಗಿ ಖಲೀದ್ ಇತ್ತೀಚೆಗೆ ರಿವೀಲ್ ಮಾಡಿದ್ದರು. ಈ ಬೆನ್ನಲ್ಲೇ ಖಲೀದ್ 2ನೇ ಮದುವೆ ಬಗ್ಗೆ ವಿಚಾರ ಹರಿದಾಡುತ್ತಿದೆ. ಇನ್ನೂ ಕಳೆದ ಜೂನ್‌ನಲ್ಲಿ ನಟಿ ಸುನೈನಾ ಪೋಸ್ಟ್ ಒಂದನ್ನು ಮಾಡಿದ್ದರು. ನಟಿ ಪುರುಷನೊಬ್ಬನ ಕೈ ಹಿಡಿದಿದ್ದಾರೆ. ಈ ಫೋಟೋಗೆ ಬೀಗದ ಚಿತ್ರದ ಎಮೋಜಿ ಹಾಕಿದ್ದರು. ಎಂಗೇಜ್ ಆಗಿರೋದಾಗಿ ನಟಿ ಪರೋಕ್ಷವಾಗಿ ತಿಳಿಸಿದ್ದರು. ನಟಿಯ ಪೋಸ್ಟ್‌ಗೆ ಖಲೀದ್ ಅವರು ಲೈಕ್ ಮಾಡಿದ್ದರು. ಈಗ ಖಲೀದ್ ಕೂಡ ಇದೇ ರೀತಿಯ ಫೋಟೋ ಹಾಕಿದ್ದಾರೆ. ಈ ಮೂಲಕ ಇಬ್ಬರ ನಿಶ್ಚಿತಾರ್ಥ ಸುದ್ದಿ ಹರಿದಾಡುತ್ತಿದೆ. ಇದಕ್ಕೆ ನಟಿ ಸ್ಪಷ್ಟನೆ ಕೊಡ್ತಾರಾ ಕಾಯಬೇಕಿದೆ.

# ಫ್ಯಾನ್ಸ್‌ಗೆ ನಭಾ ನಟೇಶ್ ಸಿಹಿಸುದ್ದಿ



ಕನ್ನಡದ 'ವಜ್ರಕಾಯ' ಬೆಡಗಿ ನಭಾ ನಟೇಶ್ ತೆಲುಗು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಡಾರ್ಲಿಂಗ್ ಎನ್ನುತ್ತಾ ಅಭಿಮಾನಿಗಳಿಗೆ ಸಿಹಿಸುದ್ದಿ ಕೊಟ್ಟಿದ್ದಾರೆ. ಆಕ್ಸಿಡೆಂಟ್‌ನಿಂದ ಚೇತರಿಸಿಕೊಂಡ ಬಳಿಕ ಹೊಸ ಚಿತ್ರದ ಮೂಲಕ ಬೆಳ್ಳಿಪರದೆಯಲ್ಲಿ ಮಿಂಚಲು ನಟಿ ರೆಡಿಯಾಗಿದ್ದಾರೆ.

ನಟ ಪ್ರಿಯಾದರ್ಶಿಗೆ ನಾಯಕಿಯಾಗಿ ನಭಾ ಡಾರ್ಲಿಂಗ್ ಎಂಬ ಸಿನಿಮಾ ಮಾಡಿದ್ದಾರೆ. ಸದ್ಯ ಚಿತ್ರದ ಪೋಸ್ಟರ್ ಲುಕ್, ಪ್ರೋಮೋ ಝಲಕ್‌ನಿಂದ ಡಾರ್ಲಿಂಗ್ ಸಿನಿಮಾ ಗಮನ ಸೆಳೆಯುತ್ತಿದೆ. ವಿಭಿನ್ನ ಪಾತ್ರದ ಮೂಲಕ ನಟಿ ಮತ್ತೆ ಕಮ್ ಬ್ಯಾಕ್ ಮಾಡಿದ್ದಾರೆ. ಈ ಚಿತ್ರವನ್ನು 'ಹನುಮಾನ್' ಚಿತ್ರದ ನಿರ್ಮಾಪಕ ನಿರಂಜನ್ ರೆಡ್ಡಿ ನಿರ್ಮಾಣ ಮಾಡಿದ್ದಾರೆ.

ಇದೊಂದೇ ಸಿನಿಮಾ ಅಲ್ಲ, 'ಸ್ವಯಂಭು' ಎಂಬ ಪ್ಯಾನ್ ಇಂಡಿಯಾ ಚಿತ್ರ ಕೂಡ ನಭಾ ಕೈಯಲ್ಲಿದೆ. ಈ ಸಿನಿಮಾದ ಕೆಲಸ ಕೂಡ ನಡೆಯುತ್ತಿದೆ. ನಿಖಿಲ್ ಸಿದ್ಧಾರ್ಥ್ ನಾಯಕಿಯಾಗಿ ನಭಾ ನಟಿಸಿದ್ದಾರೆ. ಅಂದಹಾಗೆ, ಕನ್ನಡದ 'ವಜ್ರಕಾಯ' ಚಿತ್ರದ ಮೂಲಕ ನಭಾ ಪರಿಚಿತರಾದರು. ಶಿವಣ್ಣಗೆ ಹೀರೋಯಿನ್ ಜನಪ್ರಿಯತೆ ಗಳಿಸಿದರು. ಲೀ, ಸಾಹೇಬ ಸಿನಿಮಾದ ಬಳಿಕ ತೆಲುಗಿನಲ್ಲಿ ಬ್ಯುಸಿಯಾದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA,
No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966